ಚಳ್ಳಕೆರೆ ತಾಲ್ಲೂಕಿನ ಸ್ಥಳನಾಮಗಳ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ನೋಂದಣಿ ಸಂಖ್ಯೆ: ೧೬೦೧೦೨೦೩೦೦೦೪

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೬-೧೭

ಚಳ್ಳಕೆರೆ ತಾಲ್ಲೂಕಿನ ಸ್ಥಳನಾಮಗಳ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ನೋಂದಣಿ ಸಂಖ್ಯೆ: ೧೬೦೧೦೨೦೩೦೦೦೪

ಭಾಷಾ ನಿಕಾಯ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

೨೦೧೬-೧೭

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ
ಅಧ್ಯಯನದ ಉದ್ದೇಶ
ವ್ಯಾಪ್ತಿ
ವಿಧಾನ
ಸ್ವರೂಪ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ಮಾನವನ ಹುಟ್ಟು ಮತ್ತು ಜೀವನ ವಿಕಾಸ ಕ್ರಮ ಈಗಲೂ ಸೋಜಿಗವನ್ನುಂಟು ಮಾಡುತ್ತದೆ. ಹುಟ್ಟಿದ ಮೊದಲ ಹಂತದಲ್ಲಿ ಗೆಡ್ಡೆ, ಗೆಣಸು, ಹಣ್ಣು, ಹಂಪಲು, ಮಾಂಸ ಇವು ಮಾನವನ ಮುಖ್ಯ ಆಹಾರಗಳಾಗಿದ್ದವು. ಮರದ ಪೊಟರೆ, ಗುಹೆ, ತಪ್ಪಲು ಪ್ರದೇಶ ಒಟ್ಟಾರೆ ಸಾಟು ಇದ್ದ ಕಡೆಗಳಲ್ಲಿ ನೆಲೆ ನಿಲ್ಲುವಂತಾಯಿತು. ತರುವಾಯ ನಾಗರಿಕರಾದರು. ಕೆಲವು ಹಂತಗಳಲ್ಲಿ ಅಲೆಮಾರಿತನವನ್ನು ತೊರೆದು ನೆಲೆಸಲು ಆರಂಭಿಸಿದರು. ಈ ನಿಲ್ಲುವಿಕೆಯು ಪ್ರಾಥಮಿಕ ಒಂದೊಂದು ಗುಂಪಿನ ಮಾದರಿಯಲ್ಲಿತ್ತು. ಮುಂದೆ ಹಲವಾರು ಸಮುದಾಯಗಳು ಒಟ್ಟಿಗೆ ಬದುಕುವುದನ್ನು ಆರಂಭಿಸಿದರು. ಈ ಹಂತವನ್ನು ಸಮುದಾಯಗಳು ನೆಲೆಸುವಿಕೆಯ ಗ್ರಾಮ ಕಲ್ಪನೆಯ ಪೂರ್ವ ಸ್ಥಿತಿಯೆಂದು ತಿಳಿಯಬಹುದು. ಅದರಂತೆ ಆಯಾ ಭೌಗೋಳಿಕ ಪರಿಸರದಲ್ಲಿ ವಾಸಿಸುವ ಸಮುದಾಯಗಳ ನೆಲೆಗಳು ಆರಂಭವಾದವು. ಈ ನೆಲೆಗಳಿಗೆ ಗುರುತಿಸುವ ಸಲುವಾಗಿ ಒಂದು ಹೆಸರಿನ ಅಗತ್ಯ ತೋರಿಬಂದಿತು. ಈ ಅಗತ್ಯವೇ ನೆಲೆಗಳಿಗೆ ಹೆಸರಿಸುವ ಗ್ರಾಮ. ಸ್ಥಳನಾಮಗಳು ಆರಂಭವಾದುದರ ಕುರುಹು ಎನ್ನಬಹುದು. ಆಯಾ ಪ್ರದೇಶಿಕ ಮಟ್ಟದಲ್ಲಿ ನೆಲೆಸುವ ಸಮುದಾಯಗಳು ಆರಂಭದಲ್ಲಿ ಪ್ರಾಕೃತಿಕ ಪರಿಸರದ ಚಹರೆಯೊಂದಿಗೆ ತಮ್ಮ ನೆಲೆಗಳಿಗೆ ಹೆಸರುಗಳನ್ನು ಕರೆದುಕೊಂಡರು. ಬೆಟ್ಟ, ಗುಡ್ಡ, ಗಿಡ, ಮರ, ಕಲ್ಲು, ಮಣ್ಣು ಇವುಗಳ ಗಾಢ ಸಂಬಂಧವು ಹೆಸರುಗಳಿಗೆ ಪ್ರೇರೇಪಿಸಿರಬೇಕು. ಹೆಚ್ಚಾಗಿ ಸಮುದಾಯಗಳು ವಾಸಿಸುತ್ತಿದ್ದುದು ಬೆಟ್ಟಗಳ ಅಂಚಿನಲ್ಲಿ, ದಿನ್ನೆ ಪ್ರದೇಶಗಳಲ್ಲಿ ಮತ್ತು ತಮಗೆ ಅಗತ್ಯವಾಗಿ ಬೇಕಾದಂತಹ ನೀರಿನ ತಾಣಗಳಲ್ಲಿ, ಜಗತ್ತಿನ ಬಹುತೇಕ ಪ್ರಾಚೀನ ನಾಗರಿಕತೆಗಳು ಆರಂಭವಾದದ್ದು ನದಿದಂಡೆಯ ಮೇಲೆ ಎಂಬುದನ್ನು ಗಮನಿಸಿದರೆ ಸಮುದಾಯಗಳ ನೆಲೆಸುವಿಕೆಯ ಆಯ್ಕೆಯು ಸ್ಪಷ್ಟವಾಗಿ ಗೋಚರಿಸುತ್ತದೆ. ಅಂತೆಯೆ ಪಶುಪಾಲನೆ ಮತ್ತು ಕುರಿಸಾಕಣಿಕೆಯು ಬೆಟ್ಟ ಗುಡ್ಡಗಳಲ್ಲಿ ಬೆಟ್ಟದ ಬದಿಯಲ್ಲಿ ಅನುಕೂಲಕರವಾಗಿತ್ತು. ಈ ವೃತ್ತಿಯೊಂದಿಗೆ ತಮ್ಮ ವಾಸದ ನೆಲೆಗಳನ್ನು

ಅಲ್ಲಲ್ಲಿಯೇ ನಿರ್ಮಿಸಿಕೊಂಡರು. ಈ ಕಾರಣದಿಂದಾಗಿ ಪ್ರಕೃತಿಯ ಗಾಢ ಸಂಬಂಧದೊಂದಿಗೆ ತಳಕು ಹಾಕಿಕೊಂಡ ಮಾನವರು ಆರಂಭಿಕ ಹಂತದಲ್ಲಿ ಪ್ರಕೃತಿನಿಷ್ಠ ಗ್ರಾಮನಾಮಗಳ ಉದಯಕ್ಕೆ ನಾಂದಿಯಾದರು. ಹೀಗೆ ಗ್ರಾಮಸಮಾಜಗಳು ಆರಂಭಗೊಂಡವು.

ಪ್ರಕೃತಿ ನಿಷ್ಟ ಗ್ರಾಮಸಮಾಜಗಳ ಎರಡನೇ ಹಂತವು ಭೌಗೋಳಿಕ ಚಹರೆಗಳಿಂದ ಭಿನ್ನವಾಗಿ, ಸಮುದಾಯ ನಿಷ್ಠವಾಗಿರುವುದು ತಿಳಿದುಬರುತ್ತದೆ. ಅಂದರೆ ಗ್ರಾಮಗಳಿಗೆ, ಸ್ಥಳಗಳಿಗೆ ಹೆಸರಿಡುವಾಗ ತಮ್ಮ ಜನಾಂಗದ ಅಥವಾ ತಮ್ಮ ಜನಾಂಗದ ವ್ಯಕ್ತಿಗಳ, ಚಾರಿತ್ರಿಕ ವ್ಯಕ್ತಿಗಳ, ಧಾರ್ಮಿಕ ವ್ಯಕ್ತಿಗಳ ಹೆಸರುಗಳನ್ನು ಕೊಡಲು ಮುಂದಾದದ್ದು ಗ್ರಾಮನಾಮಗಳ ಇತಿಹಾಸದಿಂದ ತಿಳಿಯುತ್ತದೆ. ಮುಂದೆ ಅದು ಕಾಲಾಂತರದ ಬದಲಾವಣೆ, ಆಯಾ ಕಾಲದ ಸಮಕಾಲೀನ ಸಾಮಾಜಿಕ ಜೀವನವನ್ನು ಅವಲಂಬಿಸಿ 'ಹೆಸರಿಡುವಿಕೆಯು' ಸ್ಥಿತ್ಯಂತರಕ್ಕೊಳಗಾಯಿತು. ಗ್ರಾಮಸಮುದಾಯಗಳು ಆರಂಭದಲ್ಲಿ ನಿಸರ್ಗವಾಚಿಯೊಂದಿಗೆ ಹೆಸರುಗಳನ್ನು ಕರೆದುಕೊಂಡು ಕ್ರಮೇಣ ಜನಾಂಗವಾಚಿ, ವ್ಯಕ್ತಿವಾಚಿಗೆ ಮುಂತಾದವು. ಈ ಮೂರು ಕಾಲ ಘಟ್ಟದಲ್ಲಿ ಒಂದು ಸ್ಥಳಕ್ಕೆ ಹೆಸರಿಡುವ ಕ್ರಮದಲ್ಲಿ ಅನೇಕ ಬಗೆಯ ಬದಲಾವಣೆಗಳಾದವು. ಈ ಬದಲಾವಣೆಯ ನಡುವಿನ ಅಂತರದಲ್ಲಿ ಸಂಸ್ಕೃತಿಗಳ ಸಮುದಾಯದ ವಿಕಾಸದ ಹಾದಿಯನ್ನು ಕಂಡುಕೊಳ್ಳಬಹುದು. ಒಂದೊಂದು ಗ್ರಾಮ ಒಂದೊಂದು ಸಂಸ್ಕೃತಿಯನ್ನು ತನ್ನಲ್ಲಿ ಅಡಗಿಸಿಕೊಂಡಿರುತ್ತದೆ. ಅಂತೆಯೇ ಆ ಗ್ರಾಮಗಳಿಗಿರುವ ಹೆಸರು ಆ ಸಂಸ್ಕೃತಿಯ ಅರಿಯುವಿಕೆಯು ಮೂಲಾಧಾರವಾಗಿರುತ್ತದೆ. ಒಂದು ಗ್ರಾಮ ಸಮಾಜದ ಒಟ್ಟು ಸಂಸ್ಕೃತಿಯನ್ನು ಒಂದು ರೂಪರೇಷೆಯ ಮಾದರಿಯಲ್ಲಿ 'ಹೆಸರುಗಳು' ಒಳಗು ಮಾಡಿಕೊಂಡು ಪ್ರತಿನಿಧಿಸುತ್ತಿರುತ್ತವೆ. ಈ ಕಾರಣದಿಂದ ಸಂಸ್ಕೃತಿಯ ಅಧ್ಯಯನದಲ್ಲಿ ಸ್ಥಳನಾಮಗಳು ಮಹತ್ವ ಪಾತ್ರ ಪಡೆದುಕೊಳ್ಳುತ್ತವೆ.

ಸ್ಥಳನಾಮಗಳು ಸಂಸ್ಕೃತಿಯ ಅಧ್ಯಯನದ ಪ್ರಮುಖ ಆಕರಗಳಲ್ಲಿ ಒಂದು. ಒಂದು ಹೆಸರಿನಲ್ಲಿ ಒಂದು ಜೀವನ ಕ್ರಮದ ಚರಿತ್ರೆಯಿರುತ್ತೆಂಬುದನ್ನು ಗಮನಿಸಬೇಕು. ಅಂದರೆ ನೇರವಾಗಿ ಜೀವನಕ್ರಮದ ಸಂಗತಿಗಳನ್ನು ಹೇಳುವುದಿಲ್ಲವಾದರೂ, ಅದರ ಒಪ್ಪಂದವನ್ನು ಪರೋಕ್ಷ ನೆಲೆಯಲ್ಲಿ ತೆರೆದು ತೋರಿಸುವ ಮೂಲಾಧಾರಗಳಾಗಿ ನಾಮಗಳು ಮಹತ್ವದ ಪಾತ್ರವಹಿಸುತ್ತವೆ. ಅದರಲ್ಲಿಯೂ ಸಂಸ್ಕೃತಿಯ ವೈವಿಧ್ಯತೆಗಳನ್ನು ಪ್ರಾದೇಶಿಕವಾಗಿ ಯಥಾಸ್ಥಿತಿಯಲ್ಲಿ ಹೇಳಲು ಅಧ್ಯಯನಕ್ಕೆ ತೊಡಗಿದಾಗ ಸ್ಥಳನಾಮಗಳನ್ನು ಉದಾಸೀನಗೊಳಿಸಲಾಗುತ್ತದೆ. ಈ ಬಗೆಯ ಮೂಲಾಧಾರಗಳಾಗಿ ಆಯ್ಕೆಯ ಮಿತಿಯಿಂದ ಸಂಸ್ಕೃತಿಯನ್ನು ಮತ್ತೊಮ್ಮೆ ಪುನಾರಚಿಸುವ ಅಗತ್ಯ ತೋರಿಬರುತ್ತದೆ. ನಮ್ಮ ಅತ್ಯಂತ ನಿಕಟ ಸಂಬಂಧವನ್ನೊಂದಿದ ಗ್ರಾಮನಾಮ ಸ್ಥಳನಾಮಗಳಿಂದ ವಿಭಿನ್ನ ಬಗೆಯ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಕಾರಣ ಪ್ರಾಮಾಣಿಕ ಸಾಂಸ್ಕೃತಿಕ ಪ್ರಜ್ಞೆಯುಳ್ಳ ವ್ಯಕ್ತಿ ಹಾಗೂ ಸಮಾಜ, ಸ್ಥಳನಾಮಗಳನ್ನು ಪ್ರಮುಖ ಆಕರಗಳೆಂದು ಭಾವಿಸಿದಲ್ಲಿ ವಾಸ್ತವತೆಯ ತಳಹದಿಯಿಂದ ಸಂಸ್ಕೃತಿಯ ಅಧ್ಯಯನಕ್ಕೆ ತೊಡಗಲು ಸಾಧ್ಯವಾಗುತ್ತದೆ.

ಮುಖ್ಯವಾಗಿ ಕನ್ನಡದಲ್ಲಿ ನಡೆದಂತಹ ಸ್ಥಳನಾಮ ಅಧ್ಯಯನಗಳು ಸಂಸ್ಕೃತಿನಿಷ್ಠ ಮಾದರಿಯಲ್ಲಿ ಬರಲಿಲ್ಲ. ಸ್ಥಳನಾಮಗಳು ಭಾಷಿಕ ಘಟಕಗಳೆಂದು ಅಧ್ಯಯನ ಮಾಡಲಾಯಿತು. ನಾಮಗಳು ಭಾಷಿಕ ಘಟಕಗಳೇ. ಆದರೂ ಒಂದು ಭಾಷೆಯಲ್ಲಿ ಒಂದು ಸಂಸ್ಕೃತಿಯು ಅಡಗಿರುವುದನ್ನು ಹಿಂದಿನ ಅಧ್ಯಯನಗಳು ಗೌಣಗೊಳಿಸಿದವು. ೧೮ನೇ ಶತಮಾನದಲ್ಲಿ ಪಾಶ್ಚಾತ್ಯರಲ್ಲಿ ಆರಂಭವಾದ ಸ್ಥಳನಾಮ ಅಧ್ಯಯನವು ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಕನ್ನಡ ನಾಡಿನಲ್ಲಿಯೂ ಆರಂಭವಾಯಿತು. ಮೊದಲು ಪಾಶ್ಚಾತ್ಯ ವಿದ್ವಾಂಸರು ಸ್ಥಳನಾಮಗಳನ್ನು ಭಾಷಿಕ ಘಟಕಗಳಿಂದಲೆ ವರ್ಣನಾತ್ಮಕ ಮಾದರಿಯಲ್ಲಿ ಪ್ರಯೋಗಕ್ಕೆ ಒಳಪಡಿಸಿದರು. ನಂತರದಲ್ಲಿ ಸಾಮಾಜಿಕ ಸಂಗತಿಗಳ ಕಡೆ ಗಮನಹರಿಸಿದರು.

ಅಂತೆಯೇ ೧೯೪೦ರಲ್ಲಿ ಶಂಬಾ ಜೋಶಿಯವರು ತಮ್ಮ ಸಂಸ್ಕೃತಿಯ ಅಧ್ಯಯನದಲ್ಲಿ ಬಹುಮುಖ್ಯವಾದ ಆಕರಗಳನ್ನಾಗಿ ಸ್ಥಳನಾಮಗಳನ್ನು ಬಳಸಿಕೊಂಡಿದ್ದಾರೆ. ಕನ್ನಡ ನಾಡಿನ ಭೌಗೋಳಿಕ ಎಲ್ಲೆಯನ್ನು ಗುರುತಿಸಲು ತೊಡಗಿದ ಶಂಬಾ ಅವರು ಈ ನಾಡಿನ ಮೂಲ ಜನಾಂಗದ ಈ ನಾಡಿನ ಸಂಸ್ಕೃತಿಯ ಚಹರೆಗಳನ್ನು ಗುರುತಿಸಲು ತೊಡಗಿದರು. ಆರಂಭಕಾಲದ ಹಟ್ಟಿ, ಹಾಡಿ, ಬಾಡ, ಹಾಳ್, ಈ ನಾಡಿನ ಗೋಳವರು, ಕುರುಂಬರು, ಹಟ್ಟಿಕಾರರ, ಗೌಡರ ಮೂಲ ನೆಲೆಗಳೆಂದು ಶಂಬಾ ಅಭಿಪ್ರಾಯಪಡುತ್ತಾರೆ. ಭೌಗೋಳಿಕ ಅಂಶಗಳನ್ನು ಗುರುತಿಸಲು ಹೊರಟ ಅವರು ಉತ್ತರ ಭಾರತದಲ್ಲಿಯೂ ಕನ್ನಡಿಗರ ನೆಲೆಯನ್ನು ಗ್ರಾಮನಾಮಗಳ ಮುಖೇನ ಶೋಧಿಸುತ್ತಾರೆ. ಆ ಮೂಲಕ ತಮ್ಮೆಲ್ಲ ಚಿಂತನೆಗಳನ್ನು ಹೆಸರುಗಳಿಂದಲೇ ಗುರುತಿಸಿ ಸಂಸ್ಕೃತಿಯ ರೂಪುರೇಷೆಯನ್ನು ಕಟ್ಟಿಕೊಟ್ಟಿದ್ದಾರೆ.

೧೯೪೦ರ ದಶಕದ ತರುವಾಯ ಸ್ಥಳನಾಮಗಳನ್ನು ಅಧ್ಯಯನ ಮಾಡುವ ಶಿಸ್ತು ಬದಲಾವಣೆಯಾಯಿತು. ಶಂಬಾ ಅವರು 'ಎಡೆಗಳು ಹೇಳುವ ಕಂನಾಡ ಕತೆ'ಯ ಮೂಲಕ ಸಂಸ್ಕೃತಿಯ ಶೋಧಕ್ಕೆ ಒಳಪಡಿಸಿದ ಮಾದರಿಯನ್ನು ಕನ್ನಡ ಅಧ್ಯಯನಕಾರರು ಗಂಭೀರವಾಗಿ ಚರ್ಚೆಗೆ ಎತ್ತಿಕೊಳ್ಳಲಿಲ್ಲವೆನ್ನಬಹುದು. ಭಾಷಾಶಾಸ್ತ್ರದ ನೆಲೆಯಲ್ಲಿ ಈ ಅಧ್ಯಯನ ಮುಂದುವರೆಯಿತು. ಕನ್ನಡ ಸ್ಥಳನಾಮಗಳು ಸಂಶೋಧನೆಯ ವಿಷಯಗಳಾಗಿ ವಿಶ್ವವಿದ್ಯಾಲಯಗಳ ಮಟ್ಟಕ್ಕೆ ಬಂದವು. ಆರಂಭದಲ್ಲಿ ತುಳುನಾಡಿನ ಸ್ಥಳನಾಮಗಳ ಮೇಲೆ ಕೆಮ್ತೂರು ರಘುಪತಿಭಟ್ಟ ಅವರು ಪ್ರಬಂಧವನ್ನು ಸಿದ್ಧಪಡಿಸಿದರು. ಇವರು ಭಾಷಿಕ ನೆಲೆಯಲ್ಲಿ ಸ್ಥಳನಾಮಗಳ ರಚನೆ, ನಿಷ್ಪತ್ತಿ, ಪೂರ್ವ ಮತ್ತು ಉತ್ತರ ಪದದ ಅರ್ಥ, ವರ್ಗೀಕರಣ, ಭಾಷಿಕ ಅಂಶಗಳ ಅಭಿವ್ಯಕ್ತಿ ಈ ಮಾದರಿಯಲ್ಲಿ ಸೈದ್ಧಾಂತಿಕ ನೆಲೆಯಲ್ಲಿ ಚರ್ಚಿಸಿದರು. ಬಹುತೇಕ ಈ ಮಾದರಿಯಲ್ಲಿಯೇ ಇಂದಿನವರೆಗೂ ಚಾಲ್ತಿಯಲ್ಲಿದೆ. ಈವರೆಗೆ ಕನ್ನಡದಲ್ಲಿ ಬಂದ ಗ್ರಾಮ, ಕೊನೆಗೆ ಒಂದು ನಿಷ್ಪತ್ತಿಯ ಕೋಶವನ್ನು ನೀಡುವುದು ತಿಳಿಯುತ್ತದೆ. ಅಲ್ಲಲ್ಲಿ ಪ್ರಾಸ್ತಾವಿಕವೆಂಬಂತೆ ಅವುಗಳ ಚಾರಿತ್ರಿಕ, ಜಾನಪದ ಮತ್ತು ಸಾಮಾಜಿಕ ಅಂಶಗಳನ್ನು ಹೇಳಲಾಗಿದೆ. ಅಲ್ಲದೇ ಸ್ಥಳನಾಮ ಅಧ್ಯಯನ ಕರ್ನಾಟಕ ಒಳಾವರಣದಲ್ಲಿಯೇ ನಡೆದಿರುವುದನ್ನು ಗಮನಿಸಬಹುದು. ಪ್ರಾಸಂಗಿಕವಾಗಿ ಅನ್ಯಭಾಷೆಯ

ಪ್ರಭಾವವನ್ನು ಹೇಳಲಾಗಿದೆ. ಈ ಹಿನ್ನೆಲೆಯೊಂದಿಗೆ ಅಧ್ಯಯನದ ಮುಖ್ಯ ಉದ್ದೇಶಗಳನ್ನು ಹೀಗೆ ಪಟ್ಟಿ ಮಾಡಬಹುದು.

ಉದ್ದೇಶ

ಚಳ್ಳಕೆರೆ ತಾಲೂಕು ಸ್ಥಳನಾಮಗಳು ಎಂಬುದು ಈ ಅಧ್ಯಯನದ ಶೀರ್ಷಿಕೆ. ಕನ್ನಡದಲ್ಲಿ ಸ್ಥಳನಾಮ ಅಧ್ಯಯನಗಳು ಎಂಬತ್ತರ ದಶಕದಿಂದ ವ್ಯಾಪಕವಾಗಿ ನಡೆಯುತ್ತಿವೆ. ದ್ರಾವಿಡ ಭಾಷೆಗಳ ಹೆಸರುಗಳು ಕುತೂಹಲಕಾರಿಯಾಗಿವೆ ಎಂದು ಹೇಳಿದ ಪಾಶ್ಚಾತ್ಯ ವಿದ್ವಾಂಸ 'ವಿಲಿಯಂ ಬಾರ್ನೆಟ್'ರವರ ಮಾತನ್ನು ಕನ್ನಡ ವಿದ್ವಾಂಸರು ಹೆಚ್ಚಾಗಿ ಗಮನಿಸಿದಂತೆ ಕಾಣುವುದಿಲ್ಲ. ಕನ್ನಡ ಸ್ಥಳನಾಮಗಳ ಸ್ವರೂಪ, ಸಂಬೋಧನ ವಿಧಾನ ತುಂಬಾ ಕುತೂಹಲಕಾರಿಯಾದ ಸಂಗತಿಗಳಾಗಿವೆ. ಸ್ಥಳನಾಮ ಸಂಬೋಧನೆಯ ವಿವಿಧ ನೆಲೆಗಳ ಕುರಿತು ಅಧ್ಯಯನ ಮಾಡುವುದು ಆಸಕ್ತಿಯ ವಿಷಯವಾಗಿದೆ. ಆ ಕುರಿತಂತೆ ನಡೆಯುವ ಅಧ್ಯಯನಗಳು ಸಮುದಾಯಗಳ ಪ್ರಾಚೀನ ಚರಿತ್ರೆಯನ್ನು ಪ್ರಾದೇಶಿಕ ನೆಲೆಯಲ್ಲಿ ಮರು ನಿರ್ಮಾಣದಲ್ಲಿ ಪ್ರಯೋಜನವಾಗುತ್ತವೆ. ಈ ದಿಸೆಯಲ್ಲಿ ಸ್ಥಳನಾಮಗಳ ಬಗೆಗೆ ಅಧ್ಯಯನ ಮಾಡುವ ಉದ್ದೇಶವನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ.

ಒಂದು ಭೌಗೋಳಿಕ ಪರಿಸರದಲ್ಲಿ ವಾಸಿಸುವ ಬೇರೆ ಬೇರೆ ಸಮುದಾಯಗಳು ತಮ್ಮ ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾಗಿ ಹೆಸರು ನಿರ್ದೇಶನ ಮಾಡುವುದು ಸಾಮಾನ್ಯ. ಈ ನಡುವೆಯೂ ಒಂದು ಜಾತಿ, ಧರ್ಮದವರು ಇನ್ನೊಂದು ಜಾತಿ, ಧರ್ಮದವರು ಅನುಸರಿಸುವ ಹೆಸರುಗಳನ್ನು ಒಂದು ಭಾಷಾ ಸಮುದಾಯದವರು ಮತ್ತೊಂದು ಭಾಷಾ ಸಮುದಾಯದವರ ಹೆಸರುಗಳನ್ನು ಸ್ವೀಕರಣೆ ಮಾಡುತ್ತಾರೆ. ಈ ಸ್ವೀಕರಣೆ ಅಥವಾ ಅನುಕರಣ ಪದ್ಧತಿ ಕೆಲವು ಸಂದರ್ಭಗಳಲ್ಲಿ ಪರಸ್ಪರವಾಗಿದ್ದರೆ, ಇನ್ನೂ ಕೆಲವು ಸಂದರ್ಭಗಳಲ್ಲಿ ಏಕಮುಖವಾಗಿರುತ್ತದೆ. ಇಂಥ ದ್ವಿಮುಖ ಚಲನೆಗಳಿಗೆ ಆಯಾ ಸಮುದಾಯಗಳ ಸಾಮಾಜಿಕ, ಧಾರ್ಮಿಕ ಅಂಶಗಳು ಕಾರಣಗಳಾಗಿರುತ್ತವೆ. ಸ್ಥಳನಾಮಗಳ ಇಂಥ ಬೆಳವಣಿಗೆಗಳು ಆಸಕ್ತಿಯನ್ನು ಮೂಡಿಸುತ್ತವೆ. ಅದರ ಒಂದು ಪ್ರಯತ್ನವೇ ಪ್ರಸ್ತುತ 'ಚಳ್ಳಕೆರೆ ತಾಲೂಕು ಸ್ಥಳನಾಮಗಳು' ಎಂಬ ಈ ನಿಬಂಧ ಒಳಗು ಮಾಡಲಾಗಿದೆ. ಪ್ರಸ್ತುತ ನಿಬಂಧ ಎತ್ತಿಕೊಂಡ ಸವಾಲುಗಳು ಈ ರೀತಿ ಇವೆ.

೧. ಸ್ಥಳನಾಮಗಳು ಮೂಲತಃ ಭಾಷಿಕ ರಚನೆಗಳು, ಮುಖ್ಯವಾಗಿ ಸ್ಥಳನಾಮವನ್ನು ಭಾಷಾಶಾಸ್ತ್ರದ ಪರಿಭಾಷೆಯಲ್ಲಿ 'ನಿರ್ದಿಷ್ಟ' ಮತ್ತು 'ವಾರ್ಗಿಕ' ಎಂದು ಎರಡು ಪ್ರಕಾರಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯದಿಂದ ಕಲೆಹಾಕಿದ ಮಾಹಿತಿಯನ್ನು ಆಧರಿಸಿ ಸ್ಥಳನಾಮಗಳ ರಾಚನಿಕ ಸ್ವರೂಪವನ್ನು ಭಾಷಿಕ ನೆಲೆಯಲ್ಲಿ ವಿಶ್ಲೇಷಿಸುವುದು ಮತ್ತು ಅಗತ್ಯ ಎಂದು ಕಂಡುಬಂದಲ್ಲಿ ಸಾಮಾಜಿಕ ಆಯಾಮಗಳಲ್ಲಿ ಚರ್ಚಿಸುವುದು.

೨. ಸ್ಥಳನಾಮಗಳನ್ನು ವರ್ಣನಾತ್ಮಕ ಅಧ್ಯಯನದ ಮಾದರಿಯಿಂದ ಆದಷ್ಟು ಸಾಮಾಜಿಕ ಭಾಷಾಶಾಸ್ತ್ರದ ನೆಲೆಯಲ್ಲಿ ಗಮನಿಸುವುದು. ಸಿದ್ಧ ವ್ಯಾಕರಣ ಘಟಕಗಳ ಹಿನ್ನೆಲೆಯಲ್ಲಿ

ಸ್ಥಳನಾಮಗಳನ್ನು ನೋಡದೆ, ಸಮುದಾಯಗಳ ಭಾಷಿಕ ಪ್ರಕ್ರಿಯೆಗಳಾದ ಬರಹ, ಉಚ್ಚಾರಣೆಗಳನ್ನು ಸಾಮಾಜಿಕ ವರ್ಗದ ನೆಲೆಯಲ್ಲಿ ನೋಡುವುದು. ಅಲ್ಲದೆ ದ್ವಿಭಾಷಿಕ ವಲಯದಲ್ಲಿ ಕಂಡುಬರುವ ಭಾಷಿಕ ಕೊಡುಪಡೆಯನ್ನು ಚರ್ಚಿಸುವುದರೊಂದಿಗೆ ಸ್ಥಳನಾಮಗಳನ್ನು ಸಾಮಾಜಿಕ, ಭಾಷಿಕ ನಿಯಮಗಳಿಗೆ ತಕ್ಕಂತೆ ವಿಶ್ಲೇಷಿಸುವುದು.

೩. ಸ್ಥಳನಾಮಗಳ ವರ್ಗೀಕರಣವನ್ನು ಭೌಗೋಳಿಕ ಪರಿಸರಕ್ಕನುಗುಣವಾಗಿ ವರ್ಗೀಕರಿಸುವುದು ಮತ್ತು ವರ್ಗೀಕರಣಗಳನ್ನು ಅತಿ ವ್ಯಾಪ್ತಿದೋಷದಿಂದ ಮುಕ್ತಗೊಳಿಸುವುದು.

೪. ಮೌಖಿಕ ಪರಂಪರೆಯ ಗಾದೆ, ಒಗಟು, ಒಡಪು, ಹಾಡುಗಳು, ಕಥೆಗಳ ಮುಖೇನ ಸ್ಥಳನಾಮಗಳನ್ನು ಅಧ್ಯಯನ ಮಾಡುವುದು ಅಲ್ಲದೆ ಈ ಜಾನಪದ ಪ್ರಕಾರಗಳ ಮೂಲಕ ಸ್ಥಳನಾಮಗಳ ಭಾಷಿಕ ಕ್ರಿಯೆ, ಮೂಲ ನಿಷ್ಪತ್ತಿ ಮುಂತಾದವನ್ನು ಕಂಡುಕೊಳ್ಳುವುದು. ಮುಂದುವರೆದು ಜಾನಪದ ರಂಗಭೂಮಿಯ ಬಯಲಾಟದ ಕುರುಹುಗಳ ಮೂಲಕ ಈ ಅಧ್ಯಯನವನ್ನು ಮಾದರಿಯನ್ನಾಗಿ ರೂಪಿಸುವುದು.

೫. ಚರಿತ್ರೆಯೊಂದಿಗೆ ಸ್ಥಳನಾಮಗಳ ಅಧ್ಯಯನವನ್ನು ಮಾಡುವಾಗ ಈವರೆಗಿನ ಅಧ್ಯಯನಗಳ ಮಾದರಿಯಲ್ಲಿ ಶಾಸನೋಕ್ತ ಹೆಸರುಗಳು, ದತ್ತಿದಾನ ನೀಡಿದ ಗ್ರಾಮಗಳು, ಆಡಳಿತ ವಿಭಾಗಗಳ ಹೆಸರನ್ನು ನೋಡದೆ ಶಾಸನೋಕ್ತ ಹೆಸರುಗಳ ಮೂಲಕ ಭಾಷಿಕ ಅವಸ್ಥಾಂತರದ ಕುರುಹುಗಳನ್ನು ಗುರುತಿಸುವುದು. ಅಲ್ಲದೇ ಕೈಫಿಯತ್ತುಗಳಲ್ಲಿ ಉತ್ತಮವಾದ ಸ್ಥಳನಾಮಗಳೊಂದಿಗೆ ಭಾಷಿಕ ಪ್ರಕ್ರಿಯೆಗಳನ್ನು ನೋಡುವುದು. ಮಾಸ್ತಿ ವೀರಗಲ್ಲುಗಳ ಮುಖೇನ ಈ ಅಧ್ಯಯನ ಹೊಸ ಸಾಧ್ಯತೆಗಳನ್ನು ಗುರುತಿಸುವುದು.

೬. ಸ್ಥಳನಾಮಗಳು ಕೇವಲ ನಿಘಂಟು ಅಧ್ಯಯನಗಳಾಗುವ ಮಿತಿಗಳಿಂದ ದೂರವಿರಿಸುವುದು.

ಈ ಮೇಲೆ ಸೂಚಿಸಿರುವ ಅಂಶಗಳು ಅಧ್ಯಯನದ ಮುಖ್ಯ ಉದ್ದೇಶಗಳಾಗಿವೆ. ಈ ಅಂಶಗಳನ್ನು ಒಂದೊಂದು ಅಧ್ಯಾಯಗಳನ್ನಾಗಿ ಮಾಡಿಕೊಂಡು ಪೂರಕ ಚರ್ಚೆಯನ್ನು ಮಾಡಲಾಗಿದ್ದು ಸ್ಥಳನಾಮಗಳ ಮೂಲಕ ಸಂಸ್ಕೃತಿಯನ್ನು ಅನಾವರಣಗೊಳಿಸುವ ಪ್ರಯತ್ನ ಮಾಡಲಾಗಿದೆ.

ವ್ಯಾಪ್ತಿ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯು ಅತೀ ಭೂವಿಸ್ತಾರವನ್ನು ಹೊಂದಿದ ತಾಲೂಕು ಕೇಂದ್ರವಾಗಿದೆ. ಇಲ್ಲಿ ವಿಶೇಷವಾದ ಬೆಟ್ಟ ಶ್ರೇಣಿಗಳಿಲ್ಲ. ಅಲ್ಲಲ್ಲೆ ಕೆಲವು ಕಡೆ ಕಣಶಿಲೆಯ ಬೋಳುಬೆಟ್ಟಗಳಿವೆ. ಮತ್ತು ತಗ್ಗುದಿಣ್ಣೆಗಳಿಂದ ಕೂಡಿದ ಮೈದಾನ ಪ್ರದೇಶವಾಗಿದೆ.

ವಿಶೇಷವಾಗಿ ಕಲ್ಲು ಜರುಗಿನಿಂದ ಕೂಡಿದ ಕೆಂಪು ಮಣ್ಣಿದ್ದು ಕೆಲವು ಕಡೆ ಮಾತ್ರ ಕಪ್ಪು ನೆಲವಿದೆ. ಈ ಪ್ರದೇಶವು ವ್ಯವಸಾಯಕ್ಕೆ ಅಂತಹ ಫಲವತ್ತಾದ ಭೂಮಿಯನ್ನು ಹೊಂದಿಲ್ಲ.

ಅಲ್ಲದೆ ನೀರಾವರಿಗೆ ಅನುಕೂಲವಾದ ಅಣೆಕಟ್ಟೆಗಳನ್ನು ಹೊಂದಿದೆ. ಜೊತೆಗೆ ಚಿತ್ರದುರ್ಗ ಜಿಲ್ಲೆಯಲ್ಲೇ ಅತ್ಯಂತ ಕಡಿಮೆ ಮಳೆ ಬೀಳುವ ತಾಲೂಕು ಇದಾಗಿದೆ.

ದಕ್ಷಿಣದಲ್ಲಿ ವೇದಾವತಿ ನದಿ ಪಾತ್ರವಹಿಸಿರುವುದರಿಂದ ಚಳ್ಳಕೆರೆ ಗ್ರಾಮದ ಜನರು ಸುಖ, ನೆಮ್ಮದಿಯನ್ನು ಹೊಂದಿದ್ದಾರೆ. ಭೌಗೋಳಿಕ ವಿಸ್ತರಣೆಯಲ್ಲಿ ಕರ್ನಾಟಕದಲ್ಲಿಯೇ ಎರಡನೇ ದೊಡ್ಡ ತಾಲೂಕ ಚಳ್ಳಕೆರೆ. ಇನ್ನು ವ್ಯಾಪಾರ ವಹಿವಾಟುಗಳಲ್ಲಿ ಎಣ್ಣೆ (ಶೇಂಗಾ) ಗಿರಣಿಗಳು ನಮ್ಮ ಕರ್ನಾಟಕದಲ್ಲಿ ಅತೀ ಹೆಚ್ಚು ಜನಸಂಖ್ಯೆಯಲ್ಲಿರುವುದರಿಂದ ಇದನ್ನು ಚೋಟಾ ಬಾಂಬೆ ಎಂದು ಕರೆಯುತ್ತಾರೆ. ಈ ಪ್ರದೇಶದಲ್ಲಿ ದೇಶದ ಉದ್ದಕ್ಕೂ ಚಳ್ಳಕೆರೆಯ ಶೇಂಗಾ ಎಣ್ಣೆ ಸರಬರಾಜು ಆಗುತ್ತದೆ. ವಿಶೇಷವಾದ ಅಂಶಗಳನ್ನು ಅಧ್ಯಯನವು ಒಳಗೊಂಡಿದೆ.

ಚಿತ್ರದುರ್ಗ ಜಿಲ್ಲೆಯೂ ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿದ್ದು ರಾಷ್ಟ್ರಗಳ ಮಟ್ಟದಲ್ಲಿ ಸ್ಮಾರಕಗಳ, ಪ್ರವಾಸಿಗರ ಕೇಂದ್ರವೆಂದು ಹೆಸರು ಪಡೆದಿದ್ದು, ಈ ಜಿಲ್ಲೆಯಲ್ಲಿ ಬರುವ ಚಳ್ಳಕೆರೆ ತಾಲೂಕು ಒಂದು. ಪುರಾತನ ಕಾಲದ ಶಾಸನಗಳಲ್ಲಿ ಕಾಣಿಸಿಕೊಂಡಿದೆ. ಬೂದಿ ದಿನ್ನೆಗಳು, ಗೀರುಬಂಡೆ ಚಿತ್ರಗಳು ಒಳಗೊಂಡಿದ್ದು, ಸ್ಥಳನಾಮಗಳ ಪಾತ್ರದಲ್ಲಿ ವಿಶೇಷ ಮಹತ್ವವನ್ನು ಪಡೆದಿದ್ದು, ವಿಭಿನ್ನ ರೀತಿಯಲ್ಲಿ ತನ್ನದೇ ಆದ ಪಾತ್ರವನ್ನು ನಿರ್ವಹಿಸಿದೆ. ಆದ್ದರಿಂದ ಈ ತಾಲೂಕು ಸ್ಥಳನಾಮ ಅಧ್ಯಯನ ಕುರಿತು ವಿಶೇಷ ಅಧ್ಯಯನ ಒಳಗೊಂಡಿರುವ ಯೋಜನೆ ಮಾಡಲಾಗಿದೆ. ಚಳ್ಳಕೆರೆ ತಾಲೂಕಿನ ಸ್ಥಳನಾಮಗಳ ಅಧ್ಯಯನ ಎಂಬ ಶೀರ್ಷಿಕೆಯ ಅಡಿಯಲ್ಲಿ ವಿಶ್ಲೇಷಿಸಲಾಗಿದೆ.

ಸಮಾಜ ಬದಲಾದಂತೆ ಸಂಸ್ಕೃತಿಯು ಬದಲಾಗುತ್ತದೆ. ಸಂಸ್ಕೃತಿ ಬದಲಾಗಿದೆ ಎಂದರೆ ಜನರ ರೀತಿ–ನೀತಿಗಳು ಬದಲಾಗಿವೆ. ಹಾಗೇ ಗ್ರಾಮಗಳು, ನಗರಗಳು ಬೆಳೆಯುತ್ತಾ ಹೋದಂತೆ ಹೆಸರುಗಳು ಬದಲಾಗುತ್ತವೆ. ಚಳ್ಳಕೆರೆ ತಾಲೂಕು ಸ್ಥಳನಾಮಗಳನ್ನು ಗಮನಿಸಿದಾಗ ಚಳ್ಳಕೆರೆ ಚಾರಿತ್ರಿಕ ಅಂಶವನ್ನು ಒಳಗೊಂಡಿದೆ. ಚಿತ್ರದುರ್ಗ ಜಿಲ್ಲೆಯ ಶಾಸನಗಳನ್ನು ಗಮನಿಸಿದಾಗ ಮೌರ್ಯರು, ಶಾತವಾಹನರು, ಕದಂಬರು, ಸೇವುಣರು, ರಾಷ್ಟ್ರಕೂಟರು, ನೊಳಂಬರು ಇನ್ನು ಮುಂತಾದ ಪಾಳೆಯಗಾರರು ಆಳ್ವಿಕೆ ಮಾಡಿದ್ದಾರೆಂದು ತಿಳಿದುಬರುತ್ತದೆ. ಈ ಹಿನ್ನೆಲೆಯ ಆಧಾರದಿಂದ ಚಳ್ಳಕೆರೆ ಸ್ಥಳನಾಮಗಳ ವಿಷಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

'ಚಳ್ಳಕೆರೆ ತಾಲೂಕಿನ ಸ್ಥಳನಾಮಾಧ್ಯಯನ' ಎಂಬ ಸಂಪ್ರಬಂಧದಲ್ಲಿ ತಾಲೂಕಿನಲ್ಲಿ ನಗರದ ಜೊತೆಗೆ ೧೯೫ ಹಳ್ಳಿಗಳಿದ್ದು ಆಡಳಿತದ ಅನುಕೂಲಕ್ಕಾಗಿ ನಾಲ್ಕು ಹೋಬಳಿ ಕೇಂದ್ರಗಳನ್ನಾಗಿ ಮಾಡಿಕೊಳ್ಳಲಾಗಿದೆ. ಚಳ್ಳಕೆರೆ ಕಂದಾಯದ ಭಾಗದಲ್ಲಿ ಬರುವ ಎಲ್ಲಾ ಗ್ರಾಮಗಳು ಪ್ರಸ್ತುತ ಅಧ್ಯಯನದ ವ್ಯಾಪ್ತಿಯಾಗಿದೆ. ಆದರೆ ಇತ್ತೀಚಿಗೆ ಸಂಸ್ಕೃತಿಕರಣಗೊಳ್ಳುತ್ತಿರುವ ಲಂಬಾಣಿ ಜನರು ತಾಂಡಾಗಳನ್ನು (ಲಂಬಾಣಿ ಹಟ್ಟಿ) ಅಧ್ಯಯನದ ವ್ಯಾಪ್ತಿಗೆ ಸೇರುವುದಿಲ್ಲ. ಕಾರಣ ಅವು ಹತ್ತಿರವಿರುವ ಗ್ರಾಮವನ್ನೇ ನಾಮವನ್ನಾಗಿ ಹೊಂದಿರುವುದರಿಂದ ಅವುಗಳನ್ನು

ಹೊರತುಪಡಿಸಿ ಉಳಿದ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಅಧ್ಯಯನದ ವ್ಯಾಪ್ತಿ, ಭೌಗೋಳಿಕ ಪ್ರದೇಶದ ಪರಿಸರ, ಇತಿಹಾಸ, ಚಾರಿತ್ರಿಕ, ಧಾರ್ಮಿಕ, ಜೀವನವಿಧಾನ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಭಾಷಿಕ ಅಂಶಗಳನ್ನು ಅಳವಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಮಿತಿಗಳು

'ಚಳ್ಳಕೆರೆ ತಾಲೂಕಿನ ಸ್ಥಳನಾಮಾಧ್ಯಯನ' ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನದ ವಿಷಯಕ್ಕೆ ಸಂಬಂಧಪಟ್ಟ ಉಪಲಬ್ಧ ಬರಹ ಹಾಗೂ ಮಾಹಿತಿಯನ್ನು ಅನುಲಕ್ಷಿಸಿ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಪ್ರಬಂಧವು ಸುಮಾರು ೧೯೫ ಗ್ರಾಮಗಳನ್ನು ಒಳಗೊಂಡಿದ್ದು ಸ್ಥಳನಾಮಗಳಲ್ಲಿ ದೊರೆಯುವ ವಿಶಿಷ್ಟ ವಾರ್ಗಿಕಗಳಿಗೆ ಸಂಬಂಧಿಸಿದಂತೆ ಕೆಲವು ಮಾದರಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

"ಸ್ಥಳನಾಮ ಅಧ್ಯಯನ ಆಯಾ ಗ್ರಾಮ ಮತ್ತು ಪ್ರದೇಶಗಳು ಭೌಗೋಳಿಕ, ಸಾಮಾಜಿಕ, ಪರಿಸರದ ಮೇಲೆ ಬೆಳಕುಚೆಲ್ಲುತ್ತವೆ. ಇಲ್ಲಿ ಪಂಡಿತ-ಪಾಮರರು ಕೊಡುವ ನಿಷ್ಪತ್ತಿಗಿಂತ ನಿಜ ನಿಷ್ಪತ್ತಿಗೆ ಗಮನಕೊಟ್ಟು ಅಧ್ಯಯನ ನಡೆಸುವುದು ಇಂದಿನ ಅಗತ್ಯವಾಗಿದೆ."

ಸ್ಥಳನಾಮಗಳ ನಿಜ ನಿಷ್ಪತ್ತಿಯ ಪ್ರಯತ್ನದಲ್ಲಿ ಅನೇಕ ತೊಡಕುಗಳನ್ನು ಎದುರಿಸಬೇಕಾಗುತ್ತದೆ. 'ಸವೆದುಹೋದ ಅಥವಾ ಅರ್ಥ ಬದಲಾವಣೆಯಾದ ಸ್ಥಳನಾಮಗಳ ಮೂಲರೂಪಗಳನ್ನು ಕಂಡುಹಿಡಿಯಲು ಹೊರಟ ಸಂಶೋಧಕರು ಹಲವಾರು ಸಲ ಹೊಸ ಸಮಸ್ಯೆಗಳನ್ನು ಪರಿಹರಿಸಬೇಕಾಗುತ್ತದೆ. ದೊರೆಯುವ ಆಕರ ಸಾಮಗ್ರಿಗಳು ಸಾಕಾಗುವುದಿಲ್ಲ. ಜನಪದ ನಿರುಕ್ತಿಯಿಂದ ಸರಿಯಾದ ಕ್ರಮಕ್ಕೆ ಬರಲು ಸಾಧ್ಯವಿಲ್ಲ.

ಪ್ರಸ್ತುತ 'ಚಳ್ಳಕೆರೆ ತಾಲೂಕು ಸ್ಥಳನಾಮಗಳು' ಎಂಬ ವಿಷಯದ ಅಧ್ಯಯನವನ್ನು ಸಮಯದ ಸಂದರ್ಭದೊಳಗೆ ಸ್ಥಳನಾಮ ಮಾಹಿತಿ ಸಂಗ್ರಹಣೆ ಮಾಡಿದ್ದು ಸರಿಯಾದ ಮಾಹಿತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ವಿಧಾನ

'ಚಳ್ಳಕೆರೆ ತಾಲೂಕು ಸ್ಥಳನಾಮಗಳು' ಎಂಬ ಈ ಅಧ್ಯಯನವು ಕ್ಷೇತ್ರಕಾರ್ಯ ಮತ್ತು ಪ್ರಕಟಿತ, ಅಪ್ರಕಟಿತ ಗ್ರಂಥಗಳ ಅಧ್ಯಯನದಿಂದ ರೂಪುಗೊಂಡಿದೆ. ಮುಖ್ಯವಾಗಿ ಕ್ಷೇತ್ರಕಾರ್ಯದ ಮಾಹಿತಿಯಿಂದ ಗ್ರಾಮನಾಮ ಮತ್ತು ಅವುಗಳ ವಿವಿಧ ಹೆಸರುಗಳು, ಚಾರಿತ್ರಿಕ, ಸಾಮಾಜಿಕ, ಭಾಷಿಕ ಅಂಶಗಳನ್ನು ಈ ನಿಬಂಧದಲ್ಲಿ ಅಧ್ಯಯನ ಮಾಡಲಾಗಿದೆ. ಈ ಮೂಲಕ ಗ್ರಾಮನಾಮಗಳ ಬರಹ ಮತ್ತು ಬಳಕೆಯಲ್ಲಿ ಅವರ ಉಚ್ಚಾರಣೆಯ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ಅಲ್ಲದೇ ಆಯಾ ಗ್ರಾಮಗಳನ್ನು ಸಂದರ್ಶಿಸುವಾಗ ಬ್ರಾಹ್ಮಣ, ಲಿಂಗಾಯತ, ರೆಡ್ಡಿ, ಕುರುಬ,

ಮಾದಿಗ, ಮುಸ್ಲಿಂ ಸಮುದಾಯದ ಒಬ್ಬೊಬ್ಬ ಪುರುಷ ಮತ್ತು ಮಹಿಳೆಯನ್ನು ವಕ್ತೃಗಳನ್ನಾಗಿ ಆಯ್ಕೆ ಮಾಡಿಕೊಂಡು ಗ್ರಾಮನಾಮಗಳ ಮಾಹಿತಿಯನ್ನು ಪಡೆಯಲಾಗಿದೆ.

ಸಂದರ್ಶಿಸಿದ ಒಟ್ಟು ಹಳ್ಳಿಗಳಲ್ಲಿ ಆಯಾ ಗ್ರಾಮದ ಸುತ್ತಮುತ್ತಣ ಇರುವ ಭೂಮಿಯ ಗುಣ, ಬೆಟ್ಟ, ಹಳ್ಳ, ನದಿ, ಕೆರೆ ಮುಂತಾದ ಜಲಮೂಲಗಳು, ಆ ಊರಿನಲ್ಲಿರುವ ಸಮುದಾಯಗಳು, ಅಲ್ಲಿನ ಚರಿತ್ರೆ, ದೇವಾಲಯಗಳು, ಶಾಸನಗಳು, ಮಾತೃಭಾಷೆ, ಸಾಮಾಜಿಕ ಜೀವನವಿಧಾನ, ಆರ್ಥಿಕ ಸಂಪನ್ಮೂಲಗಳು, ಹಬ್ಬ ಆಚರಣೆಗಳು ಆ ಊರಿನ ವಿಶಿಷ್ಟ ಸಂಸ್ಕೃತಿ ಮುಂತಾದ ವಿವರಗಳನ್ನು ಸಾಂದರ್ಭಿಕವಾಗಿ ಗಮನಿಸಲಾಗಿದೆ. ಇದರಿಂದಾಗಿ ಗ್ರಾಮನಾಮಗಳ ಭೌಗೋಳಿಕ, ಸಾಂಸ್ಕೃತಿಕ, ಭಾಷಿಕ ಆಯಾಮಗಳನ್ನು ಕಟ್ಟಿಕೊಡಲಾಗಿದೆ.

ಸ್ವರೂಪ

ಚಳ್ಳಕೆರೆ ತಾಲೂಕಿನ ಸ್ಥಳನಾಮಗಳು ಒಂದಕ್ಕೊಂದು ಭಿನ್ನ ಹಾಗೂ ವಿಶಿಷ್ಟತೆಯಿಂದ ಕೂಡಿವೆ. ಹೀಗಿರುವ ಸ್ಥಳನಾಮಗಳ ನಿಷ್ಪತ್ತಿಗಾಗಿ ಅಧ್ಯಯನವನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಇಲ್ಲಿನ ಲಭ್ಯವಾದ ಕೃತಿಗಳಲ್ಲಿ ಮಾಹಿತಿಯನ್ನು ಹಾಗೂ ಪ್ರಕಟಿತ ಸಂಶೋಧನಾ ಪ್ರಬಂಧಗಳನ್ನು ಅನುಲಕ್ಷಿಸಲಾಯಿತು.

ಈ ಭಾಗದಲ್ಲಿ ಸ್ಥಳನಾಮಗಳ ಕುರಿತಂತೆ ಅಧ್ಯಯನ ನಡೆದಿಲ್ಲ. ಇಲ್ಲಿನ ಸ್ಥಳನಾಮಗಳು, ಐತಿಹಾಸಿಕ, ಸಾಂಸ್ಕೃತಿಕವಾಗಿ ಮಹತ್ವವನ್ನು ಹೊಂದಿದ್ದು ಇವುಗಳ ಅಧ್ಯಯನದಿಂದ ಅನೇಕ ಮಹತ್ವದ ರೂಪುರೇಷೆಗಳು ಲಭ್ಯವಾಗುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ಚಳ್ಳಕೆರೆ ತಾಲೂಕಿನ ಸ್ಥಳನಾಮಾಧ್ಯಯನ ಕೈಗೊಂಡು ಅಲ್ಲಿನ ಸ್ಥಳನಾಮಗಳ ಮಹತ್ವವನ್ನು ಬೆಳಕಿಗೆ ತರುವ ಕೆಲಸ ಮಾಡುವುದಾಗಿದೆ. ಪ್ರಸ್ತುತ ಸ್ಥಳನಾಮಗಳ ಅಧ್ಯಯನವು ಎಂಟು ಅಧ್ಯಾಯಗಳಾಗಿದ್ದು ಪ್ರತಿಯೊಂದು ಅಧ್ಯಾಯವು ಉಪಶೀರ್ಷಿಕೆಗಳನ್ನು ಒಳಗೊಂಡಿದೆ.

ಅಧ್ಯಾಯ ಒಂದು: ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪವನ್ನು ಒಳಗೊಂಡಿದೆ.

ಅಧ್ಯಾಯ ಎರಡು: ಈ ಅಧ್ಯಾಯದಲ್ಲಿ ಈಗಾಗಲೇ ನಡೆದಿರುವ ಅಧ್ಯಯನಗಳ ಸಮೀಕ್ಷೆಯಾಗಿದೆ. ಪ್ರಕಟವಾಗಿರುವ ಕೃತಿಗಳು ಹಾಗೂ ಗ್ರಂಥಸೂಚಿಗಳು ಜೊತೆಗೆ ಕರ್ನಾಟಕದಲ್ಲಿ ಸ್ಥಳನಾಮ ಅಧ್ಯಯನದ ಆರಂಭಿಕ ಅಧ್ಯಯನಗಳನ್ನು ತಿಳಿಸಬಹುದಾಗಿದೆ. ಪ್ರಕಟಿತ ಕೃತಿಗಳು ಹಾಗೂ ಅಪ್ರಕಟಿತ ಎಂ.ಫಿಲ್., ಪಿಎಚ್.ಡಿ. ಪ್ರಬಂಧಗಳನ್ನು ಅಧ್ಯಯನದಲ್ಲಿ ಅವಲೋಕಿಸಲಾಗಿದೆ. ತಾಲೂಕಿನ ಪರಿಚಯದ ಕೈಪಿಡಿಯ ವಾರ್ಷಿಕ ಸಂಚಿಕೆಗಳು, ಲೇಖನಗಳನ್ನು ಪ್ರಬಂಧದಲ್ಲಿ ಒಳಗೊಂಡಿರುತ್ತದೆ.

ಅಧ್ಯಾಯ ಮೂರು: ಈ ಅಧ್ಯಾಯದಲ್ಲಿ ತಾಲೂಕಿನ ಭೌಗೋಳಿಕ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ನಾಲ್ಕು: ಈ ಅಧ್ಯಾಯದಲ್ಲಿ ಸ್ಥಳನಾಮಗಳ ಸ್ವರೂಪ, ಉಗಮ ಮತ್ತು ಬೆಳವಣಿಗೆಯನ್ನು ವಿವರಿಸಲಾಗಿದೆ.

ಅಧ್ಯಾಯ ಐದು: ಈ ಅಧ್ಯಾಯದಲ್ಲಿ ಸ್ಥಳನಾಮಗಳ ಭಾಷಿಕ ವಿಶ್ಲೇಷಣೆಯನ್ನು ಅಧ್ಯಯನದ ಉಪಯೋಗಕ್ಕಾಗಿ ಜಲವಾಚಿ, ವ್ಯಕ್ತಿವಾಚಿ, ಸಸ್ಯವಾಚಿ, ವಸ್ತುವಾಚಿ, ಪ್ರಾಣಿವಾಚಿ, ದೈವವಾಚಿ, ಜಾತಿವಾಚಿ ಸ್ಥಳನಾಮಗಳ ಕುರಿತು ವರ್ಗೀಕರಿಸಲಾಗಿದೆ.

ಅಧ್ಯಾಯ ಆರು: ಈ ಅಧ್ಯಾಯದಲ್ಲಿ ಸಮಾರೋಪವಾಗಿದ್ದು ಒಟ್ಟಾರೆ ಅಧ್ಯಯನದ ಮೂಲಕ ಕಂಡುಕೊಂಡ ಫಲಿತಗಳನ್ನು ತಿಳಿಸಲಾಗಿದೆ. ಈ ಅಧ್ಯಯನದ ಅನುಬಂಧದಲ್ಲಿ ಆಕರ ಗ್ರಂಥಗಳು, ವಕ್ತೃವಿವರ, ಸ್ಥಳನಾಮಗಳ ಪಟ್ಟಿ, ನಕಾಶೆಗಳನ್ನು ನೀಡಲಾಗಿದೆ.

❖❖❖

ಅಧ್ಯಾಯ : ಎರಡು

ಕನ್ನಡ ಸ್ಥಳನಾಮ ಅಧ್ಯಯನದ ಸಮೀಕ್ಷೆ

ಅಧ್ಯಾಯ: ಎರಡು

ಕನ್ನಡ ಸ್ಥಳನಾಮಾಧ್ಯಯನ ಸಮೀಕ್ಷೆ

ಸ್ಥಳನಾಮಗಳನ್ನು ಕುರಿತಂತೆ ಎರಡು ಶತಮಾನ ಕಾಲದಿಂದಲೂ ಅಧ್ಯಯನಗಳು ನಡೆಯುತ್ತ ಬಂದಿವೆ ಎಂದು ಹೇಳುಬಹುದು. ಸ್ಥಳನಾಮ ಅಧ್ಯಯನದ ಮಹತ್ವವನ್ನು ಹಲವಾರು ವಿದ್ವಾಂಸರು ತಮ್ಮ ಅಧ್ಯಯನಗಳ ಸಂದರ್ಭದಲ್ಲಿ ವಿವರಿಸಿದ್ದಾರೆ.

ಸ್ಥಳನಾಮ ಅಧ್ಯಯನ ನಡೆಸಿದ ಮೊದಲ ಸಂಶೋಧಕ ಗಾಟ್‌ಫ್ರೀಡ್ ವಿಲ್‌ಹೆಲ್ಮ್ ಲೀಬ್ನಿಜ್, ೧೭೬೮ರ ನಂತರ ಇಕ್ಬಾಲ್, ಗಾರ್ಡಿನರ್, ನಾರ್ವೆಯರೈ ಇನ್ನು ಮುಂತಾದ ಪಾಶ್ಚಿಮಾತ್ಯ ವಿದ್ವಾಂಸರು ಸ್ಥಳನಾಮಗಳ ಅಧ್ಯಯನಕ್ಕೆ ತಮ್ಮನ್ನು ಅನುವುಮಾಡಿಕೊಂಡರು. ಸ್ಥಳನಾಮಗಳ ಕುರಿತಂತೆ ೧೮೪೧ರ ನಂತರ ಸುವ್ಯವಸ್ಥಿತ ಅಧ್ಯಯನ ಯುಗವು ಪ್ರಾರಂಭವಾಯಿತು ಎನ್ನಬಹುದು. ಭಾರತದಲ್ಲಿ ಬಿ.ಸಿ.ಲಾ. ಮತ್ತು ಸಂಕಾಲಿಯಾ ಅವರ ಬರಹಗಳು ಸ್ಥಳನಾಮ ಅಧ್ಯಯನದಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಸ್ಥಳನಾಮ ಅಧ್ಯಯನ ಮಾಡಿದ ಶಂಬಾಜೋಶಿಯವರು "ಎಡೆಗಳು ಹೇಳುವ ಕಂನಾಡ ಕಥೆ" ಕೃತಿಯ ನೆಲೆಯಲ್ಲಿ ಸ್ಥಳನಾಮಗಳ ಮುಖೇನ ಗುರುತಿಸುವಂಥ ಮಹತ್ವದ ಅಧ್ಯಯನ ಮಾಡಿದರು. ಹಾಗೂ ಅರ್ಥೈಸಿಕೊಳ್ಳುವ ಭಿನ್ನ ರೂಪವನ್ನು ತೋರಿಸಿಕೊಟ್ಟಿದ್ದಾರೆ.

ಕರ್ನಾಟಕದಲ್ಲಿ Place Name Socity of India ಸಂಸ್ಥೆಯು ೧೯೭೯ ರಲ್ಲಿ ಬೆಳಕಿಗೆ ಬಂದ ನಂತರ ಸ್ಥಳನಾಮ ಅಧ್ಯಯನದಲ್ಲಿ ಪ್ರತಿವರ್ಷವೂ ವಿಚಾರಸಂಕಿರಣಗಳನ್ನು ಹಾಗೂ ಚರ್ಚೆಗಳನ್ನು ನಡೆಸುತ್ತಿದ್ದು ಒಂದು ಪ್ರಮುಖ ಅಧ್ಯಯನ ಕ್ಷೇತ್ರವಾಗಿ ಪ್ರಚಾರಗೊಂಡಿದೆ. ಪ್ರತಿವರ್ಷವೂ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಮಂಡಿಸಲ್ಪಟ್ಟ ಸಂಶೋಧನಾ ಪ್ರಬಂಧಗಳನ್ನು ಪ್ರಕಟಗೊಳಿಸುವುದು ಹಾಗೂ ಹೊಸ ವಿಷಯಗಳಿಗೆ ಹೊಸ ಅನ್ವೇಷಣೆಗಳಿಗೆ ಅವಕಾಶ ಒದಗಿಸಿಕೊಡುತ್ತದೆ.

ಇತ್ತೀಚೆಗೆ ಅಧ್ಯಯನಗಳು ಪ್ರಕಟಗೊಂಡಿದ್ದು ಸ್ಥಳನಾಮಗಳನ್ನು ಕುರಿತು ಅನೇಕ ಕೃತಿಗಳು ಹಲವಾರು ಸಂಶೋಧನೆಗೆ ಒಳಗೊಂಡಂತೆ ಎಂಫಿಲ್., ಪಿಎಚ್.ಡಿ. ಪದವಿಗಳನ್ನು ವಿಶ್ವವಿದ್ಯಾಲಯಗಳಲ್ಲಿ ಹೆಸರುಗಳಿಸಿದೆ. ಇದೊಂದೆ ಅಲ್ಲದೆ ಹಲವಾರು ಬಿಡಿ ಲೇಖನಗಳು, ಪುಸ್ತಕಗಳು, ನಿಯತಕಾಲಿಕೆಗಳಲ್ಲಿ ಬಂದಿವೆ. ಈ ಎಲ್ಲವೂ ಒಳಗೊಂಡಂತೆ ಸ್ಥಳನಾಮ ಅಧ್ಯಯನಕ್ಕೆ ನಡೆದಿರುವ ಅಧ್ಯಯನಗಳನ್ನು ಈ ಕೆಳಕಂಡ ಕೃತಿಗಳಲ್ಲಿ ಹಾಗೂ ಬರಹಗಳಲ್ಲಿ ತಿಳಿಯಬಹುದಾಗಿದೆ.

* **ಎಡೆಗಳು ಹೇಳುವ ಕಂನಾಡ ಕತೆ– ಡಾ. ಶಂಬಾಜೋಷಿ ೧೯೪೭:** ಎಡೆಗಳು ಹೇಳುವ ಕಂಡನಾಡ ಕತೆ ಶಂಬಾಜೋಷಿ ಅವರ ಅತ್ಯಂತ ಮಹತ್ವದ ಕೃತಿ. ಈ ಕೃತಿಯು ಸ್ಥಳನಾಮ ಅಧ್ಯಯನಕ್ಕೆ ಪ್ರಾಶಸ್ತ್ಯ ನೀಡಿದ ಮೊದಲ ಕೃಯಾಗಿದೆ. ಸ್ಥಳನಾಮಗಳ ಅಧ್ಯಯನದಿಂದ ಪುರಾಣ ಸಂಗತಿಗಳನ್ನು ತಿಳಿಯಪಡಿಸುವ ಹಿನ್ನೆಲೆಯಲ್ಲಿ ಸಂಶೋಧನೆ ಸ್ಥಳನಾಮ ಅಧ್ಯಯನಕ್ಕೆ ಒಳಗೊಂಡಿರುತ್ತದೆ.

ಸ್ಥಳನಾಮ ಅಧ್ಯಯನ ವೈಜ್ಞಾನಿಕ ಅಲ್ಲದಿದ್ದರೂ ಸಂಬಂಧಿಸಿದ ಮಾಹಿತಿ ಪ್ರಮಾಣಿಕವಾಗಿ ಪಡೆದಿರುತ್ತದೆ. ಒಂದು ಊರಿನ ಹೆಸರು ತಿಳಿದ ಮರುಕ್ಷಣವೇ ಆ ಊರಿಗೆ ಸಂಬಂಧಪಟ್ಟ ಮಾಹಿತಿಗಳು ನಮ್ಮಲ್ಲಿ ಮೂಡಿಬರುತ್ತವೆ. ಪಟ್ಟಿ, ಪಾಡಿ, ವಾಡ, ಹಟ್ಟಿ ಮುಂತಾದ ರೂಪಗಳು ಜನಾಂಗದ ವಾಸಸ್ಥಾನ ಅಂಶಗಳಾಗಿ ಹೊಂದಿರುತ್ತವೆ. ಎಡೆಗಳು ಹೆಸರು ತಿಳಿಯುವಲ್ಲಿ ಮುನುಷ್ಯನಲ್ಲಿ ಆಲೋಚನೆಗಳು ಅಭಿಪ್ರಾಯಗಳು ಹುಟ್ಟಿಕೊಳ್ಳುತ್ತವೆ.

ಮಾನವನಿಗೆ ಹಟ್ಟಿಗಳು ಆರಂಭದ ವಸತಿಗಳೆಂದೂ ಗ್ರಾಮ, ಪುರ, ಊರು, ಮನೆ ಮುಂತಾದವು ಅನಂತರದಲ್ಲಿ ಬಂದ ಅತ್ಯಂತ ಮಹತ್ವವೆಂದು ಅಭಿಪ್ರಾಯಪಟ್ಟಿದ್ದಾರೆ.

* **ಕನ್ನಡ ಐತಿಹ್ಯಗಳು: ಜಿ.ವಿ.ಡಿ. ೧೯೭೮:** ಸ್ಥಳನಾಮಗಳಲ್ಲಿ ಐತಿಹ್ಯಗಳು ಕಂಡುಕೊಳ್ಳುವ ಪರಿಯನ್ನು ಕೃತಿಯಲ್ಲಿ ತಿಳಿಯುವಂಥದ್ದು. ಒಂದು ಸ್ಥಳದಲ್ಲಿ ಬೆಟ್ಟ ಕಲ್ಲುಗಳು ಪ್ರಮುಖ ಸ್ಥಳ ವ್ಯಕ್ತಿ, ಕೆರೆ ಬಗೆಗೆ ಇರುವ ಐತಿಹ್ಯಗಳನ್ನು ಜನಪರ ಕಥೆಯ ಸಂಸ್ಕೃತಿಕ ಧಾರ್ಮಿಕ ಐತಿಹಾಸಿಕ ಸ್ಥಳಗಳಲ್ಲಿ ಕಂಡುಬರುವ ಐತಿಹ್ಯಗಳನ್ನು ನೋಡುವ ಕಾರ್ಯ ಹೊಂದಿದೆ ಎಂದು ಹೇಳಬಹುದು.

* **ವಾಗರ್ಥ. ಡಾ.ಎಂ.ಚಿದಾನಂದ ಮೂರ್ತಿ:** ೧೯೮೧ ಸ್ಥಳನಾಮ ಅಧ್ಯಯನಕ್ಕೆ ಪ್ರಮುಖವಾದ ಆಕರ ಕೃತಿಯಾಗಿದೆ. ಸ್ಥಳನಾಮ ಹಾಗೂ ವ್ಯಕ್ತಿನಾಮ ಕುರಿತು ಲೇಖಗಳು ಈ ಕೃತಿಯಲ್ಲಿದ್ದು ಸ್ಥಳನಾಮ ಅಧ್ಯಯನ ಮಾಡಲು ವಾರ್ಗಿಕ ವರ್ಗಿಕರಣ ಲೇಖನಗಳನ್ನು ಬಳಸಿಕೊಂಡಿದೆ. ಕರ್ನಾಟಕ ಸ್ಥಳನಾಮಗಳು ಎಂಬಲ್ಲಿ ಸ್ಥಳಗಳಲ್ಲಿನ ನಿರ್ದಿಷ್ಟ ಹಾಗೂ ವಾರ್ಗಿಕ ಕುರಿತಂತೆ ವಿಶ್ಲೇಷಣೆ ಮಾಡಿದ್ದಾರೆ.

ತಮಟಕಲ್ಲು ಶಾಸನ ದೇಕಬ್ಬೆ ಶಾಸನ ಸ್ಥಳನಾಮಗಳನ್ನು ಕುರಿತು ಲೇಖನದಲ್ಲಿ ಇತಿಹಾಸಕ್ಕೆ ಸಂಬಂಧಪಟ್ಟಂತೆ ನಾಡುಗಳಲ್ಲಿ ಉಲೇಖಿತವಾಗಿರುವ ಊರುಗಳನ್ನು ನೋಡಬಹುದಾಗಿದೆ.

* **ಹೆಸರಲ್ಲೇನಿದೆ? ಆರ್ಕೆ ಮಣಿಪಾಲ್, ೧೯೮೯:** ಈ ಕೃತಿಯು ಕೆಮ್ತೂರು ರಘುಪತಿ ಭಟ್ಟರ ತುಳುನಾಡಿನ ಸ್ಥಳನಾಮಗಳು ಅಧ್ಯಯನದ ಮುಂದುವರೆದ ಭಾಗವಾಗಿದೆ. ಸ್ಥಳನಾಮಾಧ್ಯಯನದ ಸಾಧ್ಯತೆ ಮತ್ತು ಸಾಧನೆ, ಸ್ವರೂಪ ಮತ್ತು ಸಮಸ್ಯೆ, ಸ್ಥಳನಾಮ ಮತ್ತು ವ್ಯಕ್ತಿನಾಮಗಳ ರಾಚನಿಕ ಅಧ್ಯಯನವನ್ನು ಕೃತಿಯು ಒಳಗೊಂಡಿದೆ. ಉಡುಪಿ ತಾಲ್ಲೂಕಿನ ಸ್ಥಳನಾಮಗಳಲ್ಲಿನ ವಿಶೇಷತೆಯನ್ನು ಲೇಖಕರು ಗುರುತಿಸಿ ಅಧ್ಯಯನ ಮಾಡಿದ್ದಾರೆ.

* **ಕನ್ನಡ ನಾಮ ವಿಜ್ಞಾನ: ಡಾ.ಎಂ.ಎಂ. ಕಲ್ಬುರ್ಗಿ ೧೯೮೯** ಇತಿಹಾಸ ಭೌಗೋಳಿಕ, ಜಾನಪದ, ಸಾಂಸ್ಕೃತಿ ಹಾಗೂ ಭಾಷಿಕ ಸ್ತರಗಳಲ್ಲಿ ನಾಮವಿಜ್ಞಾನ ಅಧ್ಯಯನವನ್ನು ಕೃತಿಯಲ್ಲಿ ಒಳಗೊಂಡಿದೆ. ನಾಮ ವಿಜ್ಞಾನ ಸಂಶೋಧಕರಿಗೆ ಅನೇಕ ಒಳಹುಗಳನ್ನು ತಿಳಿಸುವ ಕೃತಿಯಾಗಿದೆ. ಅಧ್ಯಯನ ವಿಧಾನ ಉದ್ದೇಶ ಸ್ವರೂಪ ಆಕರ ಸಾಮಾಗ್ರಿ ಕುರಿತ ಮುಂತಾದ ವಿಚಾರಗಳನ್ನು ಕೃತಿಯಲ್ಲಿ ವಿವರಿಸಲಾಗಿದೆ.

* **ಬೀದರ ಜಿಲ್ಲೆಯ ಸ್ಥಳನಾಮಗಳು:** ಭಂಡೆ ವೈಜನಾಥ ೧೯೯೦ (ಅ.ಪ್ರ) ಸ್ಥಳನಾಮಧ್ಯಯನ ಮಾಡಿರುವ ಈ ಕೃತಿಯಲ್ಲಿ ಸಂಶೋಧನೆಗೆ ಒಳಗೊಂಡಂತೆ ಪೂರಕವಾದ ಮಾಹಿತಿಯನ್ನು ತೆಗೆದುಕೊಂಡಿದೆ. ಸ್ಥಳನಾಮ ಅಧ್ಯಯನದಲ್ಲಿ ನಿಷ್ಪತ್ತಿಯ ಕಡೆಗೆ ಗಮನ ಹರಿಸಿಲ್ಲ. ಅನಗತ್ಯವಾದ ಭೌಗೋಳಿಕ ಪರಿಸರ ಇತಿಹಾಸ ಹಾಗೂ ಅಲ್ಲಿನ ಕನ್ನಡ ಉಪಭಾಷೆಯ ವಿವರಗಳನ್ನು ಒಳಗೊಂಡಿದೆ. ಅಲ್ಲದೆ ಸ್ಥಳನಾಮಗಳ ಭಾಷಿಕ ವಿವರಗಳನ್ನು ಅಧ್ಯಯನದಲ್ಲಿ ಗುರುತಿಸಬಹುದು. ಸ್ಥಳನಾಮ ಸಾಂಸ್ಕೃತಿಕ ಜಾನಪದ ಪುರಾಣ ಹಿನ್ನೆಲೆ ಹಾಗೂ ಐತಿಹ್ಯಗಳನ್ನು ಒಳಗೊಂಡಿದ್ದು ವಿವಿಧ ಆಯಾಮಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಒಳಗೊಂಡಿದೆ ಎಂದು ಹೇಳಬಹುದಾಗಿದೆ.

* **ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು ಡಾ. ಜಾಜಿ ದೇವೇಂದ್ರಪ್ಪ ೨೦೦೪.**

ಈ ಒಂದು ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಜಾಜಿ ದೇವೇಂದ್ರಪ್ಪನವರು ಸಲ್ಲಿಸಿರುವ ಪಿ.ಎಚ್.ಡಿ. ನಿಬಂಧವಾಗಿದೆ. ಕರ್ನಾಟಕ ಆಂಧ್ರ ಗಡಿನಾಡಿನ ಸ್ಥಳನಾಮಗಳ ಕುರಿತು ಅಧ್ಯಯನವಾಗಿದೆ. ದ್ವಿಭಾಷಿಕ ಪರಿಸರದಲ್ಲಿನ ಸ್ಥಳನಾಮಗಳ ರಚನೆ ಮತ್ತು ಬಳಕೆ ಕುರಿತಂತೆ ವಿಶ್ಲೇಷಣೆ ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

* **ಗ್ರಾಮನಾಮಗಳ ಸಂಸ್ಕೃತಿಕ ಪರಿವೇಷ ಡಾ. ವಿಶ್ವನಾಥ ೨೦೦೦:** ಗ್ರಾಮನಾಮಗಳ ಚರಿತ್ರೆಯನ್ನು ಆರಂಭದ ಆದಿಮಾನವನ ಕಾಲದಿಂದ ಹಳ್ಳಿಯ ಹುಟ್ಟಿನವರೆಗೆ ಹೇಗಾಯಿತೆಂಬುದನ್ನು ಹೇಳುತ್ತಾರೆ. ಗ್ರಾಮನಾಮಗಳ ಸಂಸ್ಕೃತಿಯ ಪರಿವೇಷ ಕೃತಿಯು ಸ್ಥಳನಾಮ ಅಧ್ಯಯನದ ಹಿನ್ನೆಲೆಯಲ್ಲಿರುವ ಮೂಲಸೌಕರ್ಯವಾದ ಅಂಶಗಳು ಹಾಗೂ ಸಂಶೋಧಾನ ನಿಬಂಧದ ವಿಷಯಗಳು ಒಳಗೊಂಡಿದೆ.

* **ಸ್ಥಳನಾಮಗಳ ಪರಿವರ್ತನೆ ಮತ್ತು ಪ್ರಭಾವ** (ಸಂ.) **ಕೆ.ವಿ. ನಾರಾಯಣ ೧೯೯೯:** ಈ ಪುಸ್ತಕವು ಆರು ಅಂಶಗಳನ್ನು ಒಳಗೊಂಡಿದ್ದು. ಸ್ಥಳನಾಮ ಅಧ್ಯಯನ ಭಾಷಿಕ ಆಧಾರದ

ಮೇಲೆ ಆಗಿರುವ ಪ್ರಭಾವಗಳು ಹಾಗೂ ಪರಿವರ್ತನೆಗಳನ್ನು ಇಟ್ಟುಕೊಂಡು ಕರ್ನಾಟಕದಲ್ಲಿ ನಡೆದಿರುವ ಸ್ಥಳನಾಮಗಳ ಕುರಿತ ಬರೆದ ಲೇಖನಗಳ ಸಂಕಲನ ಇದಾಗಿದೆ.

ಡಾ.ವಿ. ಗೋಪಾಲಕೃಷ್ಣರವರು ಕರ್ನಾಟಕದ ಸ್ಥಳನಾಮಗಳ ಮೇಲೆ ಆರ್ಯ ಸಂಸ್ಕೃತ ಭಾಷೆಯ ಪ್ರಭಾವಗಳಿಂದ ಸ್ಥಳನಾಮ ರಚನೆಯಲ್ಲಿ ಪರಿವರ್ತನೆಗಳನ್ನು ತಿಳಿಸಿದ್ದಾರೆ. ಇಂಗ್ಲಿಷ್ ಭಾಷೆಯ ಪ್ರಭಾವವನ್ನು ಗುರುತಿಸಿ ಡಿ. ಪಾಂಡುರಂಗ ಬಾಬುರವರು ಸ್ಥಳನಾಮಗಳನ್ನು ವಿವರಿಸಿದ್ದಾರೆ. ಡಾ.ಎಸ್.ಎಸ್. ಅಂಗಡಿಯವರು ಕರ್ನಾಟಕದ ಸ್ಥಳನಾಮಗಳ ಮೇಲೆ ದ್ರಾವಿಡ ಭಾಷಾ ಪ್ರಭಾವನೆಗಳನ್ನು ವಿವರಿಸಿದ್ದಾರೆ ಹಾಗೂ ಮರಾಠಿ ಪ್ರಭಾವವನ್ನು ಎಂ.ಬಿ. ನೇಗಿನಹಾಳ್ ಸ್ಥಳನಾಮ ಅಧ್ಯಯನ ಒಳಗೊಂಡಂತೆ ವಿವರಿಸಿದ್ದಾರೆ. ಇಸ್ಲಾಂ ಉರ್ದು ಪ್ರಭಾವವನ್ನು ಡಾ.ಕೆ.ಎಂ. ವೀರಭದ್ರಶರ್ಮರವರು ವಿವರಿಸಿದ್ದಾರೆ ಎಂದು ತಿಳಿಯಬಹುದಾಗಿದೆ.

* **ಭಾಷೆ: ವಿಶ್ವಕೋಶ ಕನ್ನಡ ವಿಶ್ವವಿದ್ಯಾಲಯ (ಸಂ.) ಕೆ.ವಿ.ನಾರಾಯಣ:** ಹೆಸರುಗಳು ಎಂಬ ಲೇಖನದಲ್ಲಿ ಡಾ.ಕೆ. ವೀರಭದ್ರಶರ್ಮರವರು ವ್ಯಕ್ತಿನಾಮ ಹಾಗೂ ಸ್ಥಳನಾಮ ಕುರಿತು ವಿಶ್ಲೇಷಿಸಿದ್ದಾರೆ. ಸ್ಥಳನಾಮಗಳು ಪ್ರಥಮ ಹಂತವಾಗಿದ್ದು ವಿಶಿಷ್ಟ ಘಟಕಗಳನ್ನು ಗುರುತಿಸಿದ್ದಾರೆ. ಘಟಕಗಳ ವರ್ಗಿಕರಣ ಮಾಡಿದ್ದು ಶಿಲಾವಾಚಿ ಜಲವಾಚಿ, ಸಸ್ಯವಾಚಿ, ಪ್ರಾಣಿವಾಚಿ, ಸಾಂಸ್ಕೃತಿಕ ಸಾಮಾಜಿಕ ಪೌರಾಣಿಕ ಐತಿಹಾಸಿಕ ಹಾಗೂ ಧಾರ್ಮಿಕ ಅಂಶಗಳನ್ನೊಳಗೊಂಡತೆ ಸ್ಥಳನಾಮ ನಿಷ್ಪತ್ತಿಗೆ ಕಾರಣವಾಗುವ ವಿಚಾರಗಳನ್ನು ತಿಳಿಸಲಾಗಿದೆ.

* **ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು ಡಾ.ಕೆ.ಎಂ. ವೀರಭದ್ರಶರ್ಮ, ೧೯೯೬:** ಭೌಗೋಳಿಕ ಪರಿಸರ, ಸಾಂಸ್ಕೃತಿಕ, ಜನಾಂಗಿಕ ಎಂಬ ವರ್ಗೀಕರಣಗಳನ್ನು ಒಳಗೊಂಡಿದೆ. ಸ್ಥಳನಾಮ ಅಧ್ಯಯನವು ಧಾರ್ಮಿಕತೆಯ ಮಹತ್ವವನ್ನು ಹೊಂದಿದ್ದು, ಈ ನಿರ್ಬಂಧದಲ್ಲಿ ವರ್ಗೀಕರಣಗಳನ್ನು ಹೆಚ್ಚು ಗಮನಿಸದೆ ಹೆಚ್ಚು ಉಪಭಾಷೆಯ ಬಗೆಗೆ ತಿಳಿಯುವ ಮೂಲಕ ನೇರವಾಗಿ ಗ್ರಾಮನಾಮಗಳಿಗೆ ತಳುಕು ಹಾಕುವುದಿಲ್ಲ.

* **ಜಾನಪದ ಸಿರಿ–ಡಾ–ಬಸವರಾಜ ಪಾಟೀಲ ೧೯೯೦:** ಐತಿಹ್ಯಗಳು ಪತ್ತೆಯಾದ ನಂತರ ವಿಚಾರಗಳನ್ನು ಅವುಗಳಲ್ಲಿ ಪ್ರಮುಖವಾಗಿ ಕಂಡುಬರುವ ದೈವಪುರಾಣ ಆದಿಮಾನವನ ಶಕ್ತಿ ಮುಂತಾದ ಸ್ಥಳೀಯ ಐತಿಹ್ಯಗಳ ಮಾಹಿತಿ ಸಂಪ್ರಬಂಧವು ಒಳಗೊಂಡಿದೆ.

* **ಕೋಲಾರ ಜಿಲ್ಲೆಯ ಸ್ಥಳನಾಮಗಳು ಸಾಮಾಜಿಕ ಭಾಷಾಶಾಸ್ತ್ರ ಅಧ್ಯಯನ: ವಿ.ಗೋಪಾಲಕೃಷ್ಣ ೧೯೮೮ ಪಿ.ಎಚ್.ಡಿ.** (ಅ.ಪ್ರ): ಕೋಲಾರ ಜಿಲ್ಲೆಯ ಸ್ಥಳನಾಮ ನಿಷ್ಪನ್ನ ಕುರಿತಂತೆ ಅಧ್ಯಯನವನ್ನು ಒಳಗೊಂಡಿದೆ. ಇಲ್ಲಿ ಸಾಮಾಜಿಕ ಹಾಗೂ ವರ್ಣನಾತ್ಮಕ ವಿಶ್ಲೇಷಣೆಯನ್ನು ಸಂಶೋಧಕರು ಮಾಡಿದ್ದಾರೆ. ಸ್ಥಳನಾಮಗಳ ಸಂಗ್ರಹಣೆ ಅಧ್ಯಯನ ವಿಧಾನ ಆಕೃತಿಯ ರಚನೆ ಸಂಧಿಕಾರ್ಯ ನಡೆದಿರುವುದು ಒಂದು ನಿರ್ದಿಷ್ಟ ಅರ್ಥ ವಾರ್ಗಿಕಗಳ ವರ್ಗೀಕರಣ ಮುಂತಾದ ವಿವರಗಳನ್ನು ಒಳಗೊಂಡಿದೆ.

* **ಜಾನಪದ ಜಗತ್ತು ಸಂ. ಪ್ರೊ.ಡಿ.ಲಿಂಗಯ್ಯ ಮತ್ತು ಡಾ. ಚಕ್ಕರೆ ಶಿವಸಂಕರ:** ೧೯೯೬ (ಸ್ಥಳನಾಮ ಅಧ್ಯಯನ ವಿಶ್ಲೇಷನ ಸಂಚಿಕೆ) ಸ್ಥಳನಾಮಗಳ ಕುರಿತಂತೆ ಜಾನಪದ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಿದ ಪ್ರಬಂಧಗಳು ಒಳಗೊಂಡಿವೆ. ಕರ್ನಾಟಕ ಗ್ರಾಮನಾಮಗಳ ಮೇಲೆ ಪ್ರಭಾವ ಬೀರುವ ಪರಿವರ್ತನೆಗಳು ಹಾಗೂ ಹೊಂದುವ ಒಂದು ಊರಿನ ಜಾನಪದ ಹಿನ್ನೆಲೆಯಲ್ಲಿ ಸ್ಥಳನಾಮಗಳನ್ನು ಕಟ್ಟು ಕಥೆಗಳ ಮೂಲಕ ಕಟ್ಟಿಕೊಡುವ ಒಂದು ಪ್ರಾಮುಖ್ಯತೆಯನ್ನು ಪಡೆದಿರುತ್ತದೆ, ಸ್ಥಳನಾಮ ಅಧ್ಯಯನ, ಕರ್ನಾಟಕ ಗಡಿ ಪ್ರದೇಶದ ವಿಶಿಷ್ಟತೆ ಕುರಿತಂತೆ ಈ ಕೃತಿಯಲ್ಲಿ ಚರ್ಚಿಸಲಾಗಿದೆ.

* **ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು ಸಂ. ಲಕ್ಷಣ ತೆಲಗಾವಿ ಎಂ.ವಿ. ಶ್ರೀನಿವಾಸ ೧೯೭೬** ಈ ಕೃತಿಯು ಐತಿಹಾಸಿಕ ಮಹತ್ವ ಪಡೆದ ಸ್ಥಳನಾಮಗಳ ವಿವರಗಳನ್ನು ಒಳಗೊಂಡಿದೆ. ಹಲವಾರು ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೆಲೆಯ ಅಂಶಗಳನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ. ಕನ್ನಡ ನಾಡಿನ ಊರುಗಳು ಲೇಖನವು ನಾಡಿನ ವಿಸ್ತಾರವನ್ನು ಹೇಳುವುದರ ಜೊತೆಯಲ್ಲಿ ಸಂತ್ತೆಬೆನ್ನೂರು ಹಂಪೆ, ಅನಂತಪುರ ಇನ್ನೂ ಮುಂತಾದ ಸ್ಥಳಗಳ ಶಾಸನೋಕ್ತ ಐತಿಹಾಸಿಕ ಅಂಶಗಳನ್ನು ದಾಖಲಿಸಿದ್ದಾರೆ.

ಬಸವಣ್ಣನವರ ಹೆಸರಿಸುವ ಊರುಗಳು ಹಿ.ಚೀ. ಶಾಂತವೀರಯ್ಯ: ಕರ್ನಾಟಕದಲ್ಲಿ ನಡೆದ ವಚನ ಚಳುವಳಿಯಲ್ಲಿ ಅತ್ಯಂತ ಪ್ರಾಮುಖರಾದವರು ಬಸವಣ್ಣನವರು ಇವರ ಭಕ್ತಿ ಚಳುವಳಿಯು ಸಹ ಮಹತ್ವ ಪಡೆದ ಅಂಶವಾಗಿದೆ. ಬಸವಣ್ಣನವರ ಪ್ರಭಾವದಿಂದ ಅವರ ಹೆಸರಿನಲ್ಲಿ ಊರುಗಳು ಸೃಷ್ಟಿಯಾಗಿವೆ.

ಬಸವನಹಳ್ಳಿ, ಬಸಾಪುರ, ಬಸವಪುರ, ಬಸವಪಟ್ಟಣ, ಬಸವಾಪಟ್ಟಣ ಎಂಬ ಊರುಗಳನ್ನು ಉದಾಹರಣೆಯಾಗಿ ನೀಡಿ ಕೆಲವು ಊರುಗಳನ್ನು ಲೇಖನದಲ್ಲಿ ಗುರುತಿಸಿದ್ದಾರೆ. ಬಸವ ಎಂಬ ಪದವು ನಿರ್ದಿಷ್ಟ ಹೆಸರನ್ನು ಸೂಚಿಸುವುದಾದರೂ ಎಲ್ಲಾ ಪ್ರಕಾರಗಳಲ್ಲೂ ಇದೇ ಕಾರಣವೆಂದು ಹೇಳಲಾಗದು. ಆದುದರಿಂದ ಈ ರೀತಿಯ ಒಳಗೊಳ್ಳುವಿಕೆಯ ಅಸಾಧುವಾಗಿದೆ ಎಂದು ಹೆಳಬಹುದು.

* **ಜಾನಪದ ಸಿರಿ, ಡಾ. ಬಸವರಾಜ ಪೋಲೀಸ ಪಾಟೀಲ ೧೯೯೦:** ಐತಿಹ್ಯಗಳು ಸೃಷ್ಟಿಯಾದ ಹಿನ್ನೆಲೆಯ ವಿವರಗಳನ್ನು ತಿಳಿದು ಅವುಗಳಲ್ಲಿ ಪ್ರಮುಖವಾಗಿ ಬರುವ ದೈವ ಪುರಾಣ ಮುಂತಾದ ಅಂಶಗಳನ್ನು ಐತಿಹ್ಯಗಳು ಒಳಗೊಂಡಿದೆ. ಈ ಐತಿಹ್ಯಗಳು ಸ್ಥಳನಾಮಾಧ್ಯಯನದಲ್ಲಿ ಹೀಗೆ ನಿಷ್ಪನ್ನಗಳಿಗೆ ಸಂಬಂಧಿಸಿದೆ ಎಂಬುದನ್ನು ತಿಳಿಸಲಾಗಿದೆ.

* **ಜಾನಪದ ಸ್ಪಂದನ, ಪ್ರೊ. ಸಿ.ಕೆ. ನಾವಲಗಿ ೧೯೯೨:** ಐತಿಹ್ಯ ಶಾಸನಾತ್ಮಕ ಪುರಾಣ ಮುಂತಾದ ನೆಲೆಗಳಲ್ಲಿ ಸ್ಥಳನಾಮಾಧ್ಯಯನ ಒಳಗೊಂಡಿರುತ್ತದೆ ಎಂದು ತಿಳಿಯುವುದು ಶಾಸನಾತ್ಮಕ

ಹಿನ್ನೆಲೆಯ ವಿವರಗಳನ್ನು ಹೊಂದಿದ್ದು ಜಾನಪದ ಆಡು-ನುಡಿಯಲ್ಲಿ ಸ್ಥಳನಾಮಾಧ್ಯಯನ ನಿಷ್ಪನ್ನಗಳಿಗೆ ಸಂಬಂಧಿಸಿದ ಚರ್ಚೆ ಈ ಕೃತಿಯಲ್ಲಿ ನೋಡಬಹುದು.

* **ಕೆಲವು ದೇಶನಾಮಗಳು, ಸೇಡಿಯಾಪು ಕೃಷ್ಣಭಟ್ಟ ೧೯೭೫:** ತುಳು ಭಾಷಾ ಬಳಕೆಯ ಪ್ರದೇಶ ನಿಷ್ಪತ್ತಿಯ ಅಧ್ಯಯನವನ್ನು ಒಳಗೊಂಡಿದೆ. ಈ ಪದಗಳು ದೇಶವಾಚಕ ಪದವೆಂದು ತಿಳಿಸುವ ಲೇಖಕರು ಅದನ್ನು ಅಳ-ಕುಳಗಳ ಪ್ರಾಯೋಗ ಹಾಗೂ ತುಳು ಭಾಷೆಯಲ್ಲಿ ಬಳಕೆಯಾಗುವ ಅಳ (ಕುಳ) ವಿವರಗಳನ್ನು ಕೃತಿಯು ಒಳಗೊಂಡಿದೆ. ಸಂಸ್ಕೃತಿಯ ಹಿನ್ನೆಲೆಯಲ್ಲಿ ಸ್ಥಳನಾಮಗಳ ಅಧ್ಯಯನವನ್ನು ಮಾಡಲಾಗಿದೆ.

* **ಕರ್ನಾಟಕ ಗೆಝೆಟಿಯರ್ -೩- ಕರ್ನಾಟಕ ಸರ್ಕಾರದ ಪ್ರಕಟಣೆ ೧೯೮೬:** ಕರ್ನಾಟಕದ ವಿವರಗಳನ್ನೊಳಗೊಂಡಿರುವ ಮೂರನೆ ಭಾಗದಲ್ಲಿ ಕರ್ನಾಟಕದ ಪ್ರೇಕ್ಷಣಿಯ ಸ್ಥಳಗಳ ವಿವರಣೆಯನ್ನು ನೀಡಲಾಗಿದೆ. ಇದು ಕೆಲವು ಸೌಂದರ್ಯ ಉದ್ದಿಮೆಗಳಿಂದ ನೀರಾವರಿ ಯೋಜನೆಗಳಿಂದ ಹೆಸರನ್ನು ಪಡೆದಿರುವ ಪ್ರಾಚೀನ ಸ್ಥಳನಾಮಗಳ ಪರಿಚಯವನ್ನು ಕೃತಿಯಲ್ಲಿ ಗಮನಿಸಬಹುದು. ಐತಿಹಾಸಿಕವಾಗಿ ಮಹತ್ವ ಪಡೆದ ಊರುಗಳ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ.

* **ಒಕ ಊರಿ ಕಥೆ, ಪ್ರೊ. ವೈ. ಬಾಲಗಂಗಾಧರರಾವ್ - ೨೦೦೦:** ತೆಲಗು ಸ್ಥಳನಾಮ ವಿಜ್ಞಾನದಲ್ಲಿ ಬಾಲಗಂಗಾಧರರಾವ್ ಅವರ ಹೆಸರು ಪ್ರಮುಖವಾದುದು. ಇವರು ಗ್ರಾಮನಾಮಗಳ ಅಧ್ಯಯನ ವೈಜ್ಞಾನಿಕವಾಗಿ ಮಾಡಿದ್ದಾರೆ. ಪ್ರಸ್ತುತ ಒಕ ಊರಿ ಕಥೆ ಎಂಬ ಕೃತಿಯಲ್ಲಿ ಆಂಧ್ರದ ಅನೇಕ ಪ್ರಮುಖ ಗ್ರಾಮ ನಾಮಗಳು ಹಾಗೂ ಕನ್ನಡದ ಕೆಲವು ಗ್ರಾಮಗಳು ದ್ವಿಭಾಷಿಕ ಹಿನ್ನೆಲೆಯಲ್ಲಿನ ಹಲವಾರು ಸ್ಥಳನಾಮಗಳ ನಿಷ್ಪತ್ತಿ, ಚಾರಿತ್ರಿಕ ಜಾನಪದೀಯ ಮಹತ್ವ, ಶಾಸನೋಕ್ತ ಹೆಸರುಗಳು ಮುಂತಾದ ವಿಚಾರಗಳನ್ನು ಪ್ರತಿಸ್ಥಳನಾಮಕ್ಕೂ ಕೊಡುತ್ತಾ ಹೋಗುತ್ತಾರೆ. ಇದೊಂದು ಸಂಗ್ರಹಯೋಗ್ಯ ಕೃತಿಯಾಗಿದೆ. ಸತ್ಯ ಸಂಗತಿಗಳನ್ನು ಪ್ರಾಮಾಣಿಕವಾಗಿ ಬರೆದಿದ್ದಾರೆ. ರಾವ್ ಅವರು ಭಾಷಿಕ ನೆಲೆಯಲ್ಲಿ ಹೆಚ್ಚಾಗಿ ಕಂಡಿಲ್ಲ. ಒಟ್ಟು ೪೩೧ ಗ್ರಾಮನಾಮಗಳ ಸಂಕ್ಷಿಪ್ತ ವಿವರಣೆಯಲ್ಲಿದೆ.

* **ಚಾಮರಾಜನಗರ ತಾಲೂಕಿನ ಸ್ಥಳನಾಮಗಳು ಎಂ.ನಂಜಯ್ಯ, ೨೦೦೦:** ಎಂ. ನಂಜಯ್ಯನವರ ಚಾಮರಾಜನಗರ ತಾಲೂಕಿನ ಸ್ಥಳನಾಮಗಳು ಎಂಬ ಅಪ್ರಕಟಿತ ಸಂಶೋಧನಾ ನಿಬಂಧವಾಗಿದೆ. ಭೌಗೋಳಿಕ ಐತಿಹಾಸಿಕ, ಜಾನಪದೀಯ ಶಾಸನ ಹಾಗೂ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗಳನ್ನು ಹೇಳಿದ್ದಾರೆ. ಸ್ಥಳನಾಮಗಳ ಭೌತಿಕ ವಿಶ್ಲೇಷಣೆಯನ್ನು ಮಾಡುತ್ತಾ ಭಾಷಿಕ ವ್ಯತ್ಯಾಸ ಮುಂತಾದುವನ್ನು ಸ್ಥಳನಾಮಧ್ಯಯನದಲ್ಲಿ ನೀಡಿದ್ದಾರೆ. ನಿಬಂಧದ ಕೊನೆಯಲ್ಲಿ ಸ್ಥಳನಾಮ ನಿಷ್ಪತ್ತಿ ಹಾಗೂ ಅದರ ರೂಪವನ್ನು ನೀಡಲಾಗಿದ್ದು. ಇಲ್ಲಿಯವರೆಗೂ ಕನ್ನಡದಲ್ಲಿ ಬಂದ ಸ್ಥಳನಾಮ ಅಧ್ಯಯನದಂತೆ ಇದು ಮುಂದುವರೆದಿದೆ.

ಡಾ. ಶಾಂಬಾ ಸಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ: ಎಸ್.ಎಂ. ಗಂಗಾಧರಯ್ಯ ೨೦೦೦ ಪಿ.ಎಚ್.ಡಿ. ಅ.ಪ್ರ. ಕನ್ನಡ ಸಂಸ್ಕೃತಿಯ ಜೀನಸ್ಥ ಗ್ರಹಿಕೆಗೆ ಹಾಗೂ ಮರಾಠಿಗರ ಕನ್ನಡ ಸಂಸ್ಕೃತಿಯನ್ನು ಗುರುತಿಸುವಾಗ ಶಂಬಾ ಅವರು ಸ್ಥಳನಾಮಗಳನ್ನು ಬಳಸಿಕೊಂಡಿದ್ದಾರೆ. ಕನ್ನಡ ಸಂಸ್ಕೃತಿಯ ಹುಡುಕಾಟಕ್ಕೆ ಬಳಸಿಕೊಂಡ ಅಂಶವಾಗಿದೆ. ಎಂಬುದನ್ನು ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ.

* **ಶತಮಾನದ ಲಲಿತ ಪ್ರಬಂಧ (ಸಂ) ಗುರುಲಿಂಗ ಕಾಪಸೆ ೨೦೦೧:** ಇದು ಲಲಿತ ಪ್ರಬಂಧ ಕೃತಿಯಾದರೂ 'ಸ್ಥಳಗಳ ಹೆಸರುಗಳು' ಎಂಬ ಒಂದು ಲೇಖನದಲ್ಲಿ ಎಂ. ರಾಮರಾವ್ ಅವರು ಒಂದು ಹಳ್ಳಿಯ ನಗರದ ಚರಿತ್ರೆಯನ್ನು ತಿಳಿಯಲು ನಮಗಿರುವ ಸುಲಭವಾದ ಸಾಧನಗಳಲ್ಲಿ ಊರಿನ ಹೆಸರೂ ಒಂದು ಹಾಗೂ ಭಾಷಾಶಾಸ್ತ್ರೀಯ ಭೌಗೋಳಿಕ ಜಾನಪದದ ಹಿನ್ನೆಲೆಯಲ್ಲಿಯ ಮಾದರಿಯಲ್ಲಿ ಇಲ್ಲಿ ಹೇಳಿದ್ದಾರೆ.

* **ತಮಿಳುನಾಡಿನ ಸ್ಥಳನಾಮಗಳು, ಡಾ. ಕೆಮ್ತೂರು ರಘುಪತಿ ಭಟ್ಟ, ೧೯೭೯:** ಕರ್ನಾಟಕದ ತುಳು ಭಾಷೆಯ ಪ್ರದೇಶದ ಸ್ಥಳನಾಮಗಳಿಗೆ ಸಂಬಂಧಪಟ್ಟ ಸಂಶೋಧನಾ ಕೃತಿಯಾಗಿದೆ. ಒಂದು ಊರು ಮತ್ತೊಂದು ಊರಿನಿಂದ ಪ್ರತ್ಯೇಕಗೊಳಿಸಿಕೊಳ್ಳಲು ಸ್ಥಳನಾಮಗಳು ಗುರುತುಪಟ್ಟಿಕೆಗಳಾಗಿವೆ. ಸ್ಥಳನಾಮಗಳ ಹುಟ್ಟು ರಹಸ್ಯವಾಗಿದ್ದು, ಸದಾ ಜೀವಂತವಾಗಿರುತ್ತವೆ. ತುಳುನಾಡಿನ ಸ್ಥಳನಾಮಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವ ಜಲವಾಚಿ ಸೂಚಕಗಳಾದ ಅಲ್, ಆರ್, ಬೆಳ್ ಪದಗಳನ್ನು ನಿದರ್ಶನಗಳೊಂದಿಗೆ ಗುರುತಿಸಿದ್ದಾರೆ.

ಕೊನೆ ಟಿಪ್ಪಣಿಗಳು

* ಉಡುಪಿ ತಾಲೂಕಿನ ಸ್ಥಳನಾಮಗಳು, ಕೆಮ್ತೂರು ರಘುಪತಿ ಭಟ್ಟ, ಸಂಪುಟ-೧೪ ಸಂಚಿಕೆ-೩ ಜೂನ್-ಸೆಪ್ಟಂಬರ್ ೧೯೮೫.
* ಊರ ಹೆಸರುಗಳ ಕೊನೆಯ-ವರ-ವಾರ, ಎಂ.ಎಂ. ಕಲಬುರ್ಗಿ, ಸಂಪುಟ ಸಂಚಿಕೆ ೧ ಜೂನ್, ಮಾರ್ಚ್ ೧೯೮೦.
* ವರ-ವಾರ-ಎಂದು ಕೊನೆಯಾಗುವ ಊರು ಹೆಸರುಗಳು, ಎಂ. ಚಿದಾನಂದ ಮೂರ್ತಿ, ಸಂಪುಟ-೩, ಸಂಚಿಕೆ-೧, ಜನವರಿ-ಮಾರ್ಚ್ ೧೯೩೮.
* ತುಳುನಾಡಿನ ಕಾರ್ ಊರುಗಳ ಒಂದು ಸ್ಥಳನಾಮಾಧ್ಯಯನ, ಕೆಮ್ತೂರು ರಘುಪತಿಭಟ್ಟ ಸಂ. ೭, ಸಂಚಿಕೆ-೨, ಏಪ್ರಿಲ್-ಜೂನ್ ೧೯೭೮.
* ಸ್ಥಳನಾಮ ರೂಪರೇಷೆ, ಕೆಮ್ತೂರು ರಘಪತಿಭಟ್ಟ, ಸಂಪುಟ-೮ ಸಂಚಿಕೆ-೨, ಏಪ್ರಿಲ್-ಜೂನ್ ೧೯೭೯.
* ಸ್ಥಳನಾಮಾಧ್ಯಯನ ಸಮಸ್ಯೆ ಹಾಗೂ ನಿವಾರಣೆ, ವಿ. ಗೋಪಾಲಕೃಷ್ಣ ಸಂಪುಟ -೩, ಸಂಚಿಕೆ-೩, ಏಪ್ರಿಲ್-ಜೂನ್ ೧೯೭೮.
* ಪುರ ವರ-ವಾರ ಎಂಬುದೇ ಸರಿ, ಎಂ. ಚಿದಾನಂದಮೂರ್ತಿ ಸಂಪುಟ-೯, ಸಂಚಿಕೆ-೪, ಅಕ್ಟೋಬರ್-ಡಿಸೆಂಬರ್ ೧೯೮೦.

❖❖❖

ಅಧ್ಯಾಯ : ಮೂರು

ಚಳ್ಳಕೆರೆ ತಾಲ್ಲೂಕಿನ ಭೌಗೋಳಿಕ ಹಿನ್ನೆಲೆ

ಅಧ್ಯಾಯ: ಮೂರು

ಚಳ್ಳಕೆರೆ ತಾಲೂಕಿನ ಭೌಗೋಳಿಕ ಹಿನ್ನೆಲೆ

ಚಳ್ಳಕೆರೆಯು ಚಿತ್ರದುರ್ಗ ಜಿಲ್ಲೆಯ ತಾಲೂಕುಗಳಲ್ಲಿ ಪ್ರಮುಖವಾದಂತಹ ತಾಲೂಕು ಮತ್ತು ಅದರ ಮುಖ್ಯ ಸ್ಥಳವಾಗಿದೆ. ಏಕೆಂದರೆ ಆಯಾ ಪ್ರದೇಶದ ಜನರ ಬದುಕು ಆ ಹಿನ್ನೆಲೆಯ ಮಹತ್ವದ ಸ್ವರೂಪ ಸ್ವಭಾಗಳನ್ನು ಹಾಗೂ ಭೌಗೋಳಿಕ ವೈಶಿಷ್ಟ್ಯತೆಗಳನ್ನು ತಿಳಿಯದೆ ಯಾವುದೇ ಅಧ್ಯಯನ ಪೂರ್ಣವಾಗುವುದಿಲ್ಲ. ಪ್ರಾಚೀನ ನಾಗರಿಕತೆಗಳ ಉಗಮ ಮತ್ತು ವಿಕಾಸದ ಅಂಶಗಳನ್ನು ಗಮನಿಸಿದಾಗ ಭೌಗೋಳಿಕ ಅಂಶಗಳ ಪ್ರಾಮುಖ್ಯತೆಯನ್ನು ಕಂಡುಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಒಂದೊಂದು ಪ್ರದೇಶದ ಮತ್ತು ಸಂಸ್ಕೃತಿಗಳ ವಿಕಾಸದಲ್ಲಿ ಅಲ್ಲಿನ ಭೌಗೋಳಿಕ ಹಿನ್ನೆಲೆ ವೈಶಿಷ್ಟ್ಯತೆಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಆದ್ದರಿಂದ ಅಧ್ಯಯನ ಮಾಡುವ ಸಂದರ್ಭದಲ್ಲಿ ಭೌಗೋಳಿಕ ವೈಶಿಷ್ಟ್ಯತೆಯನ್ನು ಮರೆತು ನಿಜವಾದ ಇತಿಹಾಸ ರಚಿಸಲು ಸಾಧ್ಯವಿಲ್ಲವೆಂದು ತಿಳಿಯಬೇಕಾಗುತ್ತದೆ.

ಒಂದು ಹಳ್ಳಿ ಆಗಿರಲಿ, ಒಂದು ಪ್ರದೇಶ ಆಗಿರಲಿ, ಹುಟ್ಟಿ ಬೆಳೆದ ಚರಿತ್ರೆ ಹಾಗೂ ಅಲ್ಲಿನ ಹುಟ್ಟಿ ಹರಿಯುವ ನದಿಗಳು, ನದಿಯ ಬಯಲು, ಪರ್ವತಶ್ರೇಣಿ, ಬೆಟ್ಟ, ಗುಡ್ಡ, ಸಂಪತ್ತು, ಪರಿಸರ ಮುಂತಾದ ಭೌಗೋಳಿಕ ಅಂಶಗಳು ಕಾರಣವಾಗಿವೆ. ಅಲ್ಲದೆ ಅಲ್ಲಿನ ಜನಜೀವನ ಹಾಗೂ ಸಾಂಸ್ಕೃತಿಕ ವಿಚಾರಗಳಲ್ಲಿ ತಿಳಿದು ನಿಲ್ಲುವಂಥದ್ದು ಸಹಕಾರಿಯಾಗಿದೆ. ಆ ಪ್ರದೇಶದ ಸಾಮಾಜಿಕ ರಚನೆ, ಅಲ್ಲಿನ ಸಂಸ್ಕೃತಿ ಪ್ರಮುಖ ದೇವಾಲಯಗಳನ್ನು ತಿಳಿಯುವಂಥದ್ದು. ಈ ಮೇಲಿನ ಎಲ್ಲಾ ಅಂಶಗಳನ್ನು ತಿಳಿದು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಚಳ್ಳಕೆರೆ ತಾಲೂಕಿನ ಭೌಗೋಳಿಕ ಲಕ್ಷಣವನ್ನು ಯಾವ ರೀತಿ ಒಳಗೊಂಡಿದೆ ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ.

"ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ ಹಾಗೂ ಮೊಳಕಾಲ್ಮೂರು ತಾಲೂಕುಗಳನ್ನು ಹೊಂದಿದೆ. ಈ ತಾಲೂಕು ೧೯೫ ಗ್ರಾಮಗಳನ್ನು ಒಳಗೊಂಡಿದ್ದು ಇವುಗಳನ್ನು

ನಾಲ್ಕು ಹೋಬಳಿಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ದೊಡ್ಡೇರಿ, ಪರುಶುರಾಂಪುರ, ತಳಕು, ನಾಯಕನಹಟ್ಟಿ ಈ ನಾಲ್ಕು ಹೋಬಳಿಗಳಿಂದ ಮತ್ತು ಗ್ರಾಮಗಳಿಂದ ಕೂಡಿದೆ. ಜಿಲ್ಲಾ ಕೇಂದ್ರದಿಂದ ಈಶಾನ್ಯಕ್ಕೆ ೧೮ ಕಿ.ಮೀ. ದೂರದಲ್ಲಿದ್ದು ಈ ಪ್ರದೇಶದ ವ್ಯಾಪ್ತಿಯು ೧೪.೦೫°-೧೪.೩೭° ಶ್ರೇಣಿಯವರೆಗೂ ೭೬.೨೭°-೭೭.° ರೇಖಾಂಶದವರೆಗೂ ಕೂಡಿದ್ದು ೨೦೬೩.೯೩ ಚ.ಕಿ.ಮೀ. ವಿಸ್ತಾರವುಳ್ಳದ್ದಾಗಿದೆ."[೧]

ಸಾಮಾನ್ಯವಾಗಿ ಉಷ್ಣವಲಯದಲ್ಲಿ ಬರುವ ಈ ಪ್ರದೇಶವು ಸಮುದ್ರ ಮಟ್ಟದಿಂದ ಕಡಿಮೆ ಎತ್ತರದಲ್ಲಿದೆ. ಹವಾಮಾನವು ಬೇಸಿಗೆಯಲ್ಲಿ ಹೆಚ್ಚು ಉಷ್ಣಾಂಶವಿರುವ ತಿಂಗಳಾಗಿದ್ದು ಉಷ್ಣಾಂಶವು ೪೧ ಸೆಲ್ಸಿಯಸ್‌ವರೆಗೂ ದಾಖಲಾಗುತ್ತದೆ. ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳ ತಂಪಾದ ಹವಾಮಾನವನ್ನು ಅಂದರೆ ೧೪° ಸೆಲ್ಸಿನಷ್ಟು ದಾಖಲಾಗುತ್ತದೆ. ಇಲ್ಲಿ ಅಂತಹ ಫಲವತ್ತಾದ ಭೂಮಿಯಿಲ್ಲ ಆದರೆ ಇತ್ತೀಚೆಗೆ ನೀರಾವರಿಗೆ ಅನುಕೂಲಕರವಾದ ಅಣೆಕಟ್ಟುಗಳಿವೆ. ಅಲ್ಲದೆ ನಂದಿಹಳ್ಳಿಯಲ್ಲಿ ನಿರ್ಮಾಣವಾಗುವ ಅಣೆಕಟ್ಟಿನಿಂದ ಈ ತಾಲೂಕಿಗೆ ಹೇರಳವಾದ ನೀರು ಒದಗುವ ಭರವಸೆಯುಂಟು. "ಈ ತಾಲೂಕಿನಲ್ಲಿಯೇ ಪರಶುರಾಂಪುರ ಕೆರೆ ಅತ್ಯಂತ ದೊಡ್ಡದು. ಈ ಕೆರೆಯಿಂದ ಸುಮಾರು ಸಾವಿರ ಎಕರೆಗಳಿಗೆ ನೀರು ಒದಗುತ್ತದೆ. ಅಲ್ಲದೇ ನಾರಾಯಣಪುರ ಅಣೆಕಟ್ಟಿನ ನೀರನ್ನು ಸುಮಾರು ೩೦೦ ವರ್ಷಗಳ ಹಿಂದೆ ಶ್ರೀ ನಾಯಕನಹಟ್ಟಿ ತಿಪ್ಪೇರುದ್ರ ಸ್ವಾಮಿಗಳಿಂದ ಕಟ್ಟಲ್ಪಟ್ಟ ನಾಯಕನಹಟ್ಟಿಯ ಹಿರೇಕೆರೆ ಅತ್ಯಂತ ಹಳೆಯ ಕೆರೆ. ಮೀರಾಸಾಬಿಹಳ್ಳಿ ಕೆರೆಯಿಂದ ಮೊನ್ನೆಕೋಟೆ ಕೋಡಿಹಳ್ಳಿ ಕೆರೆಗಳಿಂದ ನಾರಾಯಣಪುರ ಕಾಲುವೆಯಿಂದ ಹಾಗೂ ತಾಲೂಕಿನ ಇತರೆ ಕೆರೆಗಳಿಂದ ಮತ್ತು ವೇದಾವತಿ ನದಿಯಿಂದ ಏಕ ಬಾವಿಗಳಿಂದ ವ್ಯವಸಾಯಕ್ಕೆ ನೀರನ್ನು ಬಳಸಿಕೊಳ್ಳಲಾಗುತ್ತಿದೆ."[೨]

ಭೂ ರಚನೆ

ಚಳ್ಳಕೆರೆ ತಾಲೂಕು ಸ್ವಲ್ಪ ಭಾಗ ಸಮತಟ್ಟಾಗಿದ್ದು, ಅಲ್ಲಲ್ಲಿ ತಗ್ಗು-ದಿನ್ನೆಗಳಿಂದ ಕೂಡಿದೆ. ವಿಶೇಷವಾಗಿ ಕಲ್ಲು ಜರುಗಿನಿಂದ ಕೂಡಿದ ಕಲ್ಲು ಮಿಶ್ರಿತ ಭೂಮಿ. ಕೆಲವು ಕಡೆ ಮಾತ್ರ ಕಪ್ಪು ನೆಲವಿದೆ. ಕೆಂಪು ಮಣ್ಣು ಹಾಗೂ ಕಪ್ಪು ಮಣ್ಣು ತೇವಾಂಶದಿಂದ ಕೂಡಿರುವುದರಿಂದ ಈ ಪ್ರದೇಶದಲ್ಲಿ ಖುಷ್ಕಿ ಬೆಳೆಗಳನ್ನು ಚೆನ್ನಾಗಿ ಬೆಳೆಯಬಹುದಾಗಿದೆ. ಇಲ್ಲಿ ಮುಖ್ಯ ಕೃಷಿ ಒಣ ವ್ಯವಸಾಯ ಜೊತೆಗೆ ತೋಟಗಾರಿಕೆಯ ಬೆಳೆಗಳನ್ನು ಸಹ ಅಲ್ಲಲ್ಲಿ ಬೆಳೆಯುತ್ತಾರೆ. ಶೇಂಗಾ, ತೊಗರಿ, ನವಣೆ, ಸಜ್ಜೆ, ರಾಗಿ, ಸಾವೆ, ಜೋಳ, ಮೆಕ್ಕೆ ಜೋಳ, ಹತ್ತಿ, ತಂಬಾಕು, ಇತರೆ ಎಣ್ಣೆ ಬೀಜಗಳು ಮುಖ್ಯ ಬೆಳೆಗಳಾಗಿ ಇಲ್ಲಿ ಕಂಡುಬರುತ್ತವೆ. ಇತ್ತೀಚೆಗೆ ನೀರಾವರಿ ವ್ಯವಸ್ಥೆ ಇರುವ ಕಡೆ ಈರುಳ್ಳಿಯನ್ನು ವಾಣಿಜ್ಯ ಬೆಳೆಯಾಗಿ ಹೆಚ್ಚಾಗಿ ಬೆಳೆಯುತ್ತಾರೆ. ಖುಷ್ಕಿ ಬೆಳೆಯಲ್ಲಿ ಶೇಂಗಾ ಪ್ರಮುಖ ಮುಂಗಾರು ಬೆಳೆಯಾಗಿದೆ.

ಅರಣ್ಯ ಸಂಪತ್ತು

ಚಳ್ಳಕೆರೆ ತಾಲೂಕಿನಲ್ಲಿ ಅರಣ್ಯ ಸಂಪತ್ತು ಕಡಿಮೆಯೇ ಎಂದು ಹೇಳಬೇಕಾಗುತ್ತದೆ. ಹಾಗೂ ಈ ಪ್ರದೇಶವನ್ನು 'ಬಯಲುಸೀಮೆ' ಎಂದು ಗುರುತಿಸಲಾಗುತ್ತದೆ. ಮಳೆಯ ಪ್ರಮಾಣ ಕಡಿಮೆ ಇರುವುದರಿಂದ ದಟ್ಟ ಅರಣ್ಯಗಳಿರದೇ ಪೊದೆಗಳು ಮತ್ತು ಎತ್ತರದಲ್ಲದ ಮರಗಳನ್ನು ಕಾಣಬಹುದಾಗಿದೆ. ಇಲ್ಲಿನ ಅರಣ್ಯಗಳು ಮನುಷ್ಯನ ರಕ್ಷಿತ ಅರಣ್ಯಗಳಾಗಿದ್ದು, ಎಲೆ ಉದುರುವ ಮರಗಳು, ಮುಳ್ಳು ಗಿಡಗಳು, ಕುರುಚಲು ಕಾಡು, ಬಂದಗಳ್ಳಿ, ಪಾಪಚ್ಚಿ, ಸಾಮಾನ್ಯವಾಗಿ ಕಂಡುಬರುತ್ತದೆ.

ಬೆಟ್ಟ ಗುಡ್ಡಗಳು

ಚಳ್ಳಕೆರೆ ಪ್ರದೇಶದ ಸುತ್ತಮುತ್ತಲಿನಲ್ಲಿ ಕಂಡುಬರುವ ನನ್ನಿವಾಳ ಗುಡ್ಡ, ತಳುಕಿನ ಗುಡ್ಡ, ಹೊಸಹಳ್ಳಿ ಗುಡ್ಡ ಹಾಗೂ ಗುಡ್ಡದಲ್ಲಿ ಆದಿ ಮಾನವರ ಕಾಲದ ಬಯಲುಬಂಡೆ ಆಕಾರದ ಚಿತ್ರಗಳನ್ನು ಕಾಣಲಾಗಿದ್ದು, ಇಲ್ಲಿ ಅತಿ ಹೆಚ್ಚು ಕರೆಕಲ್ಲುಗಳಿಂದ, ತಗ್ಗು, ದಿನ್ನೆಗಳಿಂದ ಹೊಂದಿದ ಪ್ರದೇಶವಾಗಿದೆ.

ಪ್ರಾಣಿ ವರ್ಗ

ಈ ನೆಲೆಯಲ್ಲಿ ಗುಂಡಾರಣ್ಯಗಳಿಲ್ಲದಿರುವ ಪ್ರಯುಕ್ತ ಇಲ್ಲಿ ಶುಷ್ಕ ವಾತಾವರಣದ ಕಾಡುಗಳಲ್ಲಿರುವಂತಹ ದ್ವಿತೀಯ ದರ್ಜೆಯ ಪ್ರಾಣಿಗಳು ಕಂಡುಬರುತ್ತವೆ. ವಿಶೇಷವಾಗಿ ಮಾಂಸಹಾರಿ ಪ್ರಾಣಿಗಳಾದ ನರಿ, ತೋಳ, ಜೊಂಪುತೋಳ, ಕತ್ತೆಕಿರುಬ, ಚಿಗರಿ ಜೊತೆಗೆ ಅದೇ ರೀತಿ ಸಸ್ಯಹಾರಿಗಳಾದ ಕರಡಿ, ಕಾಡುಹಂದಿ, ಮುಳ್ಳುಹಂದಿ, ದೊಡ್ಡ ಜಿಂಕೆ, ಮುಂಗುಸಿ, ಉಡ, ಮೊಲ, ಕವುಜ, ನವಿಲು, ನಾಗರಹಾವು ಮುಂತಾದ ಪ್ರಾಣಿಗಳನ್ನು ಕಾಣಬಹುದು.

ಜಲಸಂಪತ್ತು

ಚಳ್ಳಕೆರೆಯು ಬಯಲುಸೀಮೆಯಾದ್ದರಿಂದ ಇಲ್ಲಿನ ಪ್ರಮುಖ ಜಲಸಂಪನ್ಮೂಲಗಳಾಗಿ ಕೆರೆಗಳು, ಬಾವಿಗಳು, ಕೊಳವೆಬಾವಿಗಳು ಪ್ರಮುಖ ಪಾತ್ರವಹಿಸಿರುವಂತೆ ಕಾಣುತ್ತವೆ.

ಖನಿಜ ಸಂಪತ್ತು

ಚಳ್ಳಕೆರೆ ತಾಲೂಕಿನ ಭಾಗದಲ್ಲಿ ಮುಖ್ಯ ಖನಿಜಗಳು ಹೇರಳವಾಗಿಲ್ಲ. ಕಣಶಿಲೆ ಮತ್ತು ವಿವಿಧ ವರ್ಗದ ಸುಣ್ಣದ ನಿಕ್ಷೇಪಗಳು ದೊರೆತಿವೆ. ನಾಯಕನಹಟ್ಟಿ ಭಾಗದಲ್ಲಿ ಸುಣ್ಣದ ಕಲ್ಲು ಹೆಚ್ಚಾಗಿ ಸಿಗುವುದರಿಂದ ಈ ಸುಣ್ಣವನ್ನು ಚಳ್ಳಕೆರೆಯ ಬೇರೆ ಬೇರೆ ಪ್ರದೇಶಕ್ಕೆ ಕಚ್ಚಾ ಸುಣ್ಣ ಕಲ್ಲನ್ನು ತೆಗೆದುಕೊಂಡು ಹೋಗಿ ಸುಣ್ಣವನ್ನು ತಯಾರಿಸಿ ಬೇರೆ ಕಡೆಗೆ ಮಾರುವುದು ಇಲ್ಲಿ ಕಂಡುಬರುತ್ತದೆ.

ಚಳ್ಳಕೆರೆ ಪದ ನಿಷ್ಪತ್ತಿ

"ಚಳ್ಳಕೆರೆಯಿಂದ ನಾಯಕನಹಟ್ಟಿಗೆ ಹೋಗುವ ಮಾರ್ಗದ ಎಡ ಬಳಿಯಲ್ಲಿ 'ಕರೆಕಲ್ಲುಕೆರೆ' ಎಂಬ ಕೆರೆ ಇದ್ದು, ಈ ಕೆರೆಯ ಸುತ್ತಮುತ್ತಲೂ ದಟ್ಟವಾದ ಚಳ್ಳೆಹಣ್ಣಿನ ಮರಗಳು ಬೆಳೆದಿದ್ದು ಆರಂಭದಲ್ಲಿ ಚಳ್ಳೆಹಣ್ಣಿನ ಕೆರೆ ಎಂಬ ಹೆಸರು ಇತ್ತು. ಅನಂತರ ಚಳ್ಳೆಹಣ್ಣಿನ ಕೆರೆ>ಚಳ್ಳಕೆರೆ ಚಳ್ಳ+ಕೆರೆ=ಚಳ್ಳಕೆರೆ ಎಂಬ ರೂಢಿಯಾಗಿ ಬಂದಿದೆ. ಈಗಲೂ ಚಳ್ಳಕೆರೆ ಎಂದು ಹೆಸರು ಪಡೆದಿದೆ. ಜನಪದರ ಪ್ರಕಾರ ಈ ಕೆರೆಯ ಪಕ್ಕದಲ್ಲಿ ಚಳ್ಳಕೆರೆಮ್ಮ ದೇವತೆಯು ನೆಲೆಸಿದ್ದರಿಂದ ಚಳ್ಳಕೆರೆ ಎಂದು ಇಡೀ ಕರ್ನಾಟಕದಲ್ಲಿ ದಾಖಲಾಗಿದೆ."[೩]

ಚಳ್ಳೆ+ಹಣ್ಣಿನ+ಕೆರೆ= ಚಳ್ಳೆಹಣ್ಣಿನ ಕೆರೆ

ಚಳ್ಳ+ಕೆರೆ= ಚಳ್ಳಕೆರೆ

ಅಡಿಟಿಪ್ಪಣಿಗಳು

೧. ತಿಪ್ಪೇಸ್ವಾಮಿ ಟಿ.ಜೆ., ಗೆಳೆಯರ ವಾಣಿ, ಸಂಪುಟ–೧, ಸಂಚಿಕೆ–೨, ಪು–೪, ಅಕ್ಟೋಬರ್, ೨೦೦೮.

೨. ಗಿರಿಜಾ ಟಿ., ೧೯೯೧, ಚಿತ್ರದುರ್ಗ ಜಿಲ್ಲಾದರ್ಶಿನಿ, ಪು–೧೪೦

೩. ಮಂಜುನಾಥ ಬೇವಿನಕಟ್ಟಿ, ಜಾನಪದ ಕರ್ನಾಟಕ ಸಂಪುಟ–೮, ಸಂ–೨, ಪುಟ–೧೦೨.

❖❖❖

ಅಧ್ಯಾಯ : ನಾಲ್ಕು

ಸ್ಥಳನಾಮಗಳ ಸ್ವರೂಪ, ಉಗಮ ಮತ್ತು ಬೆಳವಣಿಗೆ

ಅಧ್ಯಾಯ: ನಾಲ್ಕು

ಸ್ಥಳನಾಮಗಳ ಸ್ವರೂಪ, ಉಗಮ ಮತ್ತು ಬೆಳವಣಿಗೆ

ಸ್ಥಳನಾಮಗಳನ್ನು ಶಾಸ್ತ್ರೀಯವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಮಾನವನು ಪುರಾತನ ಕಾಲದಿಂದಲೂ ತಮ್ಮ ನೆಲೆಗಳಾದ ಊರು ಕೇರಿಗಳನ್ನು ಹೇಗೆ ಕಟ್ಟಿಕೊಂಡನು ಎಂಬ ಚಿತ್ರಣ ನಮಗೆ ತಿಳಿಯುವಂಥದ್ದು. ಮೊದಲಿಗೆ ಮಾನವ ಅಲೆಮಾರಿಯಾಗಿದ್ದು ಗುಹೆಗಳಲ್ಲಿ ವಾಸಮಾಡುತ್ತಿದ್ದ ತನಗೆ ಹಸಿವಾದಾಗ ಆಹಾರ ಹುಡುಕುವುದು ಅನಿವಾರ್ಯವಾಯಿತು. ಗೆಡ್ಡೆ–ಗೆಣಸು, ಸೊಪ್ಪು–ಸದೆ ತಿನ್ನುತ್ತಿದ್ದ ಮನುಷ್ಯ ಕ್ರಮೇಣ ಪ್ರಾಣಿ–ಪಕ್ಷಿಗಳನ್ನು ತಿನ್ನುವುದಕ್ಕಾಗಿ ಬೇಟೆಯಾಡುವುದನ್ನು ಕಲಿತನು. ಕಾಲಕ್ರಮೇಣ ಬೇಟೆಯಾಡುವುದು ಅವನಿಗೆ ಸಾಲದಾದಾಗ ವ್ಯವಸಾಯವನ್ನು ಮಾಡುತ್ತ ಆಹಾರ ಸಂಗ್ರಹಣೆಗೆ ಮುಂದಾದನು. ಹಾಗೂ ವಾಸಿಸುವುದಕ್ಕೆ ಗುಹೆಗಳನ್ನು ಬಿಟ್ಟು ಗುಡಿಸಲುಗಳನ್ನು ಕಟ್ಟಿಕೊಂಡು ಒಂದು ವ್ಯವಸ್ಥಿತ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನದ ಜೊತೆಗೆ ಊರು, ಕೇರಿಗಳು ಹುಟ್ಟಿಕೊಂಡವು. ಗುಹೆಗಳನ್ನು ಬಿಟ್ಟು ಮನುಷ್ಯ ಗುಡಿಸಲುಗಳಲ್ಲಿ ವಿವಿಧ ಪ್ರಕಾರವಾಗಿ ಗುಂಪು ಗುಂಪಾಗಿ ವಾಸಮಾಡಲು ಪ್ರಯತ್ನಿಸಿದ ಫಲವೇ ಆ ಸ್ಥಳನಾಮಗಳೇ ಮುಂದೆ ಊರು, ಹಳ್ಳಿ, ಪಟ್ಟಣ, ನಗರಗಳಾದವು.

ಮಾನವನು ವ್ಯವಸಾಯ ಕೆಲಸವನ್ನು ಕಲಿತುಕೊಂಡ ಅನಂತರ ಪರಿಸರದ ಜೊತೆಗೆ ಜೀವನ ಸಾಗಿಸುವುದನ್ನು ತಿಳಿದುಕೊಂಡನು. ತದನಂತರ ಕೆರೆ, ಕಾಲುವೆ, ಹಳ್ಳ, ನದಿ, ಹೊಳೆ, ಬೆಟ್ಟ, ಗುಡ್ಡ ಹಾಗೂ ಬಯಲು ಪ್ರದೇಶಗಳನ್ನು ಬಳಸಿಕೊಳ್ಳಲು ಮುಂದಾದನು. ನವಶಿಲಾಯುಗದ ಮಾನವ ಅಲೆಮಾರಿ ಜೀವನವನ್ನು ಬಿಟ್ಟು ಪ್ರಕೃತಿಯೊಂದಿಗೆ ಹೊಂದಿಕೊಂಡು ಜೀವನ ನಡೆಸುವುದನ್ನು ಯಾವಾಗ ಅಂದುಕೊಂಡನೋ ಆಗ ಹಳ್ಳಿಗಳು ಉಗಮವಾದವು. ಅವುಗಳಿಗೆ ಹಳ್ಳಿ, ಊರು, ಪುರ, ವಾಡಿ, ಸ್ಥಳ, ತಾಣ, ಎಡೆ, ಕೊಪ್ಪಲು ಮುಂತಾದ ಹೆಸರುಗಳು ಬಳಕೆಗೆ ಬಂದವು. ತನ್ನ ಸಂವಹನದ ಅನುಕೂಲತೆಗಾಗಿ ತನ್ನ ಕುಟುಂಬಕ್ಕೆ ಮತ್ತು ವ್ಯಕ್ತಿಗಳಿಗೆ ಹೆಸರುಗಳನ್ನು ಇಟ್ಟುಕೊಂಡಂತೆ ತಾನು ನೆಲೆನಿಂತ ಸ್ಥಳಗಳಿಗೂ ಹೆಸರುಗಳಿಟ್ಟುಕೊಂಡನು. ಕಾಲಕ್ರಮೇಣ ಅಂಥ ಹೆಸರುಗಳಿಗೆ ಪ್ರಾಕೃತಿಕ ಮೂಲದಿಂದ ಬಂದ ಕೆರೆ, ಕಟ್ಟೆ, ಹಳ್ಳ, ಕೊಳ್ಳ,

ಬಾವಿ, ಮರ, ಗಿಡ, ಸಸ್ಯ, ಬಳ್ಳಿ, ಹೂವು, ಹಣ್ಣು, ಪ್ರಾಣಿ, ಪಕ್ಷಿ, ವ್ಯಕ್ತಿ, ಇನ್ನು ಇತ್ಯಾದಿ ಹೆಸರನ್ನಿಡಲು ಮುಂದಾದನು.

ಮಾನವನು ಜೀವನೋಪಾಯಕೋಸ್ಕರ ವಲಸೆ ಹೋಗುವುದನ್ನು ಬಿಟ್ಟು ಬೆಳಕಿನ ಕಡೆಗೆ ಅರಿತುಕೊಂಡನು. ಭವಿಷತ್ ಲೋಕದ ಜ್ಞಾನವನ್ನು ತಿಳಿದುಕೊಂಡಾಗ ಹಚ್ಚನೆಯ ಹಸಿರು ತಿಳಿನೀರು ಹೊನಲುಗಳನ್ನು ಕಂಡಾಗ ಹಳ್ಳಿಗಳು ಹುಟ್ಟಿಕೊಂಡವು. ಭರತಖಂಡದ ಉತ್ತರ ಭಾಗವನ್ನೆಲ್ಲ ಆಕ್ರಮಿಸಿಕೊಂಡು ಕಾಡುಕಡಿದು ನೆಲೆಯಾಗಿ ನಿಂತು ಹರಪ್ಪ ಮೆಹೆಂಜೋದಾರೋ ಸಂಸ್ಕೃತಿಯನ್ನು ಬೆಳೆಸಿದರು. ಆಗಲೇ ಅವರ ಮುಂದಾಳು ರಾಜನಾಗಿದ್ದನು. ಆತನು ಸುಭದ್ರವಾದ ಮನೆಯಲ್ಲಿ ವಾಸಿಸುತ್ತಿದ್ದನು. ಜನರು ಕೊಪ್ಪಲು, ಪಟ್ಟಣಗಳಲ್ಲಿ ವಾಸಿಸುತ್ತಿದ್ದರು. ಜೊತೆಗೆ ಸಿಂಧೂ ಮತ್ತು ಹರಪ್ಪ ನಾಗರಿಕತೆ ಜನರಿಗೆ ವ್ಯವಸಾಯ ಚೆನ್ನಾಗಿ ಗೊತ್ತಿತ್ತು.

ನವ ಶಿಲಾಯುಗದ ಮಾನವ ಮೂಲ ನೆಲೆ ಊರು-ಕೇರಿ, ಪುರ, ಹಳ್ಳಿ, ಗ್ರಾಮಗಳೆಂದು ಹೇಳಬಹುದಾದರೂ ಅವುಗಳು ಪ್ರಾಕೃತಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ನಿರ್ಮಿತವಾದವು. ಹಳ್ಳಿ, ಗ್ರಾಮಗಳಲ್ಲಿ ವಾಸಿಸುವ ಜನರ ಜೀವನಾಧಾರದ ಮುಖ್ಯ ಕಸುಬು ವ್ಯವಸಾಯ. ವ್ಯವಸಾಯದ ಅನುಕೂಲಕ್ಕಾಗಿ ಮಾನವನು ಸಮತಟ್ಟಾದ ಮತ್ತು ನೀರಿನ ಆಸರೆಗಳಿರುವ ಪ್ರದೇಶಗಳನ್ನು ಆರಿಸಿಕೊಂಡು ಗ್ರಾಮಗಳನ್ನು ಕಟ್ಟಿಕೊಳ್ಳುತ್ತಿದ್ದ. ವ್ಯವಸಾಯಕ್ಕೆ ಪ್ರಮುಖವಾಗಿ ಬೇಕಾಗಿರುವ ನೀರಿನ ಸೌಲಭ್ಯಕ್ಕಾಗಿ ಕೆರೆ, ಕುಂಟೆ, ಬಾವಿಗಳನ್ನು ನಿರ್ಮಿಸಿಕೊಂಡು ಸಾಮೂಹಿಕವಾಗಿ ನೆಲೆನಿಂತು ಸ್ಥಳಗಳಿಗೆ ಹೆಸರುಗಳನ್ನು ಇಟ್ಟುಕೊಂಡ.

"ಮಾನವ ತಾನು ವಾಸ ಮಾಡಲು ಗುಡಿಸಲುಗಳನ್ನು ನಿರ್ಮಿಸಿಕೊಂಡು ಗುಂಪು ಗುಂಪಾಗಿ ವಾಸ ಮಾಡಿದ. ಹಲವಾರು ಗುಡಿಸಲುಗಳು ಒಂದೇ ಕಡೆ ಇದ್ದರೆ ಅವುಗಳನ್ನು ಹಟ್ಟಿಗಳೆಂದು ಕರೆದರೂ, ಕಾಲಕ್ರಮೇಣ ಹಟ್ಟಿಗಳೇ ಹಳ್ಳಿಗಳಾಗಿರುವುದುಂಟು. ಹಳ್ಳಿ ಸಣ್ಣ ಊರನ್ನು ಸೂಚಿಸಿದರೆ ಗ್ರಾಮ ಹಟ್ಟಿ ಹಳ್ಳಿಗಳಿಗಿಂತ ದೊಡ್ಡದಾಗಿರುವ ಊರನ್ನು ಸೂಚಿಸುತ್ತದೆ ಎಂದು ಹೇಳಬಹುದು. ಹಳ್ಳಿಗಳಲ್ಲಿ ವಿವಿಧ ರೀತಿಯ ಜಾತಿ, ಜನಾಂಗದವರು ವಾಸ ಮಾಡುತ್ತಿದ್ದರಿಂದ ಅವರ ಸಾಮಾಜಿಕ ರೀತಿ, ನೀತಿಗಳು ವಿಭಿನ್ನವಾಗಿದ್ದವು. ಈ ಕೇರಿಗಳು-ವರ್ಗಗಳ ಆಧಾರದ ಮೇಲೆ ರಚನೆಯಾಗಿದ್ದವು. ಕೇರಿ ಎಂದಾಗ ಅಲ್ಲಿ ಕುರುಬರ ಕೇರಿ, ಲಂಬಾಣಿ ಕೇರಿ, ಬೆಸ್ತರ ಕೇರಿ, ಅಗಸರ ಕೇರಿ, ದಲಿತರ ಕೇರಿ ಹೀಗೆ ಬೇರೆ ಬೇರೆ ಕೇರಿಗಳಾಗಿ ರಚನೆಯಾದವು ಎಂದು ತಿಳಿಯಬಹುದು."[೧]

ವ್ಯವಸಾಯವನ್ನು ಪ್ರಮುಖ ಕಸುಬನ್ನಾಗಿಸಿಕೊಂಡ ಮಾನವರು ವ್ಯವಸಾಯ ಮಾಡುವುದರ ಜೊತೆಗೆ ಸಾಕು ಪ್ರಾಣಿಗಳಾದ ಕುರಿ, ಮೇಕೆ, ದನ, ಕರು, ಕೋಳಿ, ಬೆಕ್ಕು, ಕುದುರೆ, ಎಮ್ಮೆ, ಕತ್ತೆ, ನಾಯಿ, ಮೊಲ ಇನ್ನೂ ಮುಂತಾದ ಪ್ರಾಣಿಗಳನ್ನು ಸಾಕುವುದನ್ನು ಉಪಕಸುಬನ್ನಾಗಿಸಿಕೊಂಡು ಬೇಸಾಯದ ಜೊತೆಗೆ ಅನೇಕ ಕೆಲಸ ಕಾರ್ಯದಲ್ಲಿ ತೊಡಗಿದರು. ಬಡಗಿ, ನೇಕಾರ, ಕ್ಷೌರಿಕ,

ಅಕ್ಕಸಾಲಿಗ, ಅಗಸ, ಕುಂಬಾರ, ಕಮ್ಮಾರ, ಪಟೇಲ, ಶಾನುಭೋಗ, ಪೂಜಾರಿ, ತಳವಾರ ಹೀಗೆ ವಿವಿಧ ಕೆಲಸ ಕಾರ್ಯದಲ್ಲಿ ನಿರಂತರವಾಗಿ ತಮ್ಮ ಗ್ರಾಮಗಳನ್ನು ಸ್ವಾವಲಂಬನೆಯ ಊರುಗಳನ್ನಾಗಿ ಮಾಡಿಕೊಂಡರು. ಹೀಗೆ ಒಂದೊಂದು ಕಸುಬುಗಳು ಅವರವರ ಕೆಲಸಗಳಿಗನುಸಾರವಾಗಿ ವೃತ್ತಿನಾಮಗಳು ಹುಟ್ಟಿಕೊಂಡವು.

"ಮಾನವ ತನ್ನ ಅಲೆಮಾರಿ ಜೀವನವನ್ನು ಕೈಬಿಟ್ಟು ಪ್ರಕೃತಿಯನ್ನು ಪಳಗಿಸಿ ತನ್ನ ಬದುಕಿಗೆ ಒಗ್ಗಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಯಾವಾಗ ಮನಗೊಂಡನೋ ಆಗ ಊರು, ಹಳ್ಳಿಗಳು ಉಗಮವಾಯಿತು. ನೆಲದೊಂದಿಗಿನ ಈ ಹೋರಾಟದ ಪ್ರಕ್ರಿಯೆಯಲ್ಲಿ ತಾನು ನೆಲೆನಿಂತ ಸ್ಥಳದ ಜೊತೆಗೆ ತನ್ನನ್ನು ತಾನು ತೊಡಗಿಸಿಕೊಂಡ ಸಂಕೇತವಾಗಿ ಆ ಸ್ಥಳಕ್ಕೆ ಆತ ಒಂದು ಹೆಸರಿಟ್ಟ. ಆ ಸ್ಥಳವೇ ಅವನ ಬದುಕಿನಲ್ಲಿ ಹಾದು ಕುರುಹಾಗಿ ಒಂದು ಹೆಸರು ಜನ್ಮ ತಳೆಯಿತು ಎಂದು ಹೇಳಬಹುದು. ಕ್ರಮೇಣ ಅಲ್ಲಿನ ಜನವಸತಿ ಇರಲಿ, ಇಲ್ಲದಿರಲಿ ಒಂದು ಜನಾಂಗದ ಸಂಸ್ಕೃತಿಯನ್ನು ಹೊತ್ತ ಆ ಗುರುತುಪಟ್ಟಿ ಹಾಗೆ ಹಾಗೆಯೇ ಬಳಕೆಯಾಗುತ್ತಿತ್ತು. ಹಲವು ಜನಾಂಗಗಳ ಸ್ಮೃತಿ ಮತ್ತು ಅಭಿಮಾನಗಳು ಶಾಶ್ವತವಾಗಿ ಬೆಸೆಯುವ ಸಂಸ್ಕೃತಿಯ ಒಂದು ಕೊಂಡಿ ಎನಿಸಿತು. ಈ ಕೊಂಡಿಯೇ ಸ್ಥಳನಾಮ ಎಂದು ತಿಳಿಯಬಹುದು."[೨]

ಸಾಮಾನ್ಯವಾಗಿ ನೋಡುವುದಾದರೆ ಬಹುತೇಕ ಸ್ಥಳನಾಮಗಳು ಸ್ಥಳೀಯ ಪದಗಳಿಂದಲೇ ರೂಪುಗೊಂಡಿವೆ. ಅವು ಹೆಚ್ಚಿಗೆ ಪ್ರಕೃತಿ ಅಥವಾ ನಿರ್ದಿಷ್ಟ ಸ್ಥಳ ಅಥವಾ ಒಂದು ಘಟನೆಯನ್ನು ವಿವರಿಸುವ ಕೆಲವು ಸಂದರ್ಭದಲ್ಲಿ ತಪ್ಪಾಗಿ ಕಾಲಾಂತರದಲ್ಲಿ ಮುಂದಿನ ಜನಾಂಗ ಕುತೂಹಲದಿಂದ ತಮ್ಮದೇ ಆದ ರೀತಿಯಲ್ಲಿ ವ್ಯುತ್ಪತ್ತೀಕರಿಸುವುದರ ಮೂಲಕ ಅವುಗಳನ್ನು ಅರ್ಥಪೂರ್ಣವಾಗಿಸುತ್ತಾರೆ. ಇದನ್ನು 'ಜನಪದನಿರುಕ್ತಿ' ಎಂದು ಕರೆಯುವರು. ಹೀಗೆ ಸ್ಥಳಗಳಿಗೆ ಹೆಸರನ್ನು ಸೂಚಿಸುವ ಪ್ರಕ್ರಿಯೆ ನಿರಂತರವು ಮತ್ತು ಸಾರ್ವತ್ರಿಕವೂ ಆಯಿತೆಂದು ಎನ್ನಬಹುದು. ಶಿಷ್ಟಜನತೆಯೂ ಸಹ ಈ ಸ್ಥಳನಾಮಗಳಿಗೆ ಹೊಸ ಹೊಸ ಹೆಸರು ಸೂಚಿಸಲು ಮುಂದಾದರು. ಇವರುಗಳು ಹೆಚ್ಚಿನದಾಗಿ ಐತಿಹ್ಯ, ಪುರಾಣ ಕಥೆ ಹಾಗೂ ಪ್ರಾಕೃತಿಕ ದೃಷ್ಟಿಗೆ ಹೆಚ್ಚು ಒಲವು ನೀಡಿದ್ದರೆಂದು ತಿಳಿದುಬರುತ್ತದೆ. ಯಾವುದೇ ಒಂದು ವಸ್ತುವನ್ನು, ವ್ಯಕ್ತಿಯನ್ನು ಗುರುತಿಸಬೇಕಾದರೆ ಒಂದು ನಿರ್ದಿಷ್ಟ ಅಂಕಿತ ಹೇಗೆ ಬೇಕಾಗಿದೆಯೋ ಅದೇ ರೀತಿ ಒಂದು ಸ್ಥಳನಾಮವನ್ನು ಗುರುತಿಸಬೇಕಾದರೆ ನಿರ್ದಿಷ್ಟ ಅಂಕಿತ ಬೇಕಾಗುತ್ತದೆ. ಹಾಗೂ ಒಂದು ಮಗುವಿನ ಹೆಸರು ಕೂಡ ಹಾಗೆಯೇ ಹೊಂದಿರುತ್ತದೆ. ಅದು ರೂಢನಾಮ, ಅಂಕಿತನಾಮ ಅಥವಾ ಅನ್ವರ್ಥನಾಮವಾಗಬಹುದು.

ಸ್ಥಳನಾಮ ಪದದ ಅರ್ಥ ಮತ್ತು ರಚನೆ

ಒಂದು ವಸ್ತು, ಸ್ಥಳ, ವ್ಯಕ್ತಿ ಅಥವಾ ಪ್ರಾಣಿ ಪಕ್ಷಿಗಳ ಹೆಸರುಗಳನ್ನು ಸೂಚಿಸಲು ಗ್ರೀಕರು ನಾಮವಾಚಿ ಎಂಬ ಪದವನ್ನು ಬಳಕೆಗೆ ತಂದರು. ನಾಮಧ್ಯೇಯವನ್ನು ಹೇಳಬೇಕಾದಾಗ ಮಾತ್ರ ಅದನ್ನು ಬಳಸಿ ಅಂಕಿತನಾಮವೆಂದು ಕರೆದರು. ಅಂಕಿತನಾಮಗಳನ್ನು ಕುರಿತ ಶಾಸ್ತ್ರೀಯ

ಅಧ್ಯಯನಕ್ಕೆ 'ನಾಮ ವಿಜ್ಞಾನ' ಎಂದು ಹೆಸರು. ಇದನ್ನು ಮುಖ್ಯವಾಗಿ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ.

ಮನುಷ್ಯ ನಾಮ ವಿಜ್ಞಾನ (Anthropohymy)

ಸ್ಥಳನಾಮ ವಿಜ್ಞಾನ (Toponymy)

"ವಿವಿಧ ಪ್ರಕಾರಗಳಲ್ಲಿ ಕೈಗೊಳ್ಳುವ ಹೆಸರುಗಳ ಕ್ರಮಬದ್ಧ ಅಧ್ಯಯನವನ್ನು ನಾಮ ವಿಜ್ಞಾನ ಎಂದು ಕರೆಯಬಹುದು. ಇದರ ಮುಖ್ಯ ಅಂಗಗಳು ಎರಡು ವ್ಯಕ್ತಿಗಳಿಗೆ ಅಥವಾ ಸ್ಥಳಗಳಿಗೆ ಇಟ್ಟ ಹೆಸರುಗಳ ಅಧ್ಯಯನ (ವ್ಯಕ್ತಿ, ಮನುಷ್ಯರು, ಪ್ರಾಣಿಗಳು ಇತ್ಯಾದಿ ಸ್ಥಳಗಳು, ಊರುಗಳು, ಪರ್ವತಗಳು, ನದಿಗಳು, ಹೊಲ ತೋಟಗಳು, ಬೀದಿಗಳು, ಮನೆಗಳು ಇತ್ಯಾದಿ). ವ್ಯಕ್ತಿಗಳ ಹೆಸರುಗಳೇ ವ್ಯಕ್ತಿನಾಮಗಳು (Anthroponymy) ಮತ್ತು ವ್ಯಕ್ತಿನಾಮಗಳ ಅಧ್ಯಯನವೇ ವ್ಯಕ್ತಿನಾಮ ವಿಜ್ಞಾನ (Anthroponomastics). ಸ್ಥಳಗಳ ಹೆಸರುಗಳೇ ಸ್ಥಳನಾಮಗಳು (Toponymy). ಅವುಗಳ ಅಧ್ಯಯನವೇ ಸ್ಥಳನಾಮ ವಿಜ್ಞಾನ (Toponomastics). ಆದರೆ ಈಗ ಸ್ಥೂಲವಾಗಿ ವ್ಯಕ್ತಿನಾಮ ವಿಜ್ಞಾನವನ್ನೇ Onomastics ಎಂದೂ, ಸ್ಥಳನಾಮ ವಿಜ್ಞಾನಕ್ಕೆ Toponymy ಎಂದು ಇಂಗ್ಲಿಷಿನಲ್ಲಿ ಬಳಸುತ್ತಾರೆ. Toponomastics ಅಥವಾ Toponymy ಎಂಬುದನ್ನು ಜನವಸತಿಯ ಸ್ಥಳಗಳಿಗೆ (ಹಳ್ಳಿ, ಊರು, ಗ್ರಾಮ, ನಗರ) ಸೀಮಿತಗೊಳಿಸಿ ನಿರ್ವಸತಿ ಬೇರೆ ಬೇರೆ ಸ್ಥಳಗಳ ಅಧ್ಯಯನಕ್ಕೆ ಬೇರೆ ಬೇರೆ ಹೆಸರು ಕೊಟ್ಟಿರುವುದುಂಟು. ಹೊಲ, ಕಾಡು ಇತ್ಯಾದಿಗಳ ಹೆಸರುಗಳ ಅಧ್ಯಯನವೇ Microtoponymy ದಾರಿ, ರಸ್ತೆ ಇತ್ಯಾದಿಗಳ ಹೆಸರುಗಳ ಅಧ್ಯಯನ Hodonymy ಕೆರೆ, ಕಾಲುವೆ, ಹಳ್ಳ, ಕೊಳ್ಳ, ನದಿ, ಸರೋವರ ಇನ್ನೂ ಮುಂತಾದ ಜಲಸ್ಥಳಗಳ ಹೆಸರುಗಳ ಅಧ್ಯಯನ Hydronymy ಬೆಟ್ಟ ಗುಡ್ಡಗಳ ಹೆಸರುಗಳ ಅಧ್ಯಯನವೇ Odonymy ಇತ್ಯಾದಿ."[೩]

ಸ್ಥಳನಾಮಶಾಸ್ತ್ರಕ್ಕೆ ಇಂಗ್ಲಿಷ್ ಭಾಷೆಯಲ್ಲಿ 'ಟೋಪಾನಿಮಿ' ಎಂದು ಹೆಸರು. ಇದರ ಮೂಲ ಗ್ರೀಕ್‌ನ Topostnomos ಎಂಬೆರಡು ಸಂಯುಕ್ತ ಪದಗಳಿಂದ ಬಂದದ್ದಾಗಿದೆ. ಅಲ್ಲದೆ ಇದನ್ನು Toponymy ಎಂದು ಇಂಗ್ಲಿಷ್-ಕನ್ನಡ ನಿಘಂಟಿನಲ್ಲಿಯೂ ಸಹ ಕಾಣಬಹುದಾಗಿದೆ. ಹಾಗೂ ೧೩೩೨ರಲ್ಲಿ ಉಲ್ಲೇಖಿಸಲಾಗಿದೆ. ಇದರ ಅರ್ಥ ಒಂದು ಪ್ರದೇಶದ ಸ್ಥಳವಾಚಕ ಹೆಸರುಗಳು ಅಭ್ಯಾಸ, ಸ್ಥಳನಾಮ, ಊರ ಹೆಸರುಗಳೆಂದಿದೆ.

"Topostnomos ಎಂಬುದು Toponomy ಆಗಿ, ಇದೀಗ Toponymy ಎಂಬ ರೂಪ ತಳೆಯಲು ಬಹುಶಃ ಸ್ವರಸಾಮರಸ್ಯ ಅಥವಾ ಸ್ವರಾನುರೂಪ್ಯ ನಿಯಮವು ಅನ್ವಯವಾಗಿರುವುದೇ ಕಾರಣವಿರಬೇಕೆಂದು /Topos ಅಂದರೆ Place ಸ್ಥಳವಾದರೆ ಆದರೆ homos ಎಂದು a study of ಸ್ಥಳನಾಮ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ."[೪]

ಸ್ಥಳನಾಮಗಳಿಗೆ ಸಂಬಂಧಿಸಿದಂತೆ ವಿವಿಧ ಕೋಶಗಳಲ್ಲಿ ಅನೇಕ ರೀತಿಯ ಮಾಹಿತಿಗಳು ಲಭ್ಯವಾಗುತ್ತವೆ. ನ್ಯೂ ಎನ್ಸೈಕ್ಲೋಪೇಡಿಯಾ ಆಫ್ ಬ್ರಿಟಾನಿಕಾದಲ್ಲಿ Place name ಬಗ್ಗೆ ಹೀಗೆ

ಹೇಳಿದೆ: ``Desirnation of a geographical locality, as a town, river or mountain. The ogirins of such names are varied some derived from desctiption of physical features`` ಸ್ಥಳನಾಮಗಳ ಭೌತಿಕ ಮತ್ತು ಭೌಗೋಳಿಕ ರಚನೆಯನ್ನು ತಿಳಿದುಕೊಳ್ಳುವ ವಿಧಾನಕ್ಕೆ 'ಟಪೋಗ್ರಫಿ' (Topography) ಎಂದು ಅರ್ಥವಿದೆ. ಅಲ್ಲದೆ ಟೋಪಾಗ್ರಫ್ ಎಂದು ಕರೆಯುವುದುಂಟು. ಇದು ಸ್ಥಳ ವಾಸ್ತವ್ಯವನ್ನು ತಿಳಿಸುತ್ತದೆ. ಅಲ್ಲದೆ ಟಾಪ್+ಗ್ರಫಿ (=tpoo+grafi) ಟಾಪೋಲಜಿ, ಟಪೋನಿಮ್ ಒನಾಮಸ್ಟಿಕ್ ಎಂದು ಕರೆಯುವುದುಂಟು.

ಸ್ಥಳನಾಮಗಳ ಉಗಮ

ಸ್ಥಳನಾಮ ಉಗಮ ನಿನ್ನೆ ಮೊನ್ನೆಯ ಹೇಳುವ ಮಾತಲ್ಲ. ಅದು ಮಾನವನಷ್ಟೇ ಹಳೆಯದು ಹಾಗೂ ಪುರಾತನ ಕಾಲದಿಂದಲೂ ಜೀವಂತವಾಗಿ ಬೆಳೆದುಬಂದಂಥವು. ಮನುಷ್ಯನ ದಿನನಿತ್ಯದ ಬದುಕು ಹಸನಾದಂತೆ ಪ್ರಾಕೃತಿಕ, ಸಾಮಾಜಿಕ, ಧಾರ್ಮಿಕ ಮತ್ತು ಜಾನಪದೀಯ ಅಂಶಗಳ ಮೂಲಕ ಸ್ಥಳನಾಮಗಳು ಹುಟ್ಟಿಕೊಂಡವು. ಜಗತ್ತು ಎಂಬುದು ಮಾನವನ ಹುಟ್ಟಿನೊಂದಿಗೆ ಒಂದು ವಿಸ್ತಾರದ ಅರ್ಥ ಪಡೆಯಿತು. ಅವನ ಹುಟ್ಟಿನ ಜೊತೆಗೆ ಸ್ಥಳನಾಮಗಳಿಂದ ಊರು, ಹಳ್ಳಿ, ಕೇರಿ, ಮನೆ, ಮಠ, ಹಟ್ಟಿ, ಪಟ್ಟಿ, ಗುಡಿ, ಗೋಪುರ, ದಯೆ, ದೇವರು ಇವುಗಳು ಹುಟ್ಟಿಕೊಂಡವು. ಹೀಗೆ ಹುಟ್ಟಿಕೊಂಡ ಪ್ರತಿಯೊಂದು ಸ್ಥಳನಾಮವು ತನ್ನದೇ ಆದ ವಿಶಿಷ್ಟ ಅರ್ಥದಿಂದ ಹೊಂದಿರುತ್ತವೆ. ಕೆಲವು ಸ್ಥಳನಾಮಗಳ ಹೆಸರನ್ನು ಕೇಳುತ್ತಿದ್ದಂತೆಯೇ ಅವು ಸ್ಫೂರ್ತಿಯ ಬುಗ್ಗೆಗಳಾಗಿ ಹೊರಹೊಮ್ಮುತ್ತವೆ. ಈ ಸ್ಥಳನಾಮಗಳು ಕೇವಲ ವ್ಯಕ್ತಿಗಳಷ್ಟೆ ಅಲ್ಲದೇ ಪ್ರಾಣಿ, ಪಕ್ಷಿ, ಹಳ್ಳಿ, ನಗರ, ನದಿ, ಬೆಟ್ಟ, ಗುಡ್ಡ, ಹಳ್ಳ, ಕೊಳ್ಳ, ಸಾಗರ, ಸರೋರವ, ಸಮುದ್ರ, ಕಣಿವೆ, ಕಂದರ ಇತ್ಯಾದಿಗಳಿಗೂ ಇದರ ವ್ಯಾಪ್ತಿ ವಿಸ್ತರಿಸಿದೆ. ಮಾನವನ ಜೀವನ ವಿಕಾಸದ ಚಾರಿತ್ರಿಕ ಅಂಶಗಳನ್ನು ನೋಡದೇ ತನ್ನ ಸಾಟಿಗಾಗಿ ನಿರ್ಮಿಸಿಕೊಂಡ ಗುಡಿಸಲು, ಮನೆ, ಹಳ್ಳಿ, ಊರು, ಪುರ, ಗ್ರಾಮ, ಪಟ್ಟಣ, ನಗರ, ಗೋಮಾಳ ಮುಂತಾದವುಗಳು ಸ್ಥಳನಾಮ ಉಗಮದಿಂದಲೇ ತಿಳಿಯುತ್ತದೆ.

"ನಮ್ಮ ಆದಿಮಾನವ ಹೇಗಿದ್ದವ ಹೇಗಾದ ಎಂಬ ನುಡಿ ಅಧ್ಯಯನಕ್ಕೆ ನಾಂದಿ ಹಾಡಿತು. ಆದಿಮಾನವನು ಕಾಡು ಪ್ರಾಣಿಗಳಂತೆ ಆಹಾರಕ್ಕಾಗಿ ಮತ್ತು ತನ್ನನ್ನು ತಾನು ಕಾಪಾಡಿಕೊಳ್ಳಲು ಪ್ರಕೃತಿಯನ್ನು ಅವಲಂಬಿಸಿದನು. ಅವನು ಪ್ರಾರಂಭದಲ್ಲಿ ಹಳ್ಳ, ನದಿಗಳು ಬತ್ತಿದಂತೆ ಆಹಾರ ಕಡಿಮೆಯಾದಂತೆ ಬೇಟೆ ಪ್ರಾಣಿಗಳು ಸಿಗದೆ ಇದ್ದಾಗ ಅವನು ಬೇರೆ ಬೇರೆ ಕಡೆಗಳಿಗೆ ವಲಸೆ ಹೋಗುತ್ತಿದ್ದನು. ಇದು ನಮ್ಮ ಕಾಡು, ನಮ್ಮ ನಾಡು ಎಂದು ಅಲೆಮಾರಿಗಳು ಹುಟ್ಟಿಕೊಂಡಿರಲಿಲ್ಲ. ಕೃಷಿಸಂಸ್ಕೃತಿ ಜೀವನ ವಿಧಾನವೇ ಪರಿವರ್ತನೆಗೊಳ್ಳುತ್ತಿತ್ತು. ಹೀಗೆ ಆದಿಮಾನವನ ಬದುಕು ಜೀವನ ಇತಿಹಾಸದಲ್ಲಿ ಒಳಗೊಂಡಿತು. ಈ ಪರಿವರ್ತನೆಯ ಸನಿಹದಲ್ಲಿ ಮಾನವನು ತನ್ನ ಅಲೆಮಾರಿ ಜೀವನಕ್ಕೊಂದು ಅಂತ್ಯ ಹೇಳುವ ನಿರ್ಧಾರ ಕೈಗೊಳ್ಳುತ್ತಾನೆ. ಹಾಗಾಗಿ ತನಗೂ, ಸಂಗಾತಿಗಳಿಗೂ ಭದ್ರತೆಯನ್ನೊದಗಿಸುವ ಜೀವನಕ್ಕೆ ಅಗತ್ಯವಾದ

ಪರಿಕರಗಳು ಲಭ್ಯವಿದ್ದು ಒಂದು ನೆಲೆಯನ್ನು ಹಾರಿಸಿಕೊಂಡ ಸ್ಥಳನಾಮಗಳು ಮಾನವನ ಒಂದು ಮಹತ್ವದ ಭವಿಷತ್ತಿನೊಳಗೆ ಹೊಂದಿರುತ್ತದೆಂದು ಹೇಳಬಹುದು."[೫]

ಮಾನವನಿಗೆ ಉಸಿರಾಡಲಿಕ್ಕೆ ಹಾಗೂ ಹಸಿವು ನೀಗಿಸಿಕೊಳ್ಳಲಿಕ್ಕೆ ನೀರು, ಆಹಾರ, ಗಾಳಿ, ಪರಿಸರ ಪ್ರಮುಖವಾಗಿ ಬೇಕು. ಜೊತೆಗೆ ನೀರಿನ ಆಸರೆಗಳಿಂದ ನದಿ, ಹಳ್ಳ, ಕಣಿವೆ, ಕೆರೆ, ಕೊಳ್ಳಗಳ ಹತ್ತಿರ ನೆಲೆ ನಿಲ್ಲಲು ಪ್ರಯತ್ನಿಸಿದ. ಈಗಿನ ಹಕ್ಕಿಪಕ್ಕಿಯವರಂತೆಯೇ ಕುರಿಗಾಯಿಗಳಂತೆಯೇ ನಾಲ್ಕಾರು ದಿನ ಒಂದೆಡೆಯಲ್ಲಿದ್ದು, ಮಡಿಕೆ, ಕುಡಿಕೆ, ಬಟ್ಟೆ, ಬರಿ, ತಟ್ಟೆ, ಪುಟ್ಟಿಗಳನ್ನು ಹೊತ್ತುಕೊಂಡು ದನ, ಕುರಿ, ಮೇಕೆ, ಕೋಳಿ, ಕತ್ತೆ, ನಾಯಿಗಳನ್ನು ಒಡಕೊಂಡು ಮುಂದೆ ಮುಂದೆ ವಲಸೆ ಹೋಗುತ್ತಿದ್ದ. ಅಲ್ಲಿ ಒಳ್ಳೆಯ ಅನುಕೂಲಕರವಾದ ಮೇವು ನೀರು ಇದ್ದಲ್ಲಿ ಉಳಿದುಕೊಳ್ಳುತ್ತಿದ್ದರು. ಅಲ್ಲಿ ನೆಲೆನಿಂತ ಕೆಲವು ದಿನಗಳಾದ ನಂತರದಲ್ಲಿ ಅವರು ನೆಲೆನಿಂತ ಸ್ಥಳಗಳು ಹಟ್ಟಿಗಳಾಗುತ್ತಿದ್ದವು. ಕೋಟೆಕೊಪ್ಪಲುಗಳಾಗುತ್ತಿದ್ದವು.

ಪಟ್ಟಿ ಅಥವಾ ಹಟ್ಟಿ, ದೆಡ್ಡಿ ಎಂಬಲ್ಲಿ ಊರು, ನಾಡು, ನೆಲೆಗಳಂತೆ ಕಂಡರೂ ಅಲ್ಲಿ ಪ್ರಮುಖವಾದ ನೆಲೆ ಆಗುತ್ತಿರಲಿಲ್ಲ. ಪಟ್ಟುಕೊಂಡಿರುವ ಅಥವಾ ಪೆಟ್ಟುಕೊಂಡಿರುವ (ಹಿಡಿದುಕೊಂಡಿರುವ) ಎಂದರೆ ಈಗ ಇದ್ದ ಅಥವಾ ಇರುವ ಎಡೆ ಎಂದು ಮಾತ್ರ ಭಾವ, ಸ್ಥಿರವಾದ ಊರು ಎಂಬರ್ಥವು ಇದಕ್ಕೆ ಕಾಲಾಂತರದಿಂದ ದೊರಕಿಕೊಂಡಿತು. ಇದರ ಮೂಲ ವ್ಯಾಪ್ತಿಯಲ್ಲಿ ಈ ಅರ್ಥವಿಲ್ಲ. ಆದ ಕಾರಣ ಹಟ್ಟಿಯು ನಮ್ಮ ನಾಡ ಜನರ ದನಗಾರಿಕೆಯ ಕಾಲದ ಬಿಡಾರವೆಂದು ನಿಶ್ಚಿತವಾಗುತ್ತಿದೆ.

ಪಟ್ಟಿಗಳು ಅಥವಾ ಹಟ್ಟಿಗಳು ಆರಂಭ ಕಾಲದಲ್ಲಿ ವಸತಿಗಳು, ಪಟ್ಟಿಯಿಂದ>ಹಟ್ಟಿಯಾಗಿ ಪಟ್ಟಿ, ಹಟ್ಟಿ, ಪಟ್ಟಿ, ಪಡು, ತೆಡ್ಡಿ (ಹಟ್ಟಿ) ಎಂಬ ಧಾತುವಿನಿಂದ ಬಂದದ್ದು ಪಟ್ಟಿ, ಹಟ್ಟಿಯೆಂದರೆ ಮನೆ, ಊರು, ಹಳ್ಳಿ, ಪಲ್ಲಿ, ಸ್ಥಳ ಎಂಬ ಅರ್ಥವುಂಟೆಂದು, ಅಲ್ಲದೆ>ಹಟ್ಟಿ ರೂಪ ವ್ಯತ್ಯಾಸಗಳ ಕುರಿತು ಶಂ.ಬಾ. ಜೋಶಿಯವರು ಈ ರೀತಿ ಅಭಿವ್ಯಕ್ತಿಸಿದ್ದಾರೆ. ಪಾಡು, ಪಾಡಿ, ಪಟ್ಟಿ, ಪಟ್ಟು, ಪಟ್ಟಣ, ಪಾಟಣ, ಪಾಟಣಾ, ಪಟ್ಟಿ, ಪಾಟಕ, ಪಾಟುಕ, ಪಟಾರ, ಪಟ್ಟಾರ, ಪೇಟಾ, ಪೇಟ್ಟಾ (ಪೇಠಾ) ಪಾಡು, ಪಾಡಾ (ಹಾಡಾ), ಪಾರಾ... ಪಾರಾ. ಒಂದು ಅರ್ಥದಲ್ಲಿ (ಓಡು) ಹರಾ, ಹಾರಾ, ಹರ...ಅರ ಪಾಡು–ಆಡು, ಪಾಡಿ, ಆಡಿ, ಪಾಡು, ಬಾಡು, ಬಾಡ, ಬಾಳು, ಬಾಳ, ಪಾಡು, ವಾಡು, ವಾಡ, ವಾಡಾ, ವಾಡೆ, ವಡೆ, ವಡಿಗೆ, ವಾಡಾ, ವಾಳ, ಏಳುವಲ, ಪಟ್ಟಿ, ಪಾಟ, ಪಾಟಿ, ವಾಟ, ವಾಟಕ, ವಾಟಿ, ವಾಟಿಕ, ವಠಾರ, ವಠರ, ವಠಾರ.

"ಪಟ್ಟಿ, ಪಾಟ, ಪಾಟಿ, ವಾಟ, ವಾಟಕ, ವಾಟಿ, ವಾಟಿಕ, ಪೇಟಿ, ಪೇಟೆ, ಪೇಠ, ಪೇಠಾ, ಪಾಠಾರ, ಪಟ್ಟಿ, ಹಟ್ಟಿ, ಪಟ್ಟು, ಹಟ್ಟು, ಪಾಟ, ಹಾಟ, ಪಾಟಕ, ಹಾಟಕ, ಪಾಡಿ, ಹಾಡಿ, ಪಾಡು, ಪಾಳು, ಹಾಳು, ಹಾಳ, ಆಳು, ಆಳ, ಆಲ, ಪಟ್ಟಿ, ಪಾಡಿ, ಪಳ್ಳಿ, ಹಳ್ಳಿ, ಹಲ್ಲಿ, ಹಳ್ಳಿ, ಪಲ್ಲಿ, ಪಲ್ಯ, ಹಳ್ಳಿ, ಪಳ್ಳಿ, ವಳ್ಳಿ, ಒಳಿ, ಳಿ, ಲಿ. ಪಟ್ಟಿ, ಹಟ್ಟಿ ಪಾಡಿ ಎಂಬುದರಲ್ಲಿ

ಒಳಗೊಂಡಿರುವ ಮನುಷ್ಯನ ಪ್ರಥಮ ಹಂತದಲ್ಲಿ ಸ್ಥಿತಿದರ್ಶಕವಾದ ಅಥವಾ ಗ್ರಾಮ ಪದಗಳಾದ ಬೇರೆ ಯಾವ ಪದಗಳಲ್ಲಿಯೂ ಇಲ್ಲ. ಪಟ್ಟಿ, ಪಾಡಿ ಎಂದರೆ ಹಿಟ್ಟಿರುವ ಹಟ್ಟಿಯ ಎಡೆ, ಪಡು ಕಷ್ಟಪಡು ಎಂದರೆ ಅನುಭವಿಸಿ, ನೋವು ಪಡು, ಜೀವನದಲ್ಲಿ ಕಷ್ಟ, ಸುಖ, ದುಃಖ, ನೋವು, ನಲಿವು, ಸಿಹಿ, ಕಹಿಗಳನ್ನು ಅನುಭವಿಸುವುದಕ್ಕೆ ಇರುವ ಜೀವನ ನಿನಾಸವೇ ಪಟ್ಟಿ-ಪಾಡು. ಪಾಡು ಎಂದರೆ ಜೀವನ ಬದುಕು ಇರುವು ಪಾಡು ಇದವೇ ನಮ್ಮ ಬಾಡು ಎಂದರೆ ಊರು, ಬದುಕು, ಪಾಡು-ಬಾಡು, ಬಾಳು ಎಲ್ಲಾವೂ ಅಂಶಗಳು ಒಂದೇ."೬

ಹೀಗೆ ಪಾಡು, ಪಾಡಿ, ಪಟ್ಟಣ, ಪೇಟೆ, ಪೇಟಿ, ಹಾರ, ಅರ, ಅಡಿ, ಬಾಡ, ಬಾಳು, ವಾಡೆ, ವಾಳ, ವಾಟ, ವಠಾರ, ಹಾಟ, ಹಾಳು, ಪಾಳ್ಯ, ಪಾಲ್ಯ, ಪಳ್ಳಿ, ಹಳ್ಳಿ ಇವೇ ಮೊದಲಾದ ಲೋಪಗಳು ಹುಟ್ಟಿಕೊಂಡವು ಎಂದು ವಿದ್ವಾಂಸರ ಅಭಿಮತ. ಅದೇನೆ ಇರಲಿ ಶಿಷ್ಟ ಸಂಪ್ರದಾಯ ಹುಟ್ಟುವುದಕ್ಕಿಂತ ಮುಂಚೆಯೇ ಜನರು, ಜನಪದರು ಹಟ್ಟಿಗಳನ್ನು ಕಟ್ಟಿಕೊಂಡು ಊರುಗಳಲ್ಲಿ ನೆಲೆಸಿ ಅಲೆಮಾರಿತನ ಜೀವನವನ್ನು ಮಾಡುತ್ತಿದ್ದರು. ಜನಪದರು ಲಾವಣಿ, ಪುರಾಣ, ದಂಥಕಥೆಗಳನ್ನು ಇಟ್ಟುಕೊಂಡು ಒಂದು ನೆಲೆಯಲ್ಲಿ ತಂಗುತ್ತಿದ್ದರು. ಆಮೇಲೆ ಸಾಮಾಜಿಕ, ಐತಿಹಾಸಿಕ ಕಲ್ಪನೆಗಳಿಗೆ, ರಾಜಕೀಯ ಸಂಘ-ಸಂಸ್ಥೆಗಳ ಉಗಮಕ್ಕೆ ಇತಿಹಾಸದ ವಿಕಾಸಕ್ಕೆ ಮೇಲಾಗಿ ಸಂಸ್ಕೃತಿ ನಾಗರಿಕತೆಗಳ ಸಮುದಾಯಕ್ಕೆ ಹಟ್ಟಿ, ಪಾಡಿ, ದೆಡ್ಡಿ, ಹಳ್ಳಿ, ಊರುಗಳೇ ಮೂಲ. ಅವುಗಳಲ್ಲಿ ಕೆಲವಾದರೂ ಪ್ರಕಾಲಕ್ಕೆ ಸೇರಿದುವೆಂದು ಹೇಳಬೇಕಾಗುತ್ತದೆ. ಊರುಗಳ ಬೆಳವಣಿಗೆಯೊಡನೆ ಭಾಷೆಯು ವಿಕಾಸಗೊಳ್ಳುತ್ತಿತ್ತೆಂಬುದರಲ್ಲಿ ಸಂದೇಶವಿಲ್ಲ. ಜ್ಞಾನವಿಜ್ಞಾನ ವಿಚಾರಗಳ ಪ್ರಚಾರದೊಡನೆ ಅಂತೆಯೇ ಭಿನ್ನ ಭಿನ್ನ ಜನಾಂಗಗಳ ಸಂಪರ್ಕದೊಡನೆ ಸಾಂಕರ್ಯ ವಿಚಾರಗಳಿಗೆ ಪಕ್ಕಾಗಿಸಿಕೊಂಡು ಸಮೃದ್ಧವಾಗಿ ಬೆಳೆಯುತ್ತದೆ. ಕಾಲವಾಹಿನಿಯೊಡನೆ ಊರುಗಳ ಹೆಸರು ಸಹ ರೂಪಾಂತರಗೊಳ್ಳುತ್ತವೆ. ಜನರ ಏಳು-ಬೀಳುಗಳು, ಅವರ ಬದುಕು, ಸಂಘರ್ಷ, ಸಂಸ್ಕೃತಿಗಳ ಆಚಾರ-ವಿಚಾರ, ಸಂಸರ್ಗ ಭಾವನಾ ಸಂಘರ್ಷಗಳು ಅವುಗಳಲ್ಲಿ ಪ್ರತಿಫಲಗೊಳ್ಳುತ್ತವೆ. ಹೀಗಾಗಿ ಸ್ಥಳನಾಮಗಳ ಇತಿಹಾಸವೇ ನಾಗರಿಕತೆಯ ಆದಿಮಾನವನ ಇತಿಹಾಸವಾಗುತ್ತವೆ ಎಂಬುದು ಪ್ರೊ. ದೇಜಗೌ ಅವರ ಅಭಿಪ್ರಾಯವಾಗಿದೆ. ಸ್ಥಳನಾಮಗಳ ಉಗಮದ ಹಿನ್ನೆಲೆಯನ್ನು ಸ್ಥೂಲವಾಗಿ ಈ ಕೆಳಗಿನಂತೆ ಹೇಳಬಹುದು.

ಪ್ರಾಕೃತಿಕ ಕಾರಣಗಳು

ಪ್ರಕೃತಿದತ್ತವಾಗಿ ತನಗೆ ತಾನೇ ರೂಪಗೊಂಡಿರುವ ಅನೇಕ ಅವಶೇಷಗಳು ಸ್ಥಳನಾಮಗಳ ಉಗಮಕ್ಕೆ ಕಾರಣ ಎಂದು ಹೇಳಬಹುದು. ಉದಾ. ಕೋಡಿಹಳ್ಳಿ, ಕೂರ್ಲಕುಂಟೆ, ಗುಡ್ಡದಹಳ್ಳಿ, ಬಂಡೆತಿಮ್ಮಲಾಪುರ, ಕರಿಕೆರೆ ಇತ್ಯಾದಿ.

ಪುರಾಣ ಐತಿಹ್ಯಾತ್ಮಕ ಕಾರಣಗಳು

ಪುರಾಣಗಳು ನಮ್ಮ ಸಂಸ್ಕೃತಿಯ ಎಲ್ಲಾ ಮುಖಗಳ ಮೇಲೂ ತಮ್ಮ ಛಾಪು ಮೂಡಿಸವೆ. ಉದಾ. ತಿಮ್ಮಲಾಪುರ, ಗೌರಿಪುರ, ಮಹಾದೇವಪುರ, ಪುರ.

ವ್ಯಕ್ತಿಗತ ಕಾರಣಗಳು

ವ್ಯಕ್ತಿಯ ವಿಶಿಷ್ಟತೆ, ವಿಲಕ್ಷಣತೆಯ ಗುಣಗಳು ಸಹ ಸ್ಥಳನಾಮಗಳ ಹುಟ್ಟಿಗೆ ಕಾರಣವಾಗುತ್ತವೆ. ಉದಾ. ಕೀತಮಾರನಹಳ್ಳಿ, ತಿಮ್ಮನಾಯನಕನಹಳ್ಳಿ, ಬಸಪ್ಪನ ಹಳ್ಳಿ.

ಪಕ್ಷಿ-ಪ್ರಾಣಿಗಳ ಕಾರಣಗಳು

ಮಾನವನು ತನ್ನ ವ್ಯವಸಾಯದ ಜೊತೆಗೆ ಪಕ್ಷಿ, ಸಾಕು ಪ್ರಾಣಿಗಳನ್ನು ಸಾಕುತ್ತಿದ್ದ ಕಾರಣಗಳಿಂದ ಸ್ಥಳನಾಮಗಳಿಗೆ ಪಕ್ಷಿ ಪ್ರಾಣಿಗಳ ಹೆಸರನ್ನು ಸೂಚಿಸಿದೆ. ಉದಾ. ಎತ್ತಿನಹಟ್ಟಿ, ಎದ್ದಲುಬೊಮ್ಮಯ್ಯನಹಟ್ಟಿ, ಕೋಣಸಂದ್ರ, ಗೂಳಿಯ್ಯನಹಟ್ಟಿ, ಗೂಳಿಮಂಗಲ.

ಕಸುಬಿನ ಕಾರಣಗಳು

ಒಂದು ಕಸುಬಿಗೆ ಸೇರಿಕೊಂಡ ಒಂದೇ ಆಚಾರ ವಿಚಾರಗಳು ಹಬ್ಬ ಹರಿದಿನಗಳನ್ನು ಆಚರಣೆ ಮಾಡುವ ಒಂದೇ ಜಾತಿಯ ಜನ ಒಂದೆಡೆ ವಾಸವಾಗುಳ್ಳ ಸ್ಥಳನಾಮಗಳಿಗೆ ಅವರವರ ಜಾತಿ ಜನಾಂಗದ ಹೆಸರುಗಳೇ ಅವರ ಸ್ಥಳಗಳಿಗೆ ಬಂದವು. ಉದಾ. ಕುರುಬರಹಳ್ಳಿ, ಬೇಡರಹಳ್ಳಿ, ವಡ್ಡರಪಾಳ್ಯ, ಗೊಲ್ಲರಹಟ್ಟಿ.

ಹೀಗೆ ಸ್ಥಳನಾಮಗಳ ಹುಟ್ಟು, ಪುರಾಣ, ವೈಶಿಷ್ಟ್ಯಗಳಿಂದ ಕೂಡಿರುತ್ತದೆ. ಭೌಗೋಳಿಕವಾಗಿ ಮತ್ತು ಪ್ರಾಕೃತಿಕ ಅಂಶಗಳೇ ಪ್ರಧಾನವಾಗಿ ಕಂಡುಬರುವ ಸ್ಥಳನಾಮಗಳು ನೇರವಾಗಿ ಬಿಡಿಸಿ ಹೇಳುತ್ತವೆ.

ಜಾನಪದೀಯ ಅಂಶಗಳಿಂದ ಮನಮುಟ್ಟದ ಸ್ಥಳನಾಮಗಳು ಜನರ ಬಾಯಿಂದ ಬಾಯಿಗೆ ಹರಿದು ಒಂದು ನಿಜರೂಪವನ್ನು ಪಡೆದುಕೊಂಡಿವೆ. ಇವುಗಳಿಗೆ ಪುರಾಣ, ಐತಿಹ್ಯಗಳು, ಪ್ರಾಕೃತಿಕವಾದ, ಪಂಡಿತರ ಬೌದ್ಧಿಕಮಟ್ಟ, ರಾಜಕಾರಣಿಗಳ ಉತ್ತಮ ಸೇವೆ, ಸಾಮಾಜಿಕ ಕ್ರಾಂತಿಗಳು ಇನ್ನೂ ಮುಂತಾದ ಅಂಶಗಳಿಂದ ಸ್ಥಳನಾಮಗಳ ಮಹತ್ವವಾಗಿವೆ.

ಸ್ಥಳನಾಮಗಳ ಅಧ್ಯಯನದ ಇತಿಹಾಸ

ಇತಿಹಾಸವನ್ನು ತಿಳಿಯದವ ಇತಿಹಾಸವನ್ನು ಸೃಷ್ಟಿಸಲಾರ ಎಂಬ ಮಾತಿನಂತೆ, ಒಂದು ಸ್ಥಳದ ಮಾಹಿತಿಯನ್ನು ಕುರಿತು ತಿಳಿಯುವ ಪ್ರಾಮುಖ್ಯತೆಯನ್ನು ಹೊಂದಿರಬೇಕು. ಮಾನವನಿಗೆ ಮಾತು ಹೇಗೆ ಪ್ರಮುಖವಾಗಿರುತ್ತದೆಯೋ ಆತ ನೆಲಸಿದ ಸ್ಥಳವು ಕೂಡ ಅಷ್ಟೇ ಇತಿಹಾಸವನ್ನು ಹೊಂದಿರುತ್ತದೆ. ಹೀಗೆ ಸ್ಥಳನಾಮಗಳ ಇತಿಹಾಸ ತಿಳಿದುಕೊಳ್ಳುವ ಅಧ್ಯಯನದ ಉದ್ದೇಶವಾಗಿರುತ್ತದೆ.

ವಿವಿಧ ಮಾನವಿಕ ಗುಂಪುಗಳಿಗೆ ಒಂದು ಚರಿತ್ರೆ ಇರುವಂತೆ ಸ್ಥಳನಾಮಾಧ್ಯಯನ ಶಾಸ್ತ್ರಕ್ಕೂ ಒಂದು ಇತಿಹಾಸವಿದೆ. ಇದಕ್ಕೆ ಎರಡು ಶತಮಾನಗಳಿಂದಲೂ ಇತಿಹಾಸ ಇರುವುದು ಸತ್ಯವಾದರೂ ಅದೊಂದು ಶಾಸ್ತ್ರವಾಗಿ ಭದ್ರಬುನಾದಿಯನ್ನು ಹೊಂದಿದ್ದು ಒಂದು ಶತಮಾನದ

ಹಿಂದೆಯಷ್ಟೆ. ಶತಮಾನದ ಉತ್ತರಾರ್ಧದಲ್ಲಿ ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಪಾಣಿನಿ ಸ್ಥಳನಾಮಗಳ ಸಾಂಸ್ಕೃತಿಕ ಲಕ್ಷಣಗಳನ್ನು ಗುರುತಿಸಿದ್ದ.

೧೭೬೮ರಲ್ಲಿ ಜರ್ಮನಿಯ ಗಾಟ್‌ಫ್ರೀಡ್ ವಿಲ್‌ಹೆಲ್ಮ್ ಲೀಬ್ನಿಜ್ ಎಂಬ ವಿದ್ವಾಂಸ ಕೆಲವು ಲೇಖನಗಳನ್ನು ಪ್ರಕಟಿಸಿ ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನದ ಅವಶ್ಯಕತೆಯನ್ನು ಅರ್ಥಗರ್ಭಿತವಾದವುಗಳೆಂದು ಅವುಗಳ ಪ್ರಾಚೀನ ರೂಪಗಳಿಂದ ಅರ್ಥವನ್ನು ನಿರ್ಣಯಿಸಬಹುದೆಂದೂ ಪ್ರಪ್ರಥಮವಾಗಿ ಘೋಷಿಸಿದನು. ಲೀಬ್ನಿಜ್ ಸ್ಥಳನಾಮಗಳ ರಚನೆ ಮತ್ತು ಸನ್ನಿವೇಶಗಳ ಮಹತ್ವವನ್ನು ಇಡೀ ಯುರೋಪ್ ಖಂಡಕ್ಕೆ ಪರಿಚಯಿಸಿದ. ಹಾಗೂ ಆ ಶಾಸ್ತ್ರ ಪ್ರಕಾರಕ್ಕೆ ಕ್ರಮಬದ್ಧವಾದಂತಹ ವಿಧಿ-ವಿಧಾನಗಳನ್ನು ರೂಪಿಸಿದ. ಮುಂದೆ ಸ್ಥಳನಾಮಶಾಸ್ತ್ರದ ವಿಕಾಸಕ್ಕೆ ಭದ್ರಬುನಾದಿ ಹಾಕಿದವನು ಇಂಗ್ಲೆಂಡಿನ ಸ್ಕೀಟ್ ಮಹಾಶಯ. ಮುಂದೆ ಎ.ಎಚ್.ಸ್ಮಿತ್, ಇಕ್ವಾಲ್, ಗಾರ್ಡಿನರ್, ಆಟ್ಲೆ, ಸ್ಟೂಟನ್, ಡಾಜತ್, ಅಡಾಲ್ಫ್ ಬ್ಯಾಂಕ್ ಮುಂತಾದ ವಿದ್ವಾಂಸರು ಈ ಅಧ್ಯಯನಕ್ಕೆ ಒಂದು ಚೌಕಟ್ಟು ನೀಡಿದರು. ೧೮೪೦ರಲ್ಲಿ ಜರ್ಮನಿಯ ಫಾರ್ ಸ್ಟೀಮನ್, ಫ್ರಾನ್ಸಿನ ಲಾಂಗ್ಮನ್, ನಾರ್ವೆಯ ರೈ, ಸ್ವೀಡನ್‌ನಲ್ಲಿ ನೋರಿನ್ ಈ ಅವಧಿಯಲ್ಲಿ ಅಪಾರವಾದ ಕೊಡುಗೆಯನ್ನು ಸಲ್ಲಿಸಿರುವುದರ ಮೂಲಕ ಬೆಳೆಸಿದರು.

ಸ್ಥಳನಾಮ ಸಂಶೋಧನೆಯಲ್ಲಿ ಹೆಸರುಗಳು ಐತಿಹಾಸಿಕ ವಿಕಾಸದ ಕಾರಣವಾಗಿಯೂ ಭೌಗೋಳಿಕ ಆಕರಗಳಾಗಿಯೂ ಪರಿಗಣಿಸಿ ಅಧ್ಯಯನಕ್ಕೆ ಒಳಪಡಿಸಿದರು. ಅಷ್ಟೇ ಅಲ್ಲದೆ ಅದರ ಜೊತೆಗೆ ಸಾಂಸ್ಕೃತಿಕ, ಸಾಮಾಜಿ, ಆಯಾಮಗಳ ಮುಖಾಂತರವೂ ಸ್ಥಳನಾಮಶಾಸ್ತ್ರದ ಪ್ರಸ್ತುತತೆಯನ್ನು ಖಚಿತಪಡಿಸಿದರು.

"ಸ್ಥಳನಾಮಾಧ್ಯಯನ ಮೊದಲಿಗೆ ಪ್ರಾರಂಭವಾದದ್ದು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಎಂಬುದಂತೂ ಸತ್ಯದ ಸಂಗತಿ. ತದನಂತರದ ಕಾಲದಲ್ಲಿ ಭಾರತದಲ್ಲಿಯೂ ಈ ಅಧ್ಯಯನ ಆರಂಭವಾಯಿತು. ಮುಂದುವರೆದ ರಾಷ್ಟ್ರಗಳಲ್ಲಿ ಸ್ಥಳನಾಮಾಧ್ಯಯನದ ಸಂಘಗಳು, ಪತ್ರಿಕೆಗಳು, ಅಧ್ಯಯನಾವಧಿಗಳು ಏರ್ಪಟ್ಟಿರುವುದಾದರೂ ನಮ್ಮ ದೇಶದಲ್ಲಿ ನಾವಿನ್ನು ಸ್ಥಳನಾಮಾಧ್ಯಯನದ ಅಗಾಧ ಸಾಧ್ಯತೆಯನ್ನು ಮನವರಿಕೆ ಮಾಡಿಕೊಂಡಿಲ್ಲ. ಅರಸುಮನೆತನಗಳ ವಂಶಾವಳಿ, ಅವರು ನಡೆಸಿದ ಯುದ್ಧಗಳು, ಯಾಗಗಳು ಅವರ ಪ್ರಶಸ್ತಿಗಳ ವಿರವೇ ಇಂದಿಗೂ ನಮ್ಮ ದೇಶದಲ್ಲಿ ಚರಿತ್ರೆ ಎಂಬ ಹೆಸರಿನಲ್ಲಿ ಚಾಲ್ತಿಗೊಂಡಿರುವುದು ಹೇಗೆ ನಿಜವೋ ಸ್ಥಳನಾಮಾಧ್ಯಯನ ಎಂದರೆ ಸ್ಥಳಪುರಾಣದ ರಚನೆ ಮತ್ತು ಅನುಕರಣೆ ಎಂಬ ನಂಬುಗೆ ನಮ್ಮ ವಿದ್ಯಾವಂತರಲ್ಲೂ ಬೇರೂರಿರುವುದು ಹಾಗೆಯೇ ನಿಜ. ಎಲ್ಲೋ ಕೆಲವು ವಿದ್ವಾಂಸರು ಮಾತ್ರ ಇಂಥ ಊಳಿಗಮಾನ್ಯ ಚಿಂತನೆಯ ನಿರ್ಬಂಧದಿಂದ ಪಾರಾಗಲು ಶಕ್ಯರಾಗಿದ್ದಾರೆ. ಇವರ ಪೈಕಿ ಎಸ್.ಕೆ. ಚಟರ್ಜಿ, ಬಿ.ಸಿ.ಲಾ., ಎಚ್.ಡಿ. ಸಂಕಾಲಿಯ ಮುಂತಾದವರು ಸ್ಥಳನಾಮಾಧ್ಯಯನಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ಪ್ರಸ್ತುತ ದಿನಮಾನಗಳಲ್ಲಿ ಸ್ಥಳನಾಮಗಳ ಅಧ್ಯಯನವು ಸಾಕಷ್ಟು ಮುಂದುವರೆದಿದೆ. ಅನೇಕ ಸಂಘ ಸಂಸ್ಥೆಗಳು, ಸಂಘಟನೆಗಳು,

ವೃತ್ತಪತ್ರಿಕೆಗಳು, ಸಾಪ್ತಾಹಿಕ ನಿಯತ ಕಾಲಿಕೆಗಳಲ್ಲಿ ಸ್ಥಳನಾಮದ ಉಗಮ ಮತ್ತು ಬೆಳೆದು ಬಂದ ಇತಿಹಾಸವನ್ನು ಇನ್ನು ಮುಂತಾದ ವಿಷಯಗಳು ಮುಂದುವರೆದು ಸಂಶೋಧಕರಿಗೆ ಉಪಯುಕ್ತವಾದ ಮಾಹಿತಿಯನ್ನು ಒದಗಿಸುತ್ತದೆ."೭

ಭಾರತದಲ್ಲಿ ಸ್ಥಳನಾಮಗಳ ಅಧ್ಯಯನದ ಆಲೋಚನೆ ಹೊಸದು. ಸ್ಥಳನಾಮಗಳನ್ನು ಕುರಿತು ಪುರಾಣ ಐತಿಹ್ಯಗಳಲ್ಲಿ ಸಾಕಷ್ಟು ಕಂಡುಬಂದರೂ, ಅವುಗಳ ಬಗೆಗಿನ ಅಧ್ಯಯನಗಳು ಕ್ರಮಬದ್ಧವಾಗಿ ಅಧ್ಯಯನ ನಮ್ಮಲ್ಲಿ ನಡೆದುಬರಲಿಲ್ಲ. ಈ ಶತಮಾನದಲ್ಲಿ ಆಂಧ್ರಪ್ರದೇಶ, ಕೇರಳ, ತಮಿಳುನಾಡು ಮುಂತಾದ ರಾಷ್ಟ್ರಗಳಲ್ಲಿ ಸ್ಥಳನಾಮಗಳ ಅಧ್ಯಯನ ವಿಶೇಷವಾಗಿ ಆರಂಭವಾಯಿತು.

ಭಾರತದಾದ್ಯಂತ ನಡೆದಿರುವ ಸ್ಥಳನಾಮಾಧ್ಯಯನ ಬರೆದಿರಬಹುದಾದರೆ ಅಪ್ಪಯ್ಯ ದೀಕ್ಷಿತ "ನಾಮ ಸಂಗ್ರಹಮಾಲ" ಎಂಬ ಹೊತ್ತಿಗೆಯನ್ನು ಸಂಸ್ಕೃತದಲ್ಲಿ ತಂದಿದ್ದಾರೆ. ಈ ಕೃತಿಯಲ್ಲಿ ಜಾನಪದೀಯ ಮತ್ತು ಊಹಾತ್ಮಕ ವಿವರಣೆಗಳು ದೊರೆಯುತ್ತವೆ. ೧೮೨೩ರಲ್ಲಿ ಎಚ್. ಬಾಲಲೋಚನ "Contribution of place names to the geography and history of Benral" ಎಂಬ ಲೇಖನದಲ್ಲಿ ಐತಿಹಾಸಿಕ ಘಟನೆಗಳು, ಸ್ಥಳನಾಮಾಧ್ಯಯನದ ವಿಧಿ-ವಿಧಾನ ಮತ್ತು ಸ್ಥಳನಾಮಗಳ ವೈಶಿಷ್ಟ್ಯತೆಯನ್ನು ಹೇಳಿದ್ದಾರೆ.

೧೮೨೭ಕ್ಕಿಂತಲೂ ಹಿಂದೆಯೇ ಗುಂಡರ್ಟ್ ಎಂಬ ವಿದ್ವಾಂಸರು ಕೇರಳದ ಸ್ಥಳನಾಮಗಳನ್ನು ಮಲಯಾಳ ನಿಘಂಟಿನಲ್ಲಿ ಉಲ್ಲೇಖಿಸಿದ್ದಾರೆ. ೧೮೩೪ರಲ್ಲಿ "Directonary in English and Benrali" ಎಂಬ ಸ್ಥಳನಾಮ ಕೋಶವನ್ನು ಸಿದ್ಧಪಡಿಸಿದ್ದಾನೆ. ೧೮೭೭ರಲ್ಲಿ W.S.F. Indian Antiquary on "Names of countries end ing in stan" ಎಂಬಲ್ಲಿ ಕುರ್ದಿಸ್ತಾನ್, ಗುರ್ಗಿಸ್ತಾನ್ ಮತ್ತು ಗುಗೆಸ್ತಾನ್ ಎಂಬ ಸ್ಥಳನಾಮಗಳನ್ನು ಉಲ್ಲೇಖಿಸಿದ್ದಾರೆ. ಆರ್.ಪಿ. ಬ್ರಾನ್‌ಪಿಲ್ "The names of place in Tanjore District" in Madras Journal of literature and science" ಎಂಬ ಲೇಖನದಲ್ಲಿ ೧೮೭೮ರಲ್ಲಿ ಸ್ಥಳನಾಮಗಳ ಮೂಲ ಮತ್ತು ಸ್ಥಳನಾಮಗಳ ಪ್ರತ್ಯಯಗಳನ್ನು ಕುರಿತು ಹೇಳಿದ್ದಾರೆ. ಆರ್.ಎಸ್. ವೈಟ್‌ವೆಯ್ಸ್ ೧೮೯೬ರಲ್ಲಿ "Place names of maware" ಎಂಬ ಲೇಖನ ಸಿದ್ಧಪಡಿಸಿ "Asiatic Society of Bombay"ದಲ್ಲಿ ಪ್ರಕಟಿಸಿದ್ದಾರೆ. ಜಲವಾಚಕ ಮತ್ತು ಸಾಮಾಜಿಕ ಸ್ಥಳನಾಮಗಳ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ.

ಪದ್ಮನಾಭ ಮೆನನ್ ೧೯೦೨ರಲ್ಲಿ "Discursive notes on malbar and its place names in Indian Antiquary" ಎಂಬ ಲೇಖನದಲ್ಲಿ ಐತಿಹ್ಯ ಮತ್ತು ಪುರಾಣಗಳಿಂದ ಬಂದ ಸ್ಥಳನಾಮ ವಿವರಗಳನ್ನು ಗುರುತಿಸಿದ್ದಾರೆ. ಅಲ್ಲದೆ ಕೇರಳ ಎಂಬುದು 'ಚೆರಾ' ಎಂಬ ಕನ್ನಡ ಪದದಿಂದ ಬಂದಿದ್ದೆಂದು ಹೇಳಿದ್ದಾರೆ. ಜೆ.ಎಫ್. ಫ್ಲೀಟ್ ಭಾರತೀಯ ಸ್ಥಳನಾಮಾಧ್ಯಯನ ಕ್ಷೇತ್ರದಲ್ಲಿ ಪ್ರಸಿದ್ಧವಾದ ಹೆಸರು. ೧೯೦೨ರಲ್ಲಿ ಶಾಸನಗಳಲ್ಲಿ ಸ್ಥಳನಾಮಗಳ ಬಗ್ಗೆ ಅಧ್ಯಯನ

ನಡೆಸಿದ್ದಾರೆ. ಹಯವದನರಾವ್ ೧೯೧೫ರಲ್ಲಿ "Journal of Mythic Society" ಎಂಬ ಪತ್ರಿಕೆಯಲ್ಲಿ ದ್ರಾವಿಡ ಭಾಷೆಗಳಲ್ಲಿ ಕಂಡುಬರುವ ಸುಮಾರು ೬೦ ಗ್ರಾಮನಾಮ ಪ್ರತ್ಯಯಗಳನ್ನು ವಿಶ್ಲೇಷಿಶಿದ್ದಾರೆ.

ಕೆ.ಪಿ. ಪದ್ಮನಾಭ ಮೆನನ್ ೧೯೩೨ "Some place names of malbar" ಎಂಬ ಲೇಖನದಲ್ಲಿ ದಕ್ಷಿಣ ಭಾರತದ ಸುಮಾರು ಹತ್ತು ಪ್ರಕಾರ ಸ್ಥಳನಾಮ ವರ್ಗೀಕರಣವನ್ನು ತಿಳಿಸಿದ್ದಾರೆ. ಸಿ. ನಾರಾಯಣರಾವ್ ೧೯೩೫ "A Study of place names in Ananthapur District ಎಂಬ ಲೇಖನದಲ್ಲಿ ತೆಲುಗು ಭಾಷೆಯ ನಿಷ್ಪತ್ತಿಯನ್ನು ಹೇಳಿದ್ದಾರೆ. ಈ ಲೇಖನದಲ್ಲಿ ಹದಿನಾರು ಬಗೆಯ ಸ್ಥಳನಾಮ ಪ್ರತ್ಯಯಗಳ ಉಲ್ಲೇಖವಿದೆ. ೧೯೩೫ ರಿಂದ ೧೯೫೫ರ ನಡುವೆ ರಾಮಚಂದ್ರ ಚಟ್ಟಿಯಾರ್ ಕೆ. ಅಚ್ಚುತಾ ಮೆನನ್, ಎಸ್.ಸಿಲ್ವಾ, ಎಸ್.ಬಿ. ಜೋಷಿ, ದೇಜಗೌ ಮತ್ತು ಆರ್.ಸಿ. ಹಿರೇಮಠ ಇನ್ನೂ ಮುಂತಾದವರು ಸ್ಥಳನಾಮಗಳ ಬಗ್ಗೆ ವಿವಿಧ ಲೇಖನಗಳನ್ನು ಬರೆದು ಪ್ರಚುರಪಡಿಸಿದ್ದಾರೆ.

೧೯೩೯ರಲ್ಲಿ ಆರ್.ಪಿ. ಸೇತು ಪಿಳ್ಳೈ ಸ್ಥಳನಾಮಗಳ ಬಗ್ಗೆ ಲೇಖನ ಬರೆದಿದ್ದು ಅವು ದ್ರಾವಿಡ ಭಾಷೆಗಳನ್ನು ಕುರಿತದ್ದಾಗಿವೆ. ೧೮೫೦ರಲ್ಲಿ ತಮಿಳುನಾಡಿನ ಸ್ಥಳನಾಮಗಳ ಬಗ್ಗೆ ಅನೇಕ ಲೇಖನ ಮತ್ತು ಕವನ ಬರೆದು ಪ್ರಕಟಿಸಿದ್ದಾರೆ.

"ಎಸ್.ಡಿ. ಸಂಕಾಲಿಯ ಸ್ಥಳನಾಮಾಧ್ಯಯನಕ್ಕೆ ಭದ್ರಬುನಾದಿ ನಿರ್ಮಿಸಿ ಪೂರ್ಣ ಸ್ವರೂಪವನ್ನು ಕೊಟ್ಟ ಕೀರ್ತಿ ಇವರಿಗೆ ಸಲ್ಲಬೇಕು. ಸ್ಥಳನಾಮಗಳ ಪೂರ್ವಾಪರ ಪ್ರತ್ಯಯಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಧಾರ್ಮಿಕ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಅವುಗಳನ್ನು ವಿಶ್ಲೇಷಿಸುವುದಾದರೆ ಜನಾಂಗೀಯ ಭೌಗೋಳಿಕ ಹಂಚಿಕೆಯ ವಿವರಣೆ ಸಾಧ್ಯವೆಂಬುದನ್ನು ತೋರಿಸಿಕೊಟ್ಟರು. ಜೊತೆಗೆ ಆಯಾಯ ಕಾಲದ ಭಾಷೆಯ ಸ್ಥಿತಿಗತಿಗಳನ್ನು ನಿರ್ಣಯಿಸುವಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗ್ರಹಿಸುವಲ್ಲಿ ಲೆಕ್ಕಾಚಾರ ರೀತಿ ರೂಢಿಗಳನ್ನು ಗುರುತಿಸುವಲ್ಲಿ ಅವುಗಳ ಅಧ್ಯಯನದಿಂದ ವಿಶೇಷ ಲಾಭವೊದಗುತ್ತದೆಂದು ವಿಶದಪಡಿಸಿದರು. ಈ ಕ್ಷೇತ್ರದಲ್ಲಿ ಅನೇಕ ವಿಕ್ರಮಗಳನ್ನು ಸ್ಥಾಪಿಸಿದ್ದಲ್ಲದೆ ಹಲವು ತರುಣ ಸಂಶೋಧಕರಿಗೆ ಮಾರ್ಗದರ್ಶನ ನೀಡಿ ತತ್ಸಂಬಂಧವಾದ ಅಧ್ಯಯನಕ್ಕೆ ಕಾರಣರಾದರು."[೮]

ಶಂಬಾ ಜೋಶಿ "ಎಡೆಗಳು ಹೇಳುವ ಕಂನಾಡ ಕತೆ" ೧೯೮೭ ಕೃತಿಯಲ್ಲಿ ಸ್ಥಳನಾಮದ ಉಗಮ, ವರ್ಗೀಕರಣ, ವಿವಿಧ ಜನಾಂಗಗಳು ನೆಲೆಸಿದ ಬಗ್ಗೆ ಸ್ಥಳನಾಮಗಳ ಪೂರ್ವಾಪರ ಪರಂಪರೆಯ ಬಗ್ಗೆ ಕುರಿತು ಉತ್ತಮ ಪುಸ್ತಕವನ್ನು ರಚಿಸಿದ್ದಾರೆ. ಡಾ.ಆರ್.ಸಿ. ಹಿರೇಮಠರು ಆಧುನಿಕ ಸ್ಥಳನಾಮ ಮತ್ತು ಶಾಸನಗಳ ತೌಲನಿಕ ಅಧ್ಯಯನವೆಂಬ ವಿಷಯವಾಗಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

೧೯೭೮ರಲ್ಲಿ ಪ್ರೊ. ದೇ.ಜವರೇಗೌಡ ಪರಿಶ್ರಮ ಫಲವಾಗಿ "Place names soceity of India" ಎಂಬ ಸ್ಥಳನಾಮ ಸಂಸ್ಥೆ ಸ್ಥಾಪನೆಯಾಯಿತು. ಈ ಸಂಸ್ಥೆಯ ಹುಟ್ಟಿಗೆ ಜಿ.ಎಸ್.

ಗಾಯ್‌ರವರ ಒತ್ತಾಸೆಯು ಕೂಡ ಇದೆ. ಈ ಸಂಸ್ಥೆ ಈಗಾಗಲೇ ೨೭ ವಾರ್ಷಿಕ ಸಂಚಿಕೆಗಳನ್ನು ಹೊರ ತಂದಿದ್ದು ಈ ಸಂಚಿಕೆಗಳು ನಾಡಿನ ಸಂಶೋಧನ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿವೆ.

ಡಾ. ನಾಚಿಮುತ್ತು ''Study of toponymy ಪ್ರೊ.ಕೆ.ಎಂ. ಜಾರ್ಜ್ ಇವರು Dravidian place names ಎಂಬ ವಿಚಾರದ ಬಗ್ಗೆ ಉಲ್ಲೇಖರ್ಹವಾದ ಕೆಲಸ ಮಾಡಿದ್ದಾರೆ. ದೇ.ಜ.ಗೌ 'ಸ್ಥಳನಾಮ ವ್ಯಾಸಂಗ' ಎಂಬ ಕೃತಿಯನ್ನು ೧೯೭೦ರಲ್ಲಿ ರಚಿಸಿ ಅದರಲ್ಲಿ ಸ್ಥಳನಾಮಗಳ ಉಗಮ, ಸ್ಥಳನಾಮ ವಿಜ್ಞಾನದ ಪ್ರಭಾವ, ವರ್ಗೀಕರಣ, ಇತಿಹಾಸ ಮುಂತಾದ ಅಂಶಗಳ ಬಗ್ಗೆ ಆಳವಾದ ವ್ಯಾಸಂಗ ನಡೆಸಿದ್ದಾರೆ. ಅಲ್ಲದೆಯೂ ಬೆರಕೆ ಸೊಪ್ಪು ಕೃತಿಯಲ್ಲಿ Studies in Indan place names ಎಂಬ ನಿಯತಕಾಲಿಕೆಯಲ್ಲಿ ಅನೇಕ ಲೇಖನಗಳು ಸ್ಥಳನಾಮಗಳ ಬಗ್ಗೆ ಕುರಿತದ್ದಾಗಿವೆ.

"ಕೆಮ್ತೂರು ರಘುಪತಿಭಟ್ಟ ಸ್ಥಳನಾಮಗಳ ವ್ಯಾಸಂಗದಲ್ಲಿ ಬಹುಮುಖ ಪ್ರತಿಭೆಯನ್ನು ರೂಢಿಸಿಕೊಂಡಿರುವ ಇವರು 'ಹೆಸರಿನಲ್ಲೇನಿದೆ', 'ತುಳುನಾಡಿನ ಸ್ಥಳನಾಮಗಳು', 'Aglossary of place name elements in Tulu and Kannada' ಎಂಬ ನಿಘಂಟನ್ನು ಹೊರತಂದದ್ದಲ್ಲದೆ, ಸಾಧನೆ, ತರಂಗ, ಜಾನಪದ ಜಗತ್ತು Internaional Journal of Dravidian lingustics, quarter journal of the mythic society ಮುಂತಾದ ನಿಯತಕಾಲಿಕೆಗಳಲ್ಲಿ ತುಳುನಾಡು ಸ್ಥಳನಾಮಗಳ ಬಗ್ಗೆ ಲೇಖನ ಬರೆದಿದ್ದಾರೆ. ಡಾ.ಎಂ. ಚಿದಾನಂದಮೂರ್ತಿ 'ವಾಗಾರ್ಥ' (೧೯೮೧) ಕೃತಿಯಲ್ಲಿ ಸ್ಥಳನಾಮಗಳ ಬಗ್ಗೆ ವಿಶ್ಲೇಷಿಸಿದ್ದಾರೆ."[೯]

* ಕೆ.ಎಂ. ಜಾರ್ಜ್ ೧೯೭೬ರಲ್ಲಿ "Avalyable work on toponymy" ಎಂಬ ಮಹಾಪ್ರಬಂಧದಲ್ಲಿ ತಮಿಳು, ಮಲಯಾಳಂ, ತೆಲುಗು ಮತ್ತು ಕನ್ನಡದಲ್ಲಿನ ಎರಡುನೂರ ಮೂವತ್ತು ಸ್ಥಳನಾಮಗಳ ನಿರ್ದಿಷ್ಟಗಳನ್ನು ವಿಶೇಷವಾಗಿ ಹೇಳಿದ್ದಾರೆ.

* ಕೆಮ್ತೂರು ರಘುಪತಿ ಭಟ್ಟ ಇವರು ೧೯೭೭ರಲ್ಲಿ "ತುಳುನಾಡಿನ ಸ್ಥಳನಾಮಗಳು" ಎಂಬ ವಿಷಯವನ್ನು ಶ್ರೀ ಹಾ.ಮಾ. ನಾಯಕರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿ ಮೈಸೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಎಪ್ಪತ್ತರ ದಶಕದಲ್ಲಿ ಅತ್ಯಂತ ಮಹತ್ವದ ಸಂಶೋಧನೆಯು, ಸ್ಥಳನಾಮಗಳ ಕುರಿತು ಕನ್ನಡದಲ್ಲಿ ರಚಿತವಾದ ಮೊದಲ ಸಂಶೋಧನಾ ನಿಬಂಧವಿದು.

* ಎಸ್. ಜಯಪ್ರಕಾಶ್ ಇವರು ಎಸ್. ಅಕ್ಕಿರೆಡ್ಡಿಯವರ ಮಾರ್ಗದರ್ಶನದಲ್ಲಿ ''Village names of Chenralput district place names'' (Five border taluk) ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ೧೯೮೧ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದಿದ್ದಾರೆ.

* ಕೆ. ಸರಸ್ವತಿಯವರು ೧೯೮೮ರಲ್ಲಿ ಕೇತು ವಿಶ್ವನಾಥ ರೆಡ್ಡಿಯವರ ಮಾರ್ಗದರ್ಶನದಲ್ಲಿ 'ಚಿತ್ತೂರು ಜಿಲ್ಲಾ ಗ್ರಾಮನಾಮಾಲು' (ತೆಲುಗು) ಎಂಬ ವಿಷಯಕ್ಕೆ ತಿರುಪತಿ ವೆಂಕಟೇಶ್ವರ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ.

* ಯಂ. ಗೋವಿಂದಸ್ವಾಮಿ ನಾಯ್ಡುರವರು ೧೯೮೨ರಲ್ಲಿ 'ಅನಂತಪುರಂ ಜಿಲ್ಲಾ ಗ್ರಾಮನಾಮಾಲು – ಭಾಷಾ ಸಾಮಾಜಿಕ ಪರಿಶೀಲನೆ' ಎಂಬ ನಿಬಂಧವನ್ನು ತಿರುಪತಿ ವೆಂಕಟೇಶ್ವರ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಡಾಕ್ಟರೇಟ್ ಪಡೆದಿದ್ದಾರೆ.

ಡಾ. ಎಂ.ಎಂ. ಕಲಬುರ್ಗಿ 'ಮಾರ್ಗ ಸಂಪುಟ' ಎರಡರಲ್ಲಿ ಸ್ಥಳನಾಮಕ್ಕೆ ಸಂಬಂಧಿಸಿದಂತೆ ನಾಲ್ಕು ಲೇಖನಗಳನ್ನು ಬರೆದಿದ್ದಾರೆ. ಕೆ.ವಿ. ರಮೇಶರವರು 'ಸಂಶೋಧನೆ' ವಿ. ಗೋಪಾಲಕೃಷ್ಣ 'ಸ್ಥಳನಾಮ ಅಧ್ಯನಯಗಳು' ೧೯೮೭ ಎಂಬ ಕೃತಿಯಲ್ಲಿ ಕೆಲವು ಸ್ವಾರಸ್ಯಕರವಾದ ವಿಷಯಗಳನ್ನು ತಿಳಿಸಿದ್ದು ಈ ಕೃತಿ ಸ್ಥಳನಾಮ ಸಂಶೋಧನೆಗೆ ಒಂದು ಉಪಯುಕ್ತ ಹಾಗೂ ಮೌಲಿಕ ಕೃತಿಯಾಗಿದೆ.

ಸ್ಥಳನಾಮ ಅಧ್ಯಯನದ ಇತಿಹಾಸದ ಜೊತೆಗೆ ಬೇರೆ ಬೇರೆ ಭಾಷೆಗಳಲ್ಲಿ ವಿವಿಧ ವಿದ್ವಾಂಸರು ಮಹಾಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಅವುಗಳನ್ನು ಈ ಕೆಳಗಿನಂತಿವೆ.

* ಪ್ರಶಾಂತ ಕುರ್ಲ ಎಂಬುವರು ೧೯೬೫ರಲ್ಲಿ ''A Socio-linguist study of the place names of sahoranpur Distric ಎಂಬ ನಿಬಂಧ ಪಿಎಚ್.ಡಿ. ಸಂಕಾಲಿಯುವರ ಮಾರ್ಗದರ್ಶನದಲ್ಲಿ ರಚಿಸಿ ಪುನಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಗಳಿಸಿದ್ದಾರೆ. ಭಾರತದ ಸ್ಥಳನಾಮಗಳನ್ನು ಕುರಿತ ಪ್ರಪ್ರಥಮ ಪ್ರಬಂಧ ಇದಾಗಿದೆ.

* ಜ್ಞಾನಮುತ್ತು ಎಂಬುವರು "Place names of Kanyakumari District" ಎಂಬ ವಿಷಯದಲ್ಲಿ ೧೯೭೨ರಲ್ಲಿ ಪಿಎಚ್.ಡಿ. ಪ್ರಬಂಧ ರಚಿಸಿದ್ದಾರೆ.

* ಎಸ್.ಎಸ್. ರಾಮಚಂದ್ರಮೂರ್ತಿಯವರು "ಶಾಸನಲ್ಲೋನಿ ಸ್ಥಳನಾಮಾಲು" ಎಂಬ ಸಂಶೋಧನೆಗೆ ಆಂಧ್ರ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದುಕೊಂಡಿದ್ದಾರೆ.

* ಕೇತು ವಿಶ್ವನಾಥರೆಡ್ಡಿಯವರು ೧೯೭೫ರಲ್ಲಿ "ಕಡಪ ಊರ್ಲ ಪೇರ್ಲು" ಎಂಬ ವಿಷಯದಲ್ಲಿ ತೆಲುಗು ಭಾಷೆಯಲ್ಲಿ ಜಿ.ಎನ್. ರೆಡ್ಡಿಯವರ ಮಾರ್ಗದರ್ಶನದಲ್ಲಿ ಮಹಾಪ್ರಬಂದ ರಚಿಸಿ ಪಿಎಚ್.ಡಿ. ಪದವಿ ಪಡೆದಿದ್ದಾರೆ.

* ವಿ. ಗೋಪಾಲಕೃಷ್ಣ ಇವರು ೧೯೮೮ರಲ್ಲಿ ಡಾ. ಹಂಪ ನಾಗರಾಜಯ್ಯರವರ ಮಾರ್ಗದರ್ಶನದಲ್ಲಿ 'ಕೋಲಾರ ಜಿಲ್ಲೆಯ ಸ್ಥಳನಾಮಗಳು ಸಾಮಾಜಿಕ ಭಾಷಾಶಾಸ್ತ್ರ ಅಧ್ಯಯನ' ಎಂಬ ಮಹಾಪ್ರಬಂಧ ರಚಿಸಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ.

* ಭಂಡೆ ವೈಜನಾಥ ಎಂಬುವರು ೧೯೯೦ರಲ್ಲಿ 'ಬೀದರ್ ಜಿಲ್ಲೆಯ ಸ್ಥಳನಾಮಗಳು' ಎಂಬ ಸಂಶೋಧನ ನಿಬಂಧ ರಚಿಸಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

* ಡಾ.ಕೆ.ಎಂ. ವೀರಭದ್ರಶರ್ಮ ಇವರು ೧೯೯೬ರಲ್ಲಿ "ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು" ಎಂಬ ವಿಷಯವನ್ನು ಕುರಿತು ಅಧ್ಯಯನವನ್ನು ನಡೆಸಿದ್ದಾರೆ.

* ಅರುಣಾದೇವಿ ಎಂ. ಇವರು ೧೯೯೬ರಲ್ಲಿ 'ಹಾಸನ ತಾಲೂಕಿನ ಸ್ಥಳನಾಮಗಳು' ಎಂಬ ವಿಷಯವನ್ನು ಕುರಿತು ಮೈಸೂರು ವಿಶ್ವವಿದ್ಯಾಲಯದಲ್ಲಿ ಅಧ್ಯಯನ ನಡೆಸಿದ್ದಾರೆ.

* ಎ. ಸುಬ್ಬಣ್ಣ ರೈ ಅವರು ಡಾ. ತಾಳ್ತಜೆ ವಸಂತ ಕುಮಾರ ಅವರ ಮಾರ್ಗದರ್ಶನದಲ್ಲಿ 'ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು' ಎಂಬ ವಿಷಯವನ್ನು ಅಧ್ಯಯನ ಮಾಡಿ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

* ಡಾ. ವಿಶ್ವನಾಥ ಇವರು 'ಸಕಲೇಶಪುರ ಪರಿಸರದ ಸ್ಥಳನಾಮಗಳು' ಎಂಬ ಸಂಶೋಧನೆಗೆ ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ.

* ಎಂ. ಪೋತಯ್ಯರವರು ಡಾ.ಆರ್. ರಾಮಕೃಷ್ಣ ಎಂಬುವರ ಮಾರ್ಗದರ್ಶನದಲ್ಲಿ ೨೦೦೦ರಲ್ಲಿ 'ಚಾಮರಾಜನಗರ ತಾಲ್ಲೂಕಿನ ಸ್ಥಳನಾಮಗಳು' ಎಂಬ ಸಂಶೋಧನೆ ಮಾಡಿ ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ.

* ಜಾಜಿ ದೇವೇಂದ್ರಪ್ಪ ಇವರು ೨೦೦೪ರಲ್ಲಿ ಡಾ.ಡಿ. ಪಾಂಡುರಂಗಬಾಬು ಇವರ ಮಾರ್ಗದರ್ಶನದಲ್ಲಿ 'ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು' ಎಂಬ ವಿಷಯವನ್ನು ಕುರಿತು ಅಧ್ಯಯನ ನಡೆಸಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ.

ಇಷ್ಟೇ ಅಲ್ಲದೆ ನಾಡಿನ ಹಲವಾರು ವಿದ್ವಾಂಸರು ಸ್ಥಳನಾಮಗಳ ಪ್ರಾಮುಖ್ಯವನ್ನು ಅರಿತು ತತ್ಸಂಬಂಧವಾದ ಸಂಶೋಧನ ವ್ಯಾಸಂಗಗಳಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಒಟ್ಟಿನಲ್ಲಿ ವೇದ ಕಾಲದಿಂದಲೇ ಸ್ಥಳನಾಮಗಳ ಉಗಮದ ಇತಿಹಾಸವಿದೆ ಎಂಬುದು ಸ್ಪಷ್ಟ. ಸ್ಥಳನಾಮಗಳಲ್ಲಿ ಕುಲನಾಮಗಳು, ವ್ಯಕ್ತಿನಾಮಗಳು ಬಂದು ಸೇರುವುದು ಸ್ಥಳನಾಮ ಅಧ್ಯಯನದಿಂದ ನಮಗೆ ತಿಳಿಯುತ್ತದೆ.

ಸ್ಥಳನಾಮ ಅಧ್ಯಯನದ ಇತಿಹಾಸ ಹದಿನೆಂಟನೆಯ ಶತಮಾನದಲ್ಲಿ ಪ್ರಾರಂಭವಾದರೂ ಇಪ್ಪತ್ತನೆಯ ಶತಮಾನದಲ್ಲಿ ತಕ್ಕಮಟ್ಟಿಗೆ ತನ್ನ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಹಾಗೂ ಜಗತ್ತಿನಾದ್ಯಂತ ಹೆಚ್ಚು ಜನರ ಆಸಕ್ತಿಗೆ ಒಳಗಾಗಿದೆ. ಅಲ್ಲದೆ ಪ್ರಮುಖವಾಗಿ ದ್ರಾವಿಡ ಭಾಷೆಗಳಲ್ಲಿ ಸ್ಥಳನಾಮ ಅಧ್ಯಯನದ ಕೆಲಸ ಹೆಚ್ಚಾಗಿ ನಡೆದಿದೆ. ಅನೇಕ ಸಂಘ ಸಂಸ್ಥೆಗಳ ಬಗ್ಗೆ ವಿಚಾರ ಸಂಕಿರಣಗಳನ್ನು ನಡೆಸಿ ನಿಯತಕಾಲಿಕೆಗಳು ಹೊರತರುತ್ತಿರುವುದು ಸ್ಥಳನಾಮ ಸಂಶೋಧಕರಿಗೆ ಹೆಚ್ಚು ಉಪಯುಕ್ತವಾಗಿದೆ.

ಒಟ್ಟಿನಲ್ಲಿ ಸ್ಥಳನಾಮ ಸಂಶೋಧಕರಿಗೆ ಹೆಚ್ಚು ಉಪಯುಕ್ತವಾಗಿದೆ. ಒಟ್ಟಿನಲ್ಲಿ ಸ್ಥಳನಾಮ ಅಧ್ಯಯನ ಒಂದು ಪ್ರದೇಶದ, ಒಂದು ಹಳ್ಳಿಯ, ಗ್ರಾಮ, ನಗರ, ಪಟ್ಟಣಗಳ ಭಾಷೆ, ಸಮಾಜ, ಇತಿಹಾಸ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಅರ್ಥಪೂರ್ಣವಾದ ಅನೇಕ ವಿಚಾರ ಸಂಗತಿಗಳನ್ನು ಹೊರತೆಗೆದು ತೋರಿಸಿಕೊಡುತ್ತದೆ.

ಅಡಿ ಟಿಪ್ಪಣಿಗಳು

* ದೇ.ಜ.ಗೌ, ಬೆರಕೆ ಸೊಪ್ಪು, ಪುಟ–೨
* ಡಾ. ಆರ್ಕೆ ಮಣಿಪಾಲ, ಹೆಸರಿನಲ್ಲೇನಿದೆ, ಪುಟ–೧
* Encyclopaedia Britanica, Macropaedia, vol, 12-1973, p-814
* ಡಾ.ಎಂ. ಚಿದಾನಂದಮೂರ್ತಿ, ಭಾಷಾ ವಿಜ್ಞಾನ ಮತ್ತು ಛಂದಸ್ಸು, ಸಂ–೨, 'ವಾಗಾರ್ಥ', ಭಾಷಾ ವಿಜ್ಞಾನ ಸಂಬಂಧಗಳು, ಪುಟ–೩
* ಕೆಮ್ತೂರು ರಘುಪತಿಭಟ್ಟ, ತುಳುನಾಡಿನ ಸ್ಥಳನಾಮಗಳು, ಪುಟ–೧
* The new encyclopaedia of Britanica, vol, VII- p-18
* Topography: A representation or description of localities, The Oxford English Dictionary, Vol-XI, T-U, P-153
* ಒಂದು ಪ್ರದೇಶದ ಅರ್ಥವನ್ನು ಅನೇಕ ಪ್ರಕಾರವಾಗಿ ಸೂಚಿಸುವ ಅಥವಾ ಹೆಸರಿಸುವ ವಿಜ್ಞಾನ (The Oxford English Dictionary, Vol-XI, P-154)
* Toponymy ಒಂದು ಪ್ರದೇಶದ ಸ್ಥಳನಾಮವಾಚಗಳ ಅಧ್ಯಯನವು ಅಲ್ಲಿಯ ಜನಗಳ ಬೌದ್ಧಿಕ ಗುಣಲಕ್ಷಣಗಳನ್ನು ಸಾಂಸ್ಕೃತಿಕ ಮಟ್ಟ ಹಾಗೂ ಸಾಂಸ್ಕೃತಿಕ ಒಲವು ಇತ್ಯಾದಿಗಳನ್ನು ವಿವಿಧ ಭಾಗಗಳನ್ನು ಒಳಗೊಂಡಿದ್ದು. (J.J. Egli, silva Toponymy of Canara, P-110)

❖❖❖

ಅಧ್ಯಾಯ : ಐದು

ಚಳ್ಳಕೆರೆ ತಾಲ್ಲೂಕಿನ ಸ್ಥಳನಾಮಗಳು: ಭಾಷಿಕ ವಿಶ್ಲೇಷಣೆ

ಅಧ್ಯಾಯ: ಐದು

ಚಳ್ಳಕೆರೆ ತಾಲೂಕಿನ ಸ್ಥಳನಾಮಗಳು: ಭಾಷಿಕ ವಿಶ್ಲೇಷಣೆ

ಚಳ್ಳಕೆರೆ ತಾಲ್ಲೂಕು ಉತ್ತರದಲ್ಲಿ ಮೊಳಕಾಲ್ಮೂರು ತಾಲೂಕು ಹಾಗೂ ಬಳ್ಳಾರಿ ಜಿಲ್ಲೆ, ದಕ್ಷಿಣ ಭಾಗದಲ್ಲಿ ಹಿರಿಯೂರು, ಪಶ್ಚಿಮ ದಿಕ್ಕಿನಲ್ಲಿ ಜಗಲೂರು ಹಾಗೂ ಚಿತ್ರದುರ್ಗ ತಾಲೂಕುಗಳು, ಪೂರ್ವದಲ್ಲಿ ಆಂಧ್ರ ಮತ್ತು ಪಾವಗಡ ತಾಲೂಕುಗಳಿಂದ ಆವೃತ್ತವಾಗಿರುವ ಚಿತ್ರದುರ್ಗ ಜಿಲ್ಲೆಯ ಉಪವಿಭಾಗಕ್ಕೆ ಸೇರಿದ ಒಂದು ತಾಲೂಕು ಕೇಂದ್ರ ಹಾಗೂ ತಾಲೂಕಿನ ಪ್ರಮುಖ ಸ್ಥಳ ಎಂದು ಹೇಳಬಹುದು.

ಚಳ್ಳಕೆರೆ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶವಾಗಿದ್ದು ಈ ಭಾಗದಲ್ಲಿ ವಿಶೇಷವಾದ ಬೆಟ್ಟ ಶ್ರೇಣಿಗಳಿಲ್ಲ. ಹಾಗೂ ವ್ಯವಸಾಯಕ್ಕೆ ಅಂತಹ ಫಲವತ್ತಾದ ಭೂಮಿಯಿಲ್ಲ. ಚಳ್ಳಕೆರೆ ಪ್ರದೇಶವು ಇಡೀ ಏಷ್ಯಾ ಖಂಡಕ್ಕೆ ಅತ್ಯಂತ ಕಡಿಮೆ ಮಳೆ ಬೀಳುವ ಎರಡನೇ ತಾಲೂಕಾಗಿದ್ದು, ತಾಲೂಕಿನ ಭಾಗದಲ್ಲಿ ಅಮೃತಮಹಲ್ ಕಾವಲುಗಳು ಪ್ರಸಿದ್ಧವಾಗಿವೆ. ಜೊತೆಗೆ ತೈಲ ಉದ್ಯಮ, ಹುರಿದ ಗ್ರಾಂ ಅಕ್ಕಿ, ಸ್ಥಳೀಯ ಜನರು ತಯಾರು ಮಾಡಿದ ಕಂಬಳಿ (ನೇಯ್ದುಕಂಬಳಿಗಳು) ಇನ್ನು ಮುಂತಾದವುಗಳಿಗೆ ಚಳ್ಳಕೆರೆ ತಾಲೂಕು ಪ್ರಸಿದ್ಧಿಯಾಗಿದೆ.

ಐತಿಹಾಸಿಕ, ಸಾಂಸ್ಕೃತಿಕ, ಚಾರಿತ್ರಿಕವಾಗಿ ಸಂಪದ್ಭರಿತವಾದ ಚಳ್ಳಕೆರೆ ತಾಲೂಕು ಭೌಗೋಳಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕವಾಗಿ ವಿವಿಧ ವೈಶಿಷ್ಟ್ಯಗಳಿಂದ ಕೂಡಿದೆ. ಕರ್ನಾಟಕ ಚಾರಿತ್ರಿಕ, ಕಾಲಘಟ್ಟದಲ್ಲಿ ಚಳ್ಳಕೆರೆ ತಾಲೂಕು ತನ್ನದೇ ಆದ ಮಹತ್ವದ ಪಾತ್ರವನ್ನು ಬಿಂಬಿಸಿದೆ. ದೇಶದ ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಗ್ರಾಮಗಳ ಪಾತ್ರ ಬಹುದೊಡ್ಡದು. ವಿಶೇಷ ಘಟನಾತ್ಮಕ ಹಿನ್ನೆಲೆಯಲ್ಲಿ ರಚನೆಗೊಂಡ ಪ್ರತಿ ಗ್ರಾಮವು ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಪ್ರೇರಣೆಗೊಳ್ಳುತ್ತಾ ವಿವಿಧ ರೀತಿಯಲ್ಲಿ ಗ್ರಾಮಗಳ ಪಾತ್ರ ಹೊಂದಿದೆ ಎಂದು ತಿಳಿಯಬಹುದು. ಸ್ಥಳ ಎಂದಾಗ ಅಲೆದಾಡುವುದು ಹಂಗಿನಿಂದ ಹೊರಬಂದು ಒಂದೆಡೆ ಸೇರುವ ಆಲೋಚನೆ ಎನಿಸುತ್ತದೆ.

ಪ್ರಸ್ತುತ ಅಧ್ಯಯನಕ್ಕಾಗಿ ಚಳ್ಳಕೆರೆ ತಾಲೂಕಿನ ಸ್ಥಳನಾಮಗಳನ್ನು ಅವುಗಳಲ್ಲಿಯ ಅಂಶಗಳನ್ನು ಆಧರಿಸಿ ಎರಡು ವಿಧಗಳಲ್ಲಿ ಅಧ್ಯಯನ ಮಾಡಲಾಗಿದೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

೧. ಪ್ರಕೃತಿವಾಚಿ ಸ್ಥಳನಾಮಗಳು

ಜಲವಾಚಿ ಸ್ಥಳನಾಮಗಳು

ಬೆಟ್ಟ–ಗುಡ್ಡವಾಚಿ ಸ್ಥಳನಾಮಗಳು

ಸಸ್ಯವಾಚಿ ಸ್ಥಳನಾಮಗಳು

ವಸ್ತುವಾಚಿ ಸ್ಥಳನಾಮಗಳು

ಪ್ರಾಣಿವಾಚಿ ಸ್ಥಳನಾಮಗಳು

೨. ಸಾಂಸ್ಕೃತಿಕ ಸ್ಥಳನಾಮಗಳು

ವ್ಯಕ್ತಿವಾಚಿ ಸ್ಥಳನಾಮಗಳು

ಜಾತಿವಾಚಿ ಸ್ಥಳನಾಮಗಳು

ದೈವವಾಚಿ ಸ್ಥಳನಾಮಗಳು

೧. ಪ್ರಕೃತಿವಾಚಿ ಸ್ಥಳನಾಗಳು

ಜಲವಾಚಿ ಸ್ಥಳನಾಮಗಳು

ಮಾನವನ ಸಂಸ್ಕೃತಿಯ ವಿಕಾಸದ ಹಂತದಲ್ಲಿ 'ನೀರಿಗೆ' ಪ್ರಮುಖವಾದ ಸ್ಥಾನವಿದೆ. ಜಗತ್ತಿನ ಬಹುತೇಕ ನಾಗರಿಕತೆಗಳೆಲ್ಲವೂ ನದಿಯ ದಂಡೆಯ ಮೇಲೆ ಜೀವನ ಆರಂಭಿಸಿದವೆಂದು ತಿಳಿಯುತ್ತದೆ. ಸದಾ ಸಂಚಾರಿಯಾಗಿದ್ದ ಮನುಷ್ಯರು ಒಂದೆಡೆ ತಮ್ಮ ಅಸ್ತಿತ್ವವನ್ನು ಕಂಡುಕೊಂಡರು. ಆಗ ನೀರು ಮುಖ್ಯವಾಗಿ ಬೇಕಿತ್ತು ಆ ಕಾರಣಗಳಿಂದ ಕಾಡನ್ನು ತೊರೆದು ನೀರಿನ ಸಮೀಪ ತಮ್ಮ ನೆಲೆಗಳನ್ನು ಕಟ್ಟಿಕೊಂಡರು. ಅಥವಾ ನೀರಿಗಾಗಿ ಕೆರೆ, ಕೊಳ, ಕುಂಟೆಗಳಂತಹ ಕೃತಕ ಜಲಸಂಗ್ರಹಗಳನ್ನು ನಿರ್ಮಿಸಿಕೊಂಡರು. ಇಂದಿಗೂ ಗ್ರಾಮಗಳ ನಿರ್ಮಾಣ ನೀರನ್ನು ಅವಲಂಬಿಸಿ ರಚನೆಯಾಗುತ್ತದೆ. ಹೀಗೆ ಜಲಮೂಲ ಸಂಸ್ಕೃತಿಯಿಂದ ಆರಂಭವಾದ ಸಂಸ್ಕೃತಿಯಲ್ಲಿ ಆ ಜಲವನ್ನವಲಂಬಿಸಿರೋ ಭೂಸ್ಥಿತಿಯನ್ನು ಹೊಂದಿರುವ ಸ್ಥಳನಾಮಗಳು ಹೇರಳವಾಗಿ ದೊರೆಯುತ್ತವೆ. ಚಳ್ಳಕೆರೆ ತಾಲೂಕಿನ ಸ್ಥಳನಾಮಗಳಲ್ಲಿ ಜಲವಾಚಿಗೆ ಸಂಬಂಧಿಸಿದ ಅನೇಕ ಅಂಶಗಳನ್ನೊಳಗೊಂಡಿವೆ. ಅವುಗಳಲ್ಲಿ ಕುಂಟೆ, ಕೆರೆ, ಬಂಡೆ, ಹಳ್ಳ, ಸಮುದ್ರ ಇತ್ಯಾದಿಗಳಿವೆ. ಅವುಗಳನ್ನು ಸೂಚಿಸುವ ಸ್ಥಳನಾಮಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಸಮುದ್ರ ವಾರ್ಗಿಕ ಹೊಂದಿರುವ	ಮುಸ್ಸಮುದ್ರ, ಬೊಮ್ಮಸಮುದ್ರ, ಮಲ್ಲಸಮುದ್ರ ಗೌರಸಮುದ್ರ
ಕುಂಟೆ ವಾರ್ಗಿಕ ಹೊಂದಿರುವ	ವಿಡುಪನಕುಂಟೆ, ಜಡೆಕುಂಟೆ, ಕ್ಯಾದಿಗುಂಟೆ, ನೇರ್ಲಗುಂಟೆ, ಮರಿಕುಂಟೆ, ಕೊರ್ಲಕುಂಟೆ, ಕಮ್ಮತ್ ಮರಿಕುಂಟೆ, ಜುಂಜರಗುಂಟೆ, ಬೋಮ್ಮನಕುಂಟೆ ಹುಲಿಕುಂಟೆ
ಕೆರೆ ವಾರ್ಗಿಕ ಹೊಂದಿರುವ	ಕರಿಕೆರೆ, ಸಾಣಿಕೆರೆ, ಎರಡುಕೆರೆ(ರೆಂಡುಚೇರ್ಲು), ಕೆರೆಯಾಗಳ ಹಳ್ಳಿ
ಸಾಗರ ವಾರ್ಗಿಕ ಹೊಂದಿರುವ	ಭರಮಸಾಗರ, ರಾಮಸಾಗರ, ಮಮ್ಮದಿ ಸಾಗರ
ಇತರೆ ವಾರ್ಗಿಕ ಹೊಂದಿರುವ	ಕೋಡಿಹಳ್ಳಿ, ಕಾಲುವೆಹಳ್ಳಿ,

ಜಲವಾಚಿ ಸ್ಥಳನಾಮಗಳ ವಿಶ್ಲೇಷಣೆ

೧. ಕೆರೆಯಾಗಳ ಹಳ್ಳಿ

ಈ ಗ್ರಾಮದ ಜನರು ಕೆರೆಯ ಮುಂಭಾಗದಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಂಡಿರುವುದರಿಂದ ಕೆರೆಯಾಗಳಹಳ್ಳಿ ಎಂದು ಹೆಸರು ಬಂದಿದೆ.

ಕೆರೆಯ + ಆಗಳ + ಹಳ್ಳಿ= ಕೆರೆಯಾಗಳ ಹಳ್ಳಿ

೨. ಮುಸ್ಸಮುದ್ರ

ಸ್ಥಳಿಯರ ಪ್ರಕಾರ ಈ ಕೆರೆಯಲ್ಲಿ ಒಂದು ಮೀನು ಗಾಳಕ್ಕೆ ಸಿಕ್ಕಾಗ ಆಂಜನೇಯ ಅದನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು ಸಮುದ್ರದಾಚೆ ತೆಗೆದುಕೊಂಡು ಹೋಗಿ ಗಾಳದಿಂದ ಪಾರು ಮಾಡಿದನಂತೆ. ಆಗಿನಿಂದ ಈ ಊರಿಗೆ ಮುಸ್ಸಮುದ್ರ ಎಂದು ಕರೆಯುತ್ತಾರೆ ಎನ್ನುತ್ತಾರೆ. ಈ ಊರಿನಲ್ಲಿ ಪ್ರತಿವರ್ಷ ಹನುಮಂತರಾಯನ ಕಾರ್ತಿಕ ಉತ್ಸವ ನಡೆಯುತ್ತದೆ. ಅಲ್ಲಿ ಕಾಡುಗೊಲ್ಲರು ತಮ್ಮ ಊರಿನ ಉತ್ಸವದಲ್ಲಿ ಮ್ಯಾಸಬೇಡರನ್ನು ಪ್ರಮುಖ ಸ್ಥಾನ ನೀಡಿ ಅವರನ್ನು ತಮ್ಮ ಸಹೋದರಾಗಿ ಮಾಡಿಕೊಳ್ಳುವ ಆಚರಣೆಯಿದೆ. ಈ ಕಾರಣದಿಂದಲೂ ಈ ಊರಿಗೆ ಈ ಹೆಸರು ಬಂದಿರಬಹು.

ಮ್ಯಾಸ + ಸಮುದ್ರ = ಮ್ಯಾಸ್ಸಮುದ್ರ, ಮುಸ್ಸಮುದ್ರ

೩. ಬೊಮ್ಮಸಮುದ್ರ

ಇದು ಜಲವಾಚಿಯಾಗಿದ್ದು ಈ ಊರಿನ ಕೆರೆಗೆ ಭರಮಸಾಗರ ನೀರು ಬರೊದರಿಂದ ಈ ಊರಿಗೆ ಬೊಮ್ಮಸಮುದ್ರ ಎಂದು ಕರೆದಿರಬಹುದು.

ಬೊಮ್ಮ + ಸಮುದ್ರ = ಬೊಮ್ಮಸಮುದ್ರ

೪. ವಿಡುಪನಕುಂಟೆ

ಕನ್ನಡದಲ್ಲಿ 'ಬಿಡು' ಅಥವಾ ವಿರಾಮ ಎಂದರ್ಥ ತೋರುತ್ತದೆ. ಈ ಊರು ಒಂದು ವಿರಾಮಕ್ಕೆ ನಿರ್ದಿಷ್ಟ ಭೂಪ್ರದೇಶ ವಾಗಿರಬಹುದು ಹಾಗಾಗಿ ವಿಡುಪನಕುಂಟೆ ಎಂದು ಕರೆಯುತ್ತಾರೆ.

ವಿಡುಪನ + ಕುಂಟೆ = ವಿಡುಪನಕುಂಟೆ.

೫. ಭರಮಸಾಗರ

ಈ ಗ್ರಾಮವು ಚಿತ್ರದುರ್ಗ ಜಿಲ್ಲೆಯ ಇದೇ ಹೆಸರಿನ ಎರಡು ಮೂರು ಗ್ರಾಮಗಳಿವೆ. ಭರಮಣ್ಣನಾಯಕನ ಹೆಸರಿನಲ್ಲಿ ಕಟ್ಟಲಾದಂತ ಒಂದು ಭರಮಸಾಗರವಿದೆ. ಆದುದರಿಂದ ಭರಮಸಾಗರ 'ಸಾಗರ' ಸಮುದ್ರ ಎಂದು ಬಲಗಡೆಗೆ ರಾಣಿಕೆರೆ ಇರುವುದರಿಂದ ಭರಮಸಾಗರ ಎಂತಲೂ ಸಹ ಕರೆಯುತ್ತಾರೆ.

ಭರಮ + ಸಾಗರ = ಭರಮಸಾಗರ.

೬. ಕೋಡಿಹಳ್ಳಿ

ಕೆರೆಯು ತುಂಬಿದಾಗ ನೀರು ಹೊರ ಹೋಗುವ ಸ್ಥಳವನ್ನು 'ಕೋಡಿ' ಎಂದು ಕರೆಯಲಾಗುತ್ತದೆ. ಈ ಗ್ರಾಮವು ಕೋಡಿಯ ಹತ್ತಿರದಲ್ಲಿರುವುದರಿಂದ ಇದಕ್ಕೆ ಕೋಡಿಹಳ್ಳಿ ಎಂದು ಹೆಸರು ಬಂದಿದೆ. ಕೋಡಿ + ಹಳ್ಳಿ = ಕೋಡಿಹಳ್ಳಿ > ಇಲ್ಲಿ ಕೋಡಿ ನಿರ್ದಿಷ್ಟವಾಗಿ ಬಳಕೆಯಾಗಿದೆ.

೭. ಕ್ಯಾದಿಗುಂಟೆ

ಕ್ಯಾದಿಗೆ ಎಂದರೆ ಸುರಹೊನ್ನೆಯಂತಹ ಕೇದಿಗೆಯ ಹೂ ಬಿಡುವ ತಾಣ ಎಂದರ್ಥ. ಇಲ್ಲೊಂದು ಕೆರೆ ಇದೆ. ಕೆರೆಯ ಅಥವಾ ನೀರಿನ ದಡದ ಬಳಿ ಹೆಚ್ಚು ಕೇದಿಗೆ ಹೂ ಬೆಳೆಯುತ್ತಿದ್ದರಿಂದ ಕೇದಿಗೆಗುಂಟೆ ಎಂದು ಹೆಸರು ಬಂದಿದೆ. ಶಾಸನಗಳಲ್ಲಿ ಕ್ಯಾದಿಗುಂಟೆ ಎಂದು ಗುರುತಿಸಿದ್ದಾರೆ.

ಕೇದಿಗೆ + ಯ + ಗುಂಟೆ = ಕೇದಿಗೆಗುಂಟೆ > ಕ್ಯಾದಿಗುಂಟೆ

೮. ಕರಿಕೆರೆ

ಈ ಗ್ರಾಮದ ಪಕ್ಕದಲ್ಲಿ ರಾಣಿಕೆರೆ ಇದೆ. ಈ ಕೆರೆ ಕೂಡಿ ಬಿದ್ದರೆ ಈ ಗ್ರಾಮದ ಕೆರೆಗೆ ಹೆಚ್ಚಿನ ನೀರು ದೊರೆಯುತ್ತದೆ. ರಾಣಿಕೆರೆಯಿಂದ ಕೋಡಿಬಿದ್ದ ನೀರನ್ನು ಸದುಪಯೋಗಕ್ಕಾಗಿ ಇನ್ನೊಂದು ಕೆರೆ ಕಟ್ಟಿಸಿದ್ದಾರೆ. ಈ ಊರಿನ ಹೆಸರು ಕರಿಯಪ್ಪ ಅಥವಾ ಕರಿಯಣ್ಣ ಈ ಹೆಸರಿನ ವ್ಯಕ್ತಿವಾಚಕವಾಗಿ ಬಂದಿರಬೆಕು. ಮುಂದೆ ಊರ ಪಕ್ಕದಲ್ಲಿ ಕೆರೆ ಇರುವುದರಿಂದ ಕರಿಕೆರೆಯಾಗಿರಬೆಕು.

ಕರಿಯಣ್ಣ/ಕರಿಯಪ್ಪ + ಕೆರೆ = ಕರಿಯಣ್ಣನ/ಕರಿಯಪ್ಪನ ಕೆರೆ > ಕರಿಕೆರೆ

೯. ಗೌರಸಮುದ್ರ

ಈ ಊರಿಗೆ ಮೊದಲಿಗೆ ಗೌರಿಚಂದ್ರ ಎಂದು ಹೆಸರು ಇತ್ತು. ನಂತರ ಗೌರಿಯ ಮಹಿಮೆಯಿಂದ ಹೊಲಗದ್ದೆಗಳಲ್ಲಿ ನೀರು ಹರಿಯುತಿತ್ತಂತೆ ಹೀಗಾಗಿ 'ಗೌರಿಚಂದ್ರ' ಎಂದು ಕರೆಯಲಾಗಿದೆ ಎಂದು ಸ್ಥಳೀಯರ ನಂಬಿಕೆ. ಈ ಗ್ರಾಮದ ಹೊಲಗದ್ದೆಗಳಲ್ಲಿ ಸೂರ್ಯ-ಚಂದ್ರನ ಗುರುತುಗಳು ಇಂದಿಗೂ ದೊರೆಯುತ್ತವೆ. ಈ ಗ್ರಾಮದಲ್ಲಿ ಗೌರಿದೇವಾಲಯವಿದೆ. ಗೌರಿ ಎನ್ನುವ ಹೆಣ್ಣುಮಗಳು ಕೆರೆ ಕಟ್ಟಿಸಿರಬೇಕು ಈ ಕೆರೆಗೆ ಗೌರಿಕೆರೆ ಎಂದು ಕರೆಯುವ ಕಾರಣ ಆ ಕೆರೆಯ ಹತ್ತಿರವಿರುವ ಊರಿಗೆ ಗೌರ ಸಮುದ್ರ ಎಂಬ ಹೆಸರು ಬಂದಿದೆ.

ಗೌರಿ + ಸಮುದ್ರ = ಗೌರಿಸಮುದ್ರ> ಗೌರಸಮುದ್ರ ಇಲ್ಲಿ ಸಮುದ್ರ ಎನ್ನುವುದು ಜಲವಾಚಕವಾಗಿ ಕೆರೆಯ ಸ್ಥಾನದಲ್ಲಿ ಬಂದಿದೆ.

೧೦. ಎರಡು ಕೆರೆ

ಈ ಊರಿನಲ್ಲಿ ಎರಡು ಕೆರೆ ಇರುವುದಕ್ಕೆ ಎರಡುಕೆರೆ ಎಂದು ಕರೆಯುತ್ತಾರೆ. ಮೊದಲಿಗೆ ಈ ಗ್ರಾಮಕ್ಕೆ ರೆಂಡುಚೇರ್ಲು ಎಂದು ಇತ್ತು. ನಂತರ ಕನ್ನಡೀಕರಿಸಿ ಎರಡುಕೆರೆ ಎಂದು ಕರೆಯುತ್ತಾರೆ.

ಎರಡು + ಕೆರೆ = ಎರಡುಕೆರೆ.

೧೧. ನೇರ್ಲಗುಂಟೆ

ನೇರ್ಲ ಎಂದರೆ ನೇರಲ ಮರಗಳು ಎಂದರ್ಥ. ಈ ಗ್ರಾಮದಲ್ಲಿ ಅತಿ ದೊಡ್ಡದಾದ ನೇರಲ ಮರ ಇರುವುದರಿಂದ ನೇರ್ಲಗುಂಟೆ ಅಥವಾ ನೇರಲಗುಂಟೆ ಎಂದು ಕರೆಯುತ್ತಾರೆ.

ನೇರಲಮರಗಳು – ಗುಂಟೆ = ನೇರ್ಲಗುಂಟೆ

ಬೆಟ್ಟ-ಗುಡ್ಡವಾಚಿ ಸ್ಥಳನಾಮಗಳು

ಬೆಟ್ಟ-ಗುಡ್ಡಗಳ ಆಶ್ರಯದಲ್ಲಿ ಕಟ್ಟಿಕೊಂಡ ಊರುಗಳನ್ನು ಆ ಸ್ಥಿತಿಯನ್ನು ಸೂಚಿಸುವ ವಾರ್ಗಿಕವಾಗಿ ಬೆಟ್ಟ-ಗುಡ್ಡವನ್ನು ಬಳಸಿಕೊಂಡಿರುವ ಸ್ಥಳನಾಮಗಳನ್ನು ಕಾಣಬಹುದು. ಉದಾ.

ಘಟಪರ್ತಿ

ಪಡಲಬಂಡೆ

ಮಲೇಬೋರನಹಳ್ಳಿ

ಮಲ್ಲಸಮುದ್ರ

ಬೆಟ್ಟ- ಗುಡ್ಡವಾಚಿ ಸ್ಥಳನಾಮಗಳ ವಿಶ್ಲೇಷಣೆ

ಪಗಡಲಬಂಡೆ

ಪಗಡಲಬಂಡೆ ಅಗಲವಾದ ಬಂಡೆ ಎಂದರ್ಥ. ಸುಮಾರು ೫೦ ಅಡಿ ಬಂಡೆ ಇದ್ದುದರಿಂದ ಪಗಡಲಬಂಡೆ ಎಂದು ಹೆಸರಾಗಿದೆ. ಇಲ್ಲಿ ದೊಡ್ಡ ಬೋರಪ್ಪನ ಗುಡಿ ಇದೆ. ದಾರಿಯ ಗುಡ್ಡದಲ್ಲಿ ಒಂದು ಬಾವಿಯಿದ್ದು ಅದರಲ್ಲಿ ಯಾವಾಗಲೂ ನೀರು ಬತ್ತುವುದಿಲ್ಲವಂತೆ. ಇದೇ ಊರಿನಂತೆ ಹೆಸರು ಬಂದಿರುವ ಜಾಜರಿನ ಬಳಿ ಸೋಮಪ್ಪನ ಬಂಡೆ ಎನ್ನುವ ಕರಿಕಲ್ಲಿನ ಗುಡ್ಡವಿದೆ.

ಪಗಡ + ಬಂಡೆ = ಪಗಡಲಬಂಡೆ

ಸಸ್ಯವಾಚಿ ಸ್ಥಳನಾಮಗಳು

ಕೇದಿಗೆಗುಂಟೆ

ಗಜುಗಾನಹಳ್ಳಿ

ನೆರ್ಲಗುಂಟೆ

ವಸ್ತುವಾಚಿ ಸ್ಥಳನಾಮಗಳು

ಪಗಡಲಬಂಡೆ

ಕೊರಡರಹಳ್ಳಿ

ಚಟ್ಟೆಕಂಬ

ಬಂಡೆತಿಮಲಾಪುರ

ದೊಣೆಹಳ್ಳಿ

ಪ್ರಾಣಿವಾಚಿ ಸ್ಥಳನಾಮಗಳು

ಹುಲಿಕುಂಟೆ

ಎತ್ತಿನಹಟ್ಟಿ

ಗೋವಿನಹಾಳು

ಗೊರ್ಲಹಟ್ಟಿ

ಚಳ್ಳಕೆರೆ ತಾಲ್ಲೂಕಿನ ಸ್ಥಳನಾಮಗಳಲ್ಲಿ ಪ್ರಾಣಿವಾಚಿ ಸ್ಥಳನಾಮಗಳಲ್ಲಿ ಹೆಚ್ಚಿನವು ಸಾಕುಪ್ರಾಣಿಗಳ ಹೆಸರಿನಲ್ಲಿ ಕಟ್ಟಿಕೊಂಡ ಊರುಗಳೇ ಆಗಿವೆ.

೨. ಸಾಂಸ್ಕೃತಿಕ ಸ್ಥಳನಾಮಗಳು

ಸ್ಥಳನಾಮಗಳು ಸಂಸ್ಕೃತಿಯ ಅಧ್ಯಯನದಲ್ಲಿ ಪ್ರಮುಖ ಆಕರಗಳಾಗಿವೆ. ಒಂದು ಹೆಸರಿನಲ್ಲಿ ಮತ್ತೊಂದು ಹೆಸರಿನ ಜೀವನದ ಭವಿಷ್ಯ ಇರುತ್ತದೆ. ಅಥವಾ ಜೀವನಕ್ರಮ ಇರುತ್ತದೆ. ನೇರವಾಗಿ ಜೀವನ ಕ್ರಮ ಹೇಳುತ್ತಿಲ್ಲವಾದ ಪರೋಕ್ಷ ನೆಲೆಯಲ್ಲಿ ತೆರೆದು ತೋರಿಸುವ ಮೂಲಾಧಾರವಾಗಿ ಸ್ಥಳನಾಮಗಳು ಮಹತ್ವವೆನಿಸಿವೆ. ಸಾಮಾಜಿಕ ಚಹರೆ ಮತ್ತು ಸಾಂಸ್ಕೃತಿಕ ಚಹರೆಗಳ ಅಧ್ಯಯನ ಮಾಡುವಲ್ಲಿ ಸ್ಥಳನಾಮಗಳು ಪ್ರಾಮಾಣಿಕ ಸಾಂಸ್ಕೃತಿಕ ಪ್ರಜ್ಞೆಯುಳ್ಳ ವ್ಯಕ್ತಿಗಳು ಮತ್ತು ಸಮಾಜದ ಸ್ಥಳನಾಮಗಳನ್ನು ಪ್ರಮುಖ ಆಕರಗಳೆಂದು ಭಾವಿಸಿದ್ದು ವಾಸ್ತವತೆಯ ತಳಹದಿಯ ಸಂಸ್ಕೃತಿಯ ಅಧ್ಯಯನಕ್ಕೆ ತೊಡಗಲು ಸಾಧ್ಯವಿರುತ್ತದೆ.

ವ್ಯಕ್ತಿವಾಚಿ ಸ್ಥಳನಾಮಗಳ

ವ್ಯಕ್ತಿವಾಚಿ ಸ್ಥಳನಾಮಗಳು ಸಾಮಾಜಿಕ ಅಧ್ಯಯನದ ಮುಖ್ಯ ಆಕರಗಳಲ್ಲಿ ಒಂದು ಎಂದು ಪರಿಗಣಿಸಬಹುದು. ಈ ಆಕರಗಳನ್ನು ಇಟ್ಟುಕೊಂಡು ವಿಶ್ಲೇಷಣೆಗೆ ಒಳಪಡಿಸಿದಲ್ಲಿ ಒಂದು ಸಂಸ್ಕೃತಿಯ ಸಂಗತಿಗಳನ್ನು ಬಿಡಿಬಿಡಿಯಾಗಿ ತಿಳಿಯಲು ಸಾಧ್ಯವಾಗುತ್ತದೆ. ಸಂಸ್ಕೃತಿಗಳ ಸೂಕ್ತ ಅಭ್ಯಾಸಕ್ಕೆ ಬಳಸಲಾಗಿರುವ ಅನೇಕ ವಿಧಾನಗಳಲ್ಲಿ ವ್ಯಕ್ತಿ ಸ್ಥಳನಾಮಗಳ ಅಭ್ಯಾಸವೂ ಒಂದು. ಕಾಲ ದೇಶ ಪರಿಸರಕ್ಕೆ ತಕ್ಕಂತೆ ಮನುಷ್ಯನ ಆಲೋಚನಾ ವಿಧಾನ ಜೀವನ ಶೈಲಿಯು ಅನೇಕ ಸ್ಥಿತ್ಯಂತರ ಪ್ರಕೃತಿಗೆ ಒಳಪಡುತ್ತಲೇ ಇರುತ್ತದೆ. ಈ ಎಲ್ಲ ಸ್ಥಿತ್ಯಂತರಗಳು ಜೀವನ ವಿಧಾನದ ಜೊತೆ ಜೊತೆಗೆ ಆಯಾ ಭೌಗೋಳಿಕ ಪರಿಸರದ ಮೇಲೆ ವಿಶೇಷವಾಗಿ ಪ್ರಭಾವ ಬೀರುತ್ತದೆನ್ನಬಹುದು. ಮುಂದೆ ಸಂಸ್ಕೃತಿಯೂ ಸಾಗಿಬಂದು, ಇದರೊಂದಿಗೆ ಅಂದಂದಿನ ಸಮಾಜದಲ್ಲಿ ಯಾವುದೇ ಕಾರಕ್ಕೆ ವಿಶೇಷವಾದ ಘಟನೆಯಿಂದ ಹೆಸರಾದ ವ್ಯಕ್ತಿಯ ಸ್ಥಳನಾಮಗಳು ಒಂದೊಂದು ಗ್ರಾಮಕ್ಕೆ ಕರೆದರು. ಮುಂದೆ ಸ್ತ್ರೀ ಮತ್ತು ವ್ಯಕ್ತಿಯಾಗಿ ಐತಿಹಾಸಿಕ, ಸಾಮಾಜಿಕ, ರಾಜಕೀಯ ಇತ್ಯಾದಿ ಕಾರಣಗಳಿಂದ ವ್ಯಕ್ತಿವಾಚಿ ಸ್ಥಳನಾಮಗಳಿಗೆ ನಾವು ನಿರ್ದೇಶನ ನಡೆಯಿತು. ಆಧುನಿಕವಾಗಿ ವೈವಿಧ್ಯತೆಯ ನೆಲೆಯಲ್ಲಿ ವ್ಯಕ್ತಿವಾಚಿ ಮತ್ತು ಸ್ತ್ರೀವಾಚಿ ಸ್ಥಳನಾಮಗಳ ಪಟ್ಟಿ ಈ ಕೆಳಗಿನಂತೆ ಚಳ್ಳಕೆರೆ ತಾಲೂಕಿನ ವ್ಯಕ್ತಿವಾಚಿ ಸ್ಥಳನಾಮಗಳನ್ನು ವಿವರಿಸಲಾಗಿದೆ.

ಪುರುಷವಾಚಕ ಸ್ಥಳನಾಮಗಳು

ತಿಮ್ಮನಾಯಕನ ಕೋಟೆ
ರಾಮದುರ್ಗ
ಓಬಳಾಪುರ
ಓಬಯ್ಯನಹಟ್ಟಿ
ತಿಮ್ಮಣ್ಣನಹಳ್ಳಿ
ಮಹದೇಪುರ
ಸಿದ್ದಾಪುರ
ಸೋಮಗುದ್ದು
ಅಜ್ಜನಹಳ್ಳಿ
ಮೀರಾಸಾಬಿಹಳ್ಳಿ

ಹೊಟ್ಟೆಪ್ಪನಹಳ್ಳಿ	ಕ್ಯಾತಗೊಂಡನಹಳ್ಳಿ
ಹರವಿಗೊಂಡನಹಳ್ಳಿ	ನಾಗಗೊಂಡನಹಳ್ಳಿ
ಹಳಿಗೊಂಡನಹಳ್ಳಿ	ಲಕುಮಗೊಂಡನಹಳ್ಳಿ
ಕಸವಿಗೊಂಡನಹಳ್ಳಿ	ಕಾಟವ್ವನಹಳ್ಳಿ
ಗಿರಿಯಮ್ಮನಹಳ್ಳಿ	ಗೌರಿಪುರ
ಚೆನ್ನಮ್ಮನಾಗತಿಹಳ್ಳಿ	ರಂಗವನಹಳ್ಳಿ
ಚಿಕ್ಕಮ್ಮನಹಳ್ಳಿ	ಚೆಲುಮೇಯನಹಳ್ಳಿ
ಮಲ್ಲವ್ವನಹಳ್ಳಿ	ವೀರದಿಮ್ಮವ್ವನಹಳ್ಳಿ

ವ್ಯಕ್ತಿವಾಚಿ ಸ್ಥಳನಾಮಗಳ ವಿಶ್ಲೇಷಣೆ

೧. ಕ್ಯಾತಗೊಂಡನಹಳ್ಳಿ

ಬಹಳ ಹಿಂದಿನ ಕಾಲದಲ್ಲಿ ಈ ಪ್ರದೇಶದಲ್ಲಿ ಕ್ಯಾತಗೊಂಡ, ಅರಿವಿಗೊಂಡ, ನಾಗಗೊಂಡ, ಕಸವಿಗೊಂಡ, ಲಕುಮಿಗೊಂಡ, ಆಲಿಗೊಂಡ, ತಪ್ಪಗೊಂಡ ಎಂಬ ಏಳು ಜನ ಅಣ್ಣ-ತಮ್ಮಂದಿರು ಕರಿಕಲ್ಲು ಎಂಬ ಬೆಟ್ಟದ ತಪ್ಪಲು ಪ್ರದೇಶದಲ್ಲಿ ವಾಸಿಸುತ್ತಿದ್ದು ತದನಂತರ ಕುಟುಂಬದ ಸಮೂಹಗಳು ಹೆಚ್ಚಾದ್ದರಿಂದ ಒಂದೊಂದು ಪ್ರದೇಶದಲ್ಲಿ ಒಬ್ಬೊಬ್ಬರು ನೆಲೆಸಿದ್ದರಿಂದ ಆ ಸ್ಥಳಕ್ಕೆ ಆ ಹೆಸರುಗಳು ಬಂದಿವೆ.

ಕ್ಯಾತ + ಗೊಂಡನ + ಹಳ್ಳಿ = ಕ್ಯಾತಗೊಂಡನಹಳ್ಳಿ.

೨. ಓಬಣ್ಣನಹಳ್ಳಿ

ಓಬಣ್ಣನ ಹೆಸರಿನಲ್ಲಿ ಓಬಣ್ಣನಹಳ್ಳಿ ಆಗಿದ್ದು, ಈ ಗ್ರಾಮಕ್ಕೆ ಹೆಸರು ಬರಲು ಕಾರಣವೆಂದರೆ ಯರಮಂಚನಾಯಕ, ಗಾದ್ರಿಪಾಲನಾಯಕ, ಎರಗೊಡ್ಲಯ್ಯ ಮೂವರು ರಾಜರುಗಳು ಆಳ್ವಿಕೆ ಮಾಡುವ ಸಂದರ್ಭದಲ್ಲಿ ಇದರಲ್ಲಿ ಯರಮಂಚನಾಯಕ ಬಹುಮುಖ್ಯ ರಾಜನಾಗಿದ್ದನಂತೆ. ಯರಮಂಚನಾಯಕನ ಮಗನಾದ ಓಬಣ್ಣನು ಹಿರಿಯ ಮಗನಾದ್ದರಿಂದ ಗಾದ್ರಿಪಾಲನಾಯಕನ ಪೂಜೆ ಮಾಡಬೇಕಿತ್ತು ಆದರೆ ಆ ಸಂದರ್ಭದಲ್ಲಿ ಓಬಣ್ಣನು ಬೇಟೆಯಾಡಲು ಹೋಗಿದ್ದರಿಂದ ಪೂಜೆ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಯರಮಂಚನಾಯಕನಿಗೆ ಕೋಪಬಂದು ಆಗ ತಾನೆ ಆಗಮಿಸಿದ ಓಬಣ್ಣನನ್ನು ಕೊಡಲಿಯಿಂದ ಕೊಂದನು. ಆಗಾಗಿ ಓಬಣ್ಣಹಳ್ಳಿ ಎಂದು ಹೆಸರು ಬಂದಿದೆ.

ಓಬಣ್ಣನ + ಹಳ್ಳಿ = ಓಬಣ್ಣನಹಳ್ಳಿ

೩. ತಿಮ್ಮಣ್ಣನಹಳ್ಳಿ

ತಿಮ್ಮ>ತಿಮ್ಮಪ್ಪ>ತಿಮ್ಮಣ್ಣ

ಈ ಗ್ರಾಮದಲ್ಲಿ ಬಹಳ ವರ್ಷಗಳ ಹಿಂದೆ ತಿಮ್ಮಪ್ಪ ದೇವರು ಭೂಗರ್ಭದಲ್ಲಿ ಶಿಲೆಯ ರೂಪವಾಗಿ ಉದ್ಭವಾದಾಗ ಈ ದೇವರನ್ನು ಪಕ್ಕದ ಗ್ರಾಮದವರು ಅಪಹರಿಸಲು ಹೊಂಚು ಹಾಕಿದರಂತೆ. ಅದನ್ನು ಬೇರೆ ಕಡೆ ಬದಲಾವಣೆ ಮಾಡಲು ಪ್ರಯತ್ನಪಟ್ಟಾಗ ಕಲ್ಲಿನ ವಿಗ್ರಹ ಉದ್ದವಾಗಿ ಬೆಳೆದು ವರ್ಗಾಯಿಸಲು ಅಸಾಧ್ಯವಾಯಿತಂತೆ. ತಿಮ್ಮಪ್ಪ ಉದ್ಭವವಾದ ಸ್ಥಳವಾದ್ದರಿಂದ ತಿಮ್ಮಪ್ಪನಹಳ್ಳಿ ಎಂದು ಹೆಸರು ಇದ್ದು ಮುಂದೆ ತಿಮ್ಮಣ್ಣನಹಳ್ಳಿ ಎಂದು ಹೆಸರು ಬಂದಿದೆ.

ತಿಮ್ಮಪ್ಪ + ಹಳ್ಳಿ = ತಿಮ್ಮಪ್ಪನಹಳ್ಳಿ

೪. ಹೊಟ್ಟೆಪನಹಳ್ಳಿ

ಹೊಟ್ಟೆಪ – ವ್ಯಕ್ತಿವಾಚಿ. ಹೊಟ್ಟೆಪನಾಯ್ಕನ ಹೆಸರಿನಲ್ಲಿ ಕಟ್ಟಲಾದ ಈ ಗ್ರಾಮವನ್ನು ಹೊಟ್ಟೆಪನ ಹಳ್ಳಿ ಎಂದು ಕ\ರೆಯುತ್ತಾರೆ. ಇಲ್ಲಿ ಉಜ್ಜನಿ ಸಿದ್ದೇಶ್ವರ ಸ್ವಾಮಿ ದೇವಾಲಯವಿದೆ.

ಹೊಟ್ಟೆಪ್ಪ + ನ + ಹಳ್ಳಿ = ಹೊಟ್ಟೆಪನಹಳ್ಳಿ

೫. ಚೆನ್ನಮ್ಮನಾಗತಿಹಳ್ಳಿ

ಚಿತ್ರದುರ್ಗದ ನಾಗತಿ ಸಂತತಿಯಿಂದ ಬಂದ ಚೆನ್ನಮ್ಮ ಇಲ್ಲಿಂದ ನಿಡುಗಲ್ಲಿಗೆ ಹೋಗುವ ಸಂದರ್ಭದಲ್ಲಿ ಒಂದು ದಿನ ತಂಗಿದ್ದು ನಿಡುಗಲ್ಲಿಗೆ ಹೋಗಿರುವುದರ ನೆನಪಿಗಾಗಿ ಚೆನ್ನಮ್ಮ ನಾಗತಿಹಳ್ಳಿ ಎಂದು ಹೆಸರು ಬಂದಿದೆ. ಇಂದು ಸಹ ಇಲ್ಲಿ ಕೋಟೆಯನ್ನು ನೋಡಬಹುದು.

ಚೆನ್ನಮ್ಮ + ನಾಗತಿ + ಹಳ್ಳಿ = ಚೆನ್ನಮ್ಮನಾಗತಿಹಳ್ಳಿ

೬. ಗಿರಿಯಮ್ಮನಹಳ್ಳಿ

ಬಹಳ ವರ್ಷಗಳ ಹಿಂದೆ ಗಿರಿಯಮ್ಮ ಎಂಬಾಕೆ ಗುಡಿಸಲನ್ನು ಹಾಕಿಕೊಂಡು ಜೀವನ ಮಾಡುತ್ತಿರುವಾಗ ಗಿರಿಯಮ್ಮನ ಹಳ್ಳಿ ಎಂದು ಹೆಸರು ಬಂದಿದೆ.

ಗಿರಿಯಮ್ಮನ + ಹಳ್ಳಿ = ಗಿರಿಯಮ್ಮನಹಳ್ಳಿ.

೭. ಸೋಮಗುದ್ದು

ಚಳ್ಳಕೆರೆ ಟೌನಿನಿಂದ ೨-೩ ಮೈಲಿ ದೂರದಲ್ಲಿರುವ ಗ್ರಾಮ. ಸೋಮ ಎಂಬುವನು ಗುದ್ದಲಿ ಹಿಡಿದು ಮೊದಲು ಊರು ಕಟ್ಟಿದ್ದರಿಂದ ಈ ಹೆಸರು ಬಂದಿದೆ. ಇನ್ನೊಂದು ಕತೆಯಂತೆ ಸೋಮೇಶ್ವರನು ಈ ಗ್ರಾಮಕ್ಕೆ ಬಂದಾಗ ಹಂದಿಯೊಂದು ಗುದ್ದಲು ಪ್ರಯತ್ನಿಸಿದಾಗ ಅವನು ಹೆದರಿ ಗುಹೆಯಲ್ಲಿ ಅಡಗಿದ್ದರಿಂದ ಸೋಮಗುದ್ದು ಎಂದು ಹೆಸರು ಬಂದಿದೆ. ಸೋಮೇಶ್ವರನ ಗುಡಿ ಇದೆ.

ಸೋಮ + ಗುದ್ದು = ಸೋಮಗುದ್ದು.

೮. ಹಾಲಿಗೊಂಡನಹಳ್ಳಿ

ವಿಜಯನಗರ ಸಾಮ್ರಾಜದ ಪತನ ನಂತರ ಸಂಪೂರ್ಣವಾಗಿ ನಾಶವಾಗಿರುವ ವಿಜಯನಗರದಲ್ಲಿ ಗೊಂಡ ಮನೆತನ ಇದ್ದ ಬದ್ದ ಸಂಪತನ್ನು ದೋಚಿ ಕೊಂಡಿ ನೈರುತ್ಯದ ಕಡೆಗೆ ಆಗಮಿಸಿದರು. ಗೋಂಡ ಮನೆತನದ ಆರು ಜನ ಅಣ್ಣ ತಮ್ಮಂದಿರು ಒಂದೊಂದು ಹಳ್ಳಿಯಲ್ಲಿ ವಾಸಮಾಡತೊಡಗಿದರು ಹಾಲಪ್ಪ ಎಂಬುವವನು ವಾಸಮಾಡಿರುವ ಊರನ್ನು ಹಾಲಿಕೊಂಡನಹಳ್ಳಿ ಎಂದು ಕರೆಯಲಾಗಿದೆ. ಹೀಗೆ ಕ್ರಮವಾಗಿ ಕ್ಯಾತಣ್ಣ ನೆಲಸಿರುವುದು ಕ್ಯಾತಗೊಂಡನ ಹಳ್ಳಿಯಾಗಿ, ನಾಗಪ್ಪ ನೆಲಸಿರುವುದನ್ನು ನಾಗಗೊಂಡನ ಹಳ್ಳಿಯಾಗಿ, ಅರಪ್ಪ ನೆಲಸಿರುವುದನ್ನು ಅರವಿಗೊಂಡನ ಹಳ್ಳಿಯಾಗಿ, ಕಸವಿಂಯಣ್ಣ ನೆಲಸಿರುವ ಊರು ಕಸವಿ ಗೊಂಡನ ಹಳ್ಳಿಯಾಗಿ, ತಿಪ್ಪಯ್ಯ ನೆಲಸಿರುವ ಊರನ್ನು ತಿಪ್ಪಗೊಂಡನಹಳ್ಳಿಯೆಂದು ಕರೆಯಲಾಗಿದೆ.

೯. ಹಿರೇಹಳ್ಳಿ

ಈ ಗ್ರಾಮದಲ್ಲಿ ಮ್ಯಾಸಮಂಡಲದ ಹಿರೇ ವ್ಯಕ್ತಿಯಾದ ದಡ್ಡಿಸೂರನಾಯಕ ಪಂಗಡಗಳು ಬಂದು ನೆಲೆಸಿದರಿಂದ ಹಿರೇಹಳ್ಳಿ ಎಂಬ ಹೆಸರು ಬಂದಿದೆ. ತೆಲುಗಿನಲ್ಲಿ ಪೆದ್ದಪಲ್ಲಿ ಎಂದು ಕರೆಯುತ್ತಾರೆ.

ಹಿರೇ + ಹಳ್ಳಿ = ಹಿರೇಹಳ್ಳಿ (ಪೆದ್ದ + ಪಲ್ಲಿ = ಪೆದ್ದಪಲ್ಲಿ)

೧೦. ಮೀರಾಸಾಬಿಹಳ್ಳಿ

ಈ ಗ್ರಾಮದಲ್ಲಿ ಮಿರ್‌ಸಾದಕ್ ಎನ್ನುವ ಮುಸಲ್ಮಾನ ನೆಲೆಸಿರುವುದರಿಂದ ಮಿರಾಸಾಬಿಹಳ್ಳಿ ಎಂದು ಕರೆಯುತ್ತಾರೆ.

ಮಿರ್ + ಸಾಬಿ = ಮಿರ್‌ಸಾಬಿಹಳ್ಳಿ > ಮಿರಾಸಾಬಿಹಳ್ಳಿ

ಜಾತಿವಾಚಿ ಸ್ಥಳನಾಮಗಳು

ಆರಂಭದಲ್ಲಿ ಕೆಲವು ವೃತ್ತಿಗಳನ್ನವಲಂಬಿಸಿದ್ದ ಸಮುದಾಯಗಳಿಗೆ ಅವರ ವೃತ್ತಿಯಿಂದಲೇ ಗುರುತಿಸುವ ರೂಢಿಯು ಆರಂಭವಾಯಿತು. ಸಾಮಾಜಿಕ ಅಧ್ಯಯನದಲ್ಲಿ ಜಾತಿ ಮತ್ತು ವೃತ್ತಿಗಳು ಪ್ರಮುಖವಾದ ಪಾತ್ರವಹಿಸುತ್ತವೆ. ಜಾತಿಯು ಹುಟ್ಟಿದೊಂದಿಗೆ ಗುರುತಿಸಲ್ಪಡುತ್ತದೆ. ಅದು ನಿರ್ದಿಷ್ಟವಾಗಿ ಸ್ಥಳನಾಮಗಳನ್ನು ಸಮಾಜವನ್ನು ಬಿಂಬಿಸುತ್ತವೆ. ಲಿಖಿತ ಆಧಾರಗಳ ಕೊರತೆಯಿದ್ದಲ್ಲಿ, ಒಂದು ಜನಾಂಗವು ನೆಲೆಸಿದ್ದ, ಒಂದು ಪ್ರದೇಶದ ಸ್ಥಳನಾಮಗಳಲ್ಲಿನ ಸಮಾನ ರೂಪಗಳನ್ನು ಪರಿಶೀಲಿಸಬೇಕು. ಹೀಗಾಗಿ ಜಾತಿ, ವೃತ್ತಿಗಳು ಪ್ರಾಚೀನ ಸಾಮಾಜಿಕ ಅಂಶಗಳನ್ನು ಗಮನಿಸಲು ಸ್ಥಳನಾಮಗಳು ಸಾಧ್ಯವಾಗುತ್ತದೆ. ಸ್ಥಳನಾಮಗಳು ಈ ರೀತಿಯ ಯಾವುದೇ ಸಾಮಾಜಿಕ ಅಂಶಗಳನ್ನು ಎಲ್ಲಾ ಸಂದರ್ಭದಲ್ಲಿಯೂ ನೇರವಾಗಿ ಬಿಂಬಿಸದಿದ್ದರೂ ಸಂಸ್ಕೃತಿ ಪಳಿಯುಳಿಕೆಯಂಥಹ ಅವಶೇಷಗಳಾಗಿರುವುದರಿಂದ ಸಮಾಜದ ಕುರಿತು ಅತ್ಯಂತ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಈ ಕಾರಣವಾಗಿ ಒಂದೊಂದು ವೃತ್ತಿ, ಜಾತಿ,

ವರ್ಗದ ಗುಂಪುಗಳು ತಾವು ನೆಲೆಸಿದ ಕಡೆಯಲ್ಲಿ ತಮ್ಮ ವಾಸ್ತವ್ಯಗಳಿಗೆ ಪ್ರಕೃತಿಯ ಕಡೆ ಗಮನವಿಟ್ಟನು. ಬರಬರುತ್ತಾ ನಾಗರಿಕನಾದನು. ವ್ಯಕ್ತಿ, ಜಾತಿ, ವೃತ್ತಿ, ದೈವವಾಚಿ ಅಂಶಗಳನ್ನು ಸ್ಥಳನಾಮಗಳಲ್ಲಿ ವಿಶಿಷ್ಟಗಳನ್ನಾಗಿ ಬಳಸಿಕೊಂಡಿದ್ದಾನೆ.

ಚಳ್ಳಕೆರೆ ತಾಲೂಕಿನ ಸ್ಥಳನಾಮಗಳ ಅಧ್ಯಯನದಲ್ಲಿ ಜಾತಿವಾಚಿ ಸ್ಥಳನಾಮಗಳು ಇರುವುದನ್ನು ಈ ಕೆಳಗಿನಂತೆ ಗಮನಿಸಬಹುದು.

ಗೊಲ್ಲರಹಳ್ಳಿ

ಜಂಗಮರಹಳ್ಳಿ

ದಾಸರಮುತ್ತೇನಹಳ್ಳಿ

ಬ್ಯಾಡರೆಡ್ಡಿಹಳ್ಳಿ

ಉಪ್ಪಾರಹಟ್ಟಿ

ಛತ್ರನಾಯ್ಕನಹಳ್ಳಿ

ಗೌಡಗೆರೆ

ತೊರೆಕೋಲಮನಹಳ್ಳಿ

ಜಾತಿವಾಚಿ ಸ್ಥಳನಾಮಗಳ ವಿಶ್ಲೇಷಣೆ

೧. ಗೊಲ್ಲರಹಳ್ಳಿ

ಗೊಲ್ಲರು ಒಂದು ಜನಾಂಗದವರು ನೆಲೆಸಿದ್ದರಿಂದ ಗೊಲ್ಲರಹಳ್ಳಿ ಎಂದು ಹೆಸರು.

ಗೊಲ್ಲರ + ಹಳ್ಳಿ = ಗೊಲ್ಲರಹಳ್ಳಿ.

೨. ಬೇಡರೆಡ್ಡಿಹಳ್ಳಿ

ಮ್ಯಾಸಬೇಡರು ಮತ್ತು ರೆಡ್ಡಿ ಜನಾಂಗದವರು ಇರುವುದರಿಂದ ಈ ಗ್ರಾಮಕ್ಕೆ ಬೇಡರೆಡ್ಡಿಹಳ್ಳಿ ಎಂಬ ಹೆಸರು ಬಂದಿದೆ. ಇಲ್ಲಿ ಕೋರಿ ಯರಮಂಚನಾಯಕನ ಸಂಸ್ಥಾನವಿದೆ.

ಬೇಡ + ರೆಡ್ಡಿ + ಹಳ್ಳಿ = ಬೇಡರೆಡ್ಡಿಹಳ್ಳಿ.

೪. ವಡೇರಹಳ್ಳಿ

ಈ ಗ್ರಾಮದಲ್ಲಿ 'ವಡ್ಡ' ಜನಾಂಗ ಇರುವುದರಿಂದ 'ವಡ್ಡ' ಬದಲು ವಡೇರಹಳ್ಳಿ ಎಂದು ಹೆಸರು.

ವಡ್ಡರ + ಹಳ್ಳಿ = ವಡ್ಡರಹಳ್ಳಿ>ವಡೇರಹಳ್ಳಿ.

೫. ಉಪ್ಪಾರಹಳ್ಳಿ

ಉಪ್ಪಾರ ಅಥವಾ ಉಪ್ಪು ತಯಾರಿಸುವವರು. ಒಂದು ಜನಾಂಗವಿದ್ದುದರಿಂದ ಉಪ್ಪಾರಹಳ್ಳಿ ಎಂದು ಕರೆಯುತ್ತಾರೆ. ಉದಾ. ಉಪ್ಪಾರಹಟ್ಟಿ–ಉಪ್ಪಾರಹಳ್ಳಿ.

ಉಪ್ಪಾರ + ಹಳ್ಳಿ = ಉಪ್ಪಾರಹಳ್ಳಿ.

೬. ರೆಡ್ಡಿಹಳ್ಳಿ

ತೆಲುಗಿನಲ್ಲಿ ರೆಡ್ಡಿಗಳು ಈ ಗ್ರಾಮದಲ್ಲಿ ನೆಲೆಸಿದ್ದರಿಂದ ರೆಡ್ಡಿಹಳ್ಳಿ ಎಂದು ಹೆಸರು ಬಂದಿದೆ.

ರೆಡ್ಡಿ + ಹಳ್ಳಿ = ರೆಡ್ಡಿಹಳ್ಳಿ.

೭. ದಾಸರಮುತ್ತೇನಹಳ್ಳಿ

'ದಾಸ' ಎಂದರೆ ಚೆಲುವಾದಿಗಳು. ಈ ಜಾತಿಯ ಜನಾಂಗವಿದ್ದುದರಿಂದ ದಾಸರಮುತ್ತೇನಹಳ್ಳಿ ಎಂದು ಕರೆಯುತ್ತಾರೆ.

ದಾಸರ + ಮುತ್ತೇನ + ಹಳ್ಳಿ = ದಾಸರಮುತ್ತೇನಹಳ್ಳಿ.

೮. ಯಾದಲಗಟ್ಟೆ

'ಯಾದಲ' ಎಂದರೆ ಕೃಷ್ಣವಂಶಕ್ಕೆ ಸೇರಿದವರು ಎಂದರ್ಥ. ಈ ಗ್ರಾಮದ ಮೂಲ ನಿವಾಸಿಗಳು ಗೊಲ್ಲರು. ಗೊಲ್ಲರು ನೆಲೆಸಿದ ಸ್ಥಳವಾಗಿದ್ದುರಿಂದ ಇದನ್ನು ಯಾದಲಗಟ್ಟೆಯೆಂದು ಕರೆಯಲಾಗಿದೆ. ಈ ಊರಿನ ಮೊದಲ ಹೆಸರಾಗಿ ಯಾದವಕಟ್ಟೆ ಎಂದು ಕರೆಯುತ್ತಿದ್ದರು. ನಂತರ ಅನೇಕ ಪಂಗಡಗಳು ಬಂದು ನೆಲೆಸಿದ್ದರಿಂದ ಅಲ್ಲಿ ನೆಲೆಸಿದ ನಿವಾಸಿಗಳು ತೆಲುಗಿನಲ್ಲಿ ಯಾದಲು(ಗೊಲ್ಲಜನಾಂಗ) ಕಟ್ಟಾ (ಗುಂಪು) ಎಂದು ಕರೆಯಲಾಯಿತು. ಈ ಕಟ್ಟ (ಇರುವ ಸ್ಥಳ) ಎಂಬ ಅಂಶವು ನಿರ್ದಿಷ್ಟ ವಾಚವನ್ನು ಸೂಚಿಸುತ್ತದೆ. ಆ ನಂತರ ಇದನ್ನು ಕಟ್ಟೆಯ ಬದಲಾಗಿ ಗಟ್ಟಾ ಎಂದು ಉಚ್ಚಾರಣೆ ಮಾಡಿ ಯಾದಲಗಟ್ಟಾ ಎಂಬ ಹೆಸರು ಬಂದಿದೆ.

ಯಾದಲ + ಗಟ್ಟೆ = ಯಾದಲಗಟ್ಟೆ > ಯಾದಲ + ಕಟ್ಟಾ = ಯದಲಗಟ್ಟಾ> ಯಾದಲಕಟ್ಟೆ

ದೈವವಾಚಿ ಸ್ಥಳನಾಮಗಳು

ಸಮಾಜ ಸಂಸ್ಕೃತಿಯಲ್ಲಿ 'ದೇವರ' ಪಾತ್ರ ಭಿನ್ನವಾದುದು. ಜೀವನದ ಹಲವಾರು ಸಂಗತಿಗಳಲ್ಲಿ ದೈವದ ಮಹತ್ವವನ್ನು ಕಂಡುಕೊಳ್ಳುವುದು ನಮ್ಮ ಸಂಸ್ಕೃತಿಯ ಪರಂಪರೆಯಾಗಿ ಮುಂದುವರೆಯುತ್ತದೆ. ಹಾಗೆಯೇ ಗ್ರಾಮ, ಊರುಗಳ ಹೆಸರುಗಳಿಗೂ ದೇವರ ಹೆಸರನ್ನು ಇಡುವುದು ರೂಢಿಯಾಗಿದೆ. ಸಮುದಾಯಗಳು ತಾವು ನಂಬಿದ ಕುಲದೈವ, ಮನೆದೈವ, ಗ್ರಾಮದೇವತೆ, ಪ್ರಾದೇಶಿಕ ದೇವತೆ ಹೀಗೆ ಹಲವಾರು ದೇವರುಗಳ ತಮ್ಮ ನೆಲೆಗಳಿಗೆ ಇಟ್ಟುಕೊಂಡರೆ

ಒಳ್ಳೆಯದೆಂದು ನಂಬುತ್ತಾರೆ. ಈ ಮೂಲಕ ತಮ್ಮ ಸಂಸ್ಕೃತಿಯ ಒಂದು ಭಾಗವೆಂದು ದೇವರನ್ನು ಸ್ವೀಕರಿಸಿದ್ದೇವೆ. ಚಳ್ಳಕೆರೆ ತಾಲೂಕಿನ ಭಾಗದಲ್ಲಿ ದೊರೆಯುವ ಸ್ತ್ರೀದೇವತೆ, ಪುರುಷ ದೇವತೆ ಸ್ಥಳನಾಮಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

೧. ಗುಡಿಹಳ್ಳಿ

೨. ದೇವರಹಳ್ಳಿ

೩. ಲಕ್ಷ್ಮಿಪುರ

೪. ಸಿದ್ದೇಶ್ವರನದುರ್ಗ

೫. ಅಮರಾಪುರ

೬. ವಿಶ್ವನಾಥಪುರ

೭. ತಳಕಿನಗುಡ್ಡ

೮. ನಾರಾಯಣಪುರ

ದೈವವಾಚಿ ಸ್ಥಳನಾಮಗಳ ವಿಶ್ಲೇಷಣೆ

೧. ಗುಡಿಹಳ್ಳಿ

'ಗುಡಿ' ಎಂದರೆ ಮಂಡಲ ಅಥವಾ ಮಂಟಪ, ದೇವಾಲಯ ಎಂದರ್ಥ. ಈ ಗ್ರಾಮದ ಓಬಳೇದೇವರ ಬಗ್ಗೆ ಒಂದು ಕತೆಯಿದೆ. ಮ್ಯಾಸನಾಯಕರ ಕೊಂಡರವರ ಏಳು ಜನ ಅಣ್ಣ, ತಮ್ಮಂದಿರು ಕಾಲುವೆಹಳ್ಳಿಯ ಬಂತೆಗುಡ್ಡದ ಬಳಿ ವಾಸಮಾಡುತ್ತಿರುವಾಗ 'ಶಿಖರೆಂಬೆ' ಎಂಬ ಹಸುವೊಂದು ಹುತ್ತದ ಮೇಲೆ ಹಾಲು ಕರೆಯುವುದನ್ನು ಕಂಡಾಗ ಏಳು ಜನ ನೋಡಲು ಹೋದಾಗ ದೈವಸಾಕ್ಷಾತ್ಕಾರವಾಗಿ ನಾನು ಇಲ್ಲಿಯೇ ನೆಲೆ ನಿಲ್ಲುತ್ತೇನೆ ಎಂದಾಗ ಗುಡಿಯನ್ನು ನಿರ್ಮಾಣ ಮಾಡಿದರಂತೆ ಹಾಗಾಗಿ ಈ ಊರಿಗೆ ಗುಡಿಹಳ್ಳಿ ಎಂದು ಹೆಸರು ಬಂದಿದೆ.

ಗುಡಿ + ಹಳ್ಳಿ = ಗುಡಿಹಳ್ಳಿ

೨. ದೇವರಹಳ್ಳಿ

ಈ ಗ್ರಾಮದ ಪಕ್ಕದಲ್ಲಿ ಗೌರಸಮುದ್ರ ಮಾರಿಯ ತುಮುಲು ಇರುವುದರಿಂದ ಜನರು ಸುಖ-ಸಂತೋಷದಿಂದ ಇರುವುದರಿಂದ ದೇವರಹಳ್ಳಿ ಎಂದು ಹೆಸರು.

ದೇವರ + ಹಳ್ಳಿ = ದೇವರಹಳ್ಳಿ

೩. ಲಕ್ಷ್ಮಿಪುರ

ಇಲ್ಲಿ ಪೋಲೇರಮ್ಮನ ಗುಡಿ ನಿರ್ಮಿಸಿದ್ದಾರೆ. 'ಲಕ್ಷ್ಮಿ' ಎಂಬ ಹೆಸರಿನೊಂದಿಗೆ ಈ ಊರಿನ ಹೆಸರನ್ನು ಲಕ್ಷ್ಮಿಪುರ ಎಂದು ನಿರ್ದೇಶಿಸಲಾಗಿದೆ.

೪. ಸಿದ್ದೇಶ್ವರನ ದುರ್ಗ

ಇಲ್ಲಿ ಒಂದು ಕೋಟೆ ಇದೆ. ಕೋಟೆಯಲ್ಲಿ ಸಿದ್ದೇಶ್ವರ ಎಂಬ ಸ್ವಾಮಿ ಜನಿಸಿರುವುದರಿಂದ ಸಿದ್ದೇಶ್ವರನ ದುರ್ಗ ಎಂದು ಕರೆಯುತ್ತಾರೆ.

ಸಿದ್ದೇಶ್ವರನ + ದುರ್ಗ = ಸಿದ್ದೇಶ್ವರನ ದುರ್ಗ

೫. ಅಮರಾಪುರ

ಅಂಬಲೇಶ್ವರ ದೇವಾಲಯ ಇರುವುದರಿಂದ ಈ ಗ್ರಾಮದ ಹೆಸರು ಅಮರಾಪುರ ಎಂದು ಕರೆಯುತ್ತಾರೆ.

೬. ವಿಶ್ವನಾಥಪುರ

ಈ ಗ್ರಾಮದಲ್ಲಿ ವಿಷ್ಣು ದೇವಾಲಯದ ಶಿಖರ ಅಥವಾ ಅಲಂಕಾರ ರಚನೆಯುಳ್ಳ ಬಾಗಿಲು ಇರುವುದರಿಂದ ವಿಶ್ವನಾಥಪುರ ಎಂದು ಕರೆಯುತ್ತಾರೆ.

ವಿಶ್ವನಾಥ + ಪುರ = ವಿಶ್ವನಾಥಪುರ

೭. ತಳಗಿನಗುಡ್ಡ

ದೈವವಾಚಿ ಸ್ಥಳನಾಮವಾಗಿದ್ದು, ತಳಕು ಎಂದರೆ ಎರಡು ದೇವರಿಗೆ ಬಿಟ್ಟ ಎತ್ತುಗಳು ಕೊಂಬುಗಳನ್ನು ತಳಕು ಹಾಕಿಕೊಂಡಿದರಿಂದ ತಳಕಿನಗುಡ್ಡ ಎಂದು ಹೆಸರು. ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ಎತ್ತುಗಳ ಪೂಜೆಯನ್ನು ನಡೆಸುತ್ತಾರೆ. ಇಲ್ಲಿ ಜುಂಜಪ್ಪ ದೇವರ ಗುಡಿ ಇದೆ.

ತಳಕು + ನ + ಗುಡ್ಡ = ತಳಕಿನಗುಡ್ಡ

೮. ನಾರಾಯಣಪುರ

ಈ ಗ್ರಾಮದಲ್ಲಿ ಸತ್ಯನಾರಾಯಣಸ್ವಾಮಿ ದೇವಾಲಯ ಇರುವುದರಿಂದ ನಾರಾಯಣಪುರ ಎಂದು ಕರೆಯುತ್ತಾರೆ.

ನಾರಾಯಣ + ಪುರ = ನಾರಾಯಣಪುರ.

೯. ಖುದಾಪುರ

ಖುದಾ ಎಂದರೆ ದೇವರು ಅಥವಾ ಪರಮಾತ್ಮ ಎಂದರ್ಥ. ಕ್ರಿ.ಶ. ೧೪-೧೫ನೇ ಶತಮಾನದಲ್ಲಿದ್ದ ಶ್ರೀ ಗುರು ತಿಪ್ಪೇರುದ್ರಸ್ವಾಮಿಗಳ ಕಾಲದಲ್ಲಿ ಪಾಳೆಗಾರನಾದ ಬೋಡಿಮಲ್ಲಪ್ಪ ನಾಯ್ಕನು ಈ ಊರನ್ನು ಕಟ್ಟಿಸಿದನೆಂದು ನಾಯ್ಕನಹಟ್ಟಿ ಬಖೈರಿನಿಂದ ತಿಳಿದುಬರುತ್ತದೆ. ತಿಪ್ಪೇರುದ್ರಸ್ವಾಮಿ ಹತ್ತಿರುವಿರುವುದರಿಂದ ಖುದಾಪುರ ಎಂದು ಹೆಸರು. ಇಲ್ಲಿ ಬೋರೇ ದೇವಸ್ಥಾನವಿದೆ. ಖುದಾ + ಪುರ = ಖುದಾಪುರ.

ಹೀಗೆ ದೇವರು ಪುರಾಣ ಪುರುಷರು, ಸಾಧು ಸಜ್ಜನರು, ತಪಸ್ವಿಗಳು ಮುಂತಾದವರು ನಮ್ಮ ಸಂಸ್ಕೃತಿಯಲ್ಲಿ ಜೀವನದ ಅನನ್ಯ ಭಾಗವಾಗಿ ಅದರಲ್ಲಿಯೂ ಸ್ಥಳನಾಮಗಳಿಗೆ ಹೆಸರುಗಳಾಗಿ ಬಂದಿರುವುದು ತಿಳಿಯುತ್ತದೆ. ದೈವವಾಚಿ ಸ್ಥಳನಾಮಗಳ ನಿರ್ದಿಷ್ಟ ಭಾಗದಲ್ಲಿ ಹೆಚ್ಚಾಗಿ ಸಂಸ್ಕೃತ ಪದಗಳು ಮತ್ತು ಸಂಸ್ಕೃತದಿಂದ ತದ್ಭವಗೊಂಡ ಪದಗಳು ಇವೆ. ಕರ್ನಾಟಕದ ಇತರ ಕಡೆ ಸ್ತ್ರೀ ದೇವತೆಗಳ ಸ್ಥಳನಾಮಗಳು ವಿರಳವಾಗಿಯೇ ಕಂಡುಬರುತ್ತಿವೆ. ವ್ಯಕ್ತಿವಾಚಿ ಹಾಗೂ ದೈವವಾಚಿ ಸ್ಥಳನಾಮವನ್ನು ಅದರ ರೂಪದಿಂದಲೇ ಬೇರ್ಪಡಿಸಲು ಸಾಧ್ಯವಾಗದು. ಹೀಗೆ ಕೆಲವು ಸ್ಥಳನಾಮಗಳ ಆಕೃತಿಯಿಂದ ಅದು ವ್ಯಕ್ತಿಯೋ ಅಥವಾ ದೈವವೋ ಎಂಬಂತಹ ತೊಡಕುಗಳು ಉಂಟಾಗುತ್ತವೆ. ಕಾರಣ ಕ್ಷೇತ್ರ ಮಾಹಿತಿಯಿಂದ ಮಾತ್ರ ಈ ಬಗ್ಗೆ ಖಚಿತತೆ ಬರುತ್ತದೆ. ಅದೇನೇ ಇದ್ದರೂ ದೇವರೊಂದಿಗಿನ ಸಂಬಂಧ ಆ ಮೂಲಕ ಕಟ್ಟಿಕೊಂಡ ನಾಡವರ ಸಂಸ್ಕೃತಿಯಲ್ಲಿ ಈ ಸ್ಥಳನಾಮಗಳು ವೈಶಿಷ್ಟ್ಯತೆಯನ್ನು ಪಡೆದುಕೊಂಡಿವೆ.

ದೈವವಾಚಿ ಸ್ಥಳನಾಮಗಳಿಂದ ಪ್ರಾದೇಶಿಕವಾಗಿರುವ ಶೈವ, ವೈಷ್ಣವ, ಬೌದ್ಧ, ಜೈನ ಹೀಗೆ ಹಲವಾರು ಧಾರ್ಮಿಕ ಅಂಶಗಳತ್ತ ಗಮನಹರಿಸಲು ಸಾಧ್ಯವಾಗುತ್ತದೆ. 'ಭೈರವ'ದಿಂದ ಆರಂಭವಾಗುವ ಗ್ರಾಮನಾಮಗಳಲ್ಲಿ 'ನಾಥ' ಸಂಪ್ರದಾಯ ಶೈವ ಸಂಸ್ಕೃತಿಯ ನಿರ್ವಚನದಲ್ಲಿ ಇಂತಹ ಊರುಗಳಲ್ಲಿ ಅಧ್ಯಯನ ಕೈಗೊಂಡರೆ ಅನೇಕ ಮೂಲಾಧಾರಗಳು ದೊರೆಯುವ ಸಾಧ್ಯತೆಗಳಿರುತ್ತವೆ. ಈ ನಿಟ್ಟಿನಲ್ಲಿ ದೈವವಾಚಿ ಸ್ಥಳನಾಮಗಳು ಮಹತ್ವ ಪಡೆದುಕೊಳ್ಳುತ್ತವೆ.

೩. ವಾರ್ಗಿಕಗಳ ಬಳಕೆ

ಸ್ಥಳನಾಮಗಳ ಉತ್ತರ ಘಟಕಗಳು(ವಾರ್ಗಿಕ) ಆ ಗ್ರಾಮದ ಖಚಿತ ಸ್ವರೂಪವನ್ನು ತಿಳಿಸುವವುಗಳಾಗಿರುತ್ತವೆ. ವಾರ್ಗಿಕದ ಆಧಾರದಿಂದ ಒಂದು ಪ್ರದೇಶದ ಗ್ರಾಮಗಳನ್ನು ಕೆಲವೇ ಗುಂಪುಗಳಾಗಿ ವರ್ಗೀಕರಿಸಬಹುದು. ಇವುಗಳಲ್ಲಿ ನಿಸರ್ಗವಾಚಿ, ವಸತಿವಾಚಿ ಮತ್ತು ನಿರ್ಮಾಣವಾಚಿ ಈ ಮೂರು ಪ್ರಕಾರವಾಗಿ ವಿಂಗಡಿಸಬಹುದು.

ಪುರ

- ಓಬಳಾಪುರ
- ಲಕ್ಷ್ಮೀಪುರ
- ಮಹಾದೇವಪುರ
- ಪರಶುರಾಮಪುರ
- ಬಸಾಪುರ
- ರೇಣುಕಾಪುರ

- ಗೌರಿಪುರ
- ಸಿದ್ದಾಪುರ

ಹಳ್ಳಿ

- ಕಾಲುವೆಹಳ್ಳಿ
- ಓಬಣ್ಣನಹಳ್ಳಿ
- ಅಜ್ಜನಹಳ್ಳಿ
- ಚೆನ್ನಗಾನಹಳ್ಳಿ
- ಗುಡಿಹಳ್ಳಿ
- ಕೊರಡರ ಹಳ್ಳಿ
- ಗೋಪನಹಳ್ಳಿ
- ಗಿಡ್ಡನಹಳ್ಳಿ
- ಬ್ಯಾಡರೆಡ್ಡಿಹಳ್ಳಿ
- ಬೋಗನಹಳ್ಳಿ

ಕೆರೆ

- ಕರಿಕೆರೆ
- ಸಾಣಿಕೆರೆ
- ಗೋಸಿಕೆರೆ
- ಚೌಳುಕೆರೆ
- ಗೆರೆ
- ಗೌಡಗೆರೆ
- ನಗರಂಗೆರೆ
- ಬಂಜಿಗೆರೆ
- ರೇಖಲಗೆರೆ
- ಹೇಗ್ಗೇರೆ

ಊರು

- ವನ್ನೂರು
- ಜಾಜೂರು
- ಮೋದೂರು
- ದೊಡ್ಡಚೆಲ್ಲೂರು
- ಚಿಕ್ಕಚೆಲ್ಲೂರು
- ಚೌಳೂರು

ಸಮುದ್ರ

- ಗೌರಸಮುದ್ರ
- ಮಲ್ಲಸಮುದ್ರ
- ಬೊಮ್ಮಸಮುದ್ರ
- ಮತ್ಸಮುದ್ರ

ಸಾಗರ

- ರಾಮಸಾಗರ
- ಭರಮಸಾಗರ
- ಕಂಪ್ಲಿಸಾಗರ

ಇತರೆ

- ಕಡೆಹುಡೆ
- ನನ್ನೀವಾಳ
- ಬುಡ್ನಹಟ್ಟಿ
- ಬುಕ್ಕಾಂಬುದಿ
- ಮನ್ನೆಕೋಟೆ
- ಯಾದಲಗಟ್ಟ
- ಗೊರ್ಲಕಟ್ಟೆ

- ಗೊವಿನಹಾಳು
- ಗಂಜಿಗುಂಟೆ
- ಕೊರ್ಲಕುಂಟೆ

೪. ಸಂಬಂಧವಾಚಕ ವಾರ್ಗಿಕವಾಗಿರುವ ಸ್ಥಳನಾಮಗಳು

ಕನ್ನಡದಲ್ಲಿ ಸಂಬಂಧವಾಚಿಗಳು ಮೂಲತಹ ಸ್ತ್ರೀ, ಪುರುಷ ಸೂಚಿಗಳಾಗಿವೆ. ಇವು ವ್ಯಕ್ತಿನಾಮಗಳಲ್ಲಿ ವಾರ್ಗಿಕವಾಗಿ ಬಳಕೆಯಾಗುತ್ತವೆ. ಇವುಗಳು ವ್ಯಕ್ತಿವಾಚಕ ಸ್ಥಳನಾಮಗಳಲ್ಲಿ ಬಳಕೆಗೊಳ್ಳುತ್ತವೆ. ಆಗ ಪೂರ್ಣ ವ್ಯಕ್ತಿನಾಮಗಳು ಯಾವಾಗಲು ನಿಧಿಷ್ಠದ ಸ್ಥಾನದಲ್ಲಿ ಬಳಕೆಗೊಳ್ಳುತ್ತವೆ. ಹಾಗಾಗಿ ಸಂಬಂಧವಾಚಿಗಳು ಸ್ಥಳನಾಮಗಳಲ್ಲಿ ಯಾವಾಗಲು ನಿರ್ದಿಷ್ಠದ ಸ್ಥಾನದಲ್ಲೆ ಕಂಡುಬರುತ್ತವೆ. ಕೆಲವೊಂದು ಸ್ಥಳನಾಮಗಳಲ್ಲಿ ಸಂಬಂಧವಾಚಕಗಳಿಂದಲೆ ಪ್ರಾರಂಭವಾಗುವುದನ್ನು ಕಾಣುತ್ತೇವೆ(ಅಜ್ಜನಹಳ್ಳಿ). ಚಳ್ಳಕೆರೆ ತಾಲ್ಲೂಕಿನಲ್ಲೂ ಈ ಮಾದರಿಯ ಸ್ಥಳನಾಮಗಳು ಕಂಡುಬಂದಿದ್ದು ಅವುಗಳ ಸ್ವರೂಪವನ್ನು ಈ ಕೆಳಗಿನಂತೆ ನೋಡಬಹುದು.

ಅಮ್ಮ

ಗುಂಟಕೋಲಮ್ಮನಹಳ್ಳಿ

ಚಿಕ್ಕಮ್ಮನಹಳ್ಳಿ

ಕಾಟಮ್ಮದೇವರ ಕೋಟೆ

ಗಿರಿಯಮ್ಮನಹಳ್ಳಿ

ವೀರದಿಮ್ಮವ್ವನಹಳ್ಳಿ

ಅವ್ವ

ಲಿಂಗವ್ವನ ಹಳ್ಳಿ

ಸರ್ಜವ್ವನ ಹಳ್ಳಿ

ಮಲ್ಲವ್ವನ ಹಳ್ಳಿ

ಅಪ್ಪ

ಹೊಟ್ಟೆಪ್ಪನ ಹಳ್ಳಿ

ತಿಮ್ಮಪಯ್ಯನ ಹಟ್ಟಿ

ಅಣ್ಣ

ಓಬಣ್ಣನಹಳ್ಳಿ

ತಿಮ್ಮಣ್ಣನ ನಾಯಕನ ಕೋಟೆ

ಅಯ್ಯ

ತಿಪ್ಪಯ್ಯನ ಹಟ್ಟಿ

ಚಿತ್ರಯ್ಯನ ಹಟ್ಟಿ

ತಿಪ್ಪಯ್ಯನಹಟ್ಟಿ

ಚಿತ್ರಯ್ಯನಹಳ್ಳಿ

ಅಜ್ಜ

ಅಜ್ಜನಹಳ್ಳಿ ಇತ್ಯಾದಿ..

ಈ ಸ್ಥಳನಾಮಗಳಲ್ಲಿ 'ಅಮ್ಮ' ವಾರ್ಗಿಕವಾಗಿ ಬಂದಿರುವ ಸ್ಥಳನಾಮಗಳು ದೈವವಾಚಕವಾಗಿ ಬಂದಿವೆ. ಉಳಿದವುಗಳು ವ್ಯಕ್ತಿವಾಚಕವಾಗಿ ಇದ್ದು ಕ್ರಮೇಣ ಆ ವ್ಯಕ್ತಿಯಿಂದ ಆ ಸ್ಥಳಕ್ಕೆ ಹೆಸರಿಸುವಾಗ ಸ್ಥಳನಾಮಗಳಲ್ಲಿ ಬಳಕೆಯಲ್ಲಿವೆ.

೫. ವಿಶೇಷಣಗಳು ವಾರ್ಗಿಕವಾಗಿ ಹೊಂದಿರುವ ಸ್ಥಳನಾಮಗಳು

ಸಾಮಾನ್ಯವಾಗಿ ವಿಶೇಷಣಗಳು ಹೊಗಳುವ ಅಥವಾ ವರ್ಣಿಸುವ ಗುಣವನ್ನು ಹೊಂದಿವೆ. ಇವು ವಸ್ತು, ವಿಷಯ, ಸಂಗತಿಗಳನ್ನು ಹೊಗಳುತ್ತವೆ. ಸ್ಥಳನಾಮಗಳಲ್ಲಿ ವಿಶೇಷಣಗಳು ಹೊಗಳುವ ಅಥವಾ ವರ್ಣಿಸುವ ಕಾರಣಕ್ಕಾಗಿ ಬಳಕೆಯಾಗುವುದಿಲ್ಲ, ಬದಲಾಗಿ ಒಂದೇ ಹೆಸರಿನ ಎರಡು ಊರುಗಳು ಅಕ್ಕ ಪಕ್ಕದಲ್ಲಿರುವಾಗ ಅವುಗಳನ್ನು ಪ್ರತೇಕಿಸಿ ಹೆಸರಿಸುವ ಸಲುವಾಗಿ ವಿಶೇಷಣಗಳ ಬಳಕೆ ಕಂಡು ಬರುತ್ತದೆ. ಕೆವೊಮ್ಮೆ ಒಂದು ದೊಡ್ಡ ಊರು ಇಬ್ಭಾಬವಾಗಿ ಎರಡು ಪ್ರತೇಕ ಊರುಗಳಾದಾಗಲೂ ವಿಶೇಷಣಗಳ ಬಳಕೆಯಾಗುತ್ತದೆ.

ಉದಾ.

ದೊಡ್ಡ ಬಾದಿ – ಚಿಕ್ಕ ಬಾದಿ ಹಳ್ಳಿ

ದೊಡ್ಡ ಚೆಲ್ಲೂರು – ಚಿಕ್ಕ ಚೆಲ್ಲೂರು

ದೊಡ್ಡ ಬೀರನ – ಚಿಕ್ಕ ಮಧಿರೆ ಹಳ್ಳಿ

ಗಿಡ್ಡ

ಗಿಡ್ಡನಹಳ್ಳಿ

ಗಿಡ್ಡಾಪುರ

ಚಿಕ್ಕ

ಚಿಕ್ಕೇನಹಳ್ಳಿ

ಚಿಕ್ಕಬಾದಿಹಳ್ಳಿ

ದೊಡ್ಡ

ದೊಡ್ಡಬಾದಿ

ದೊಡ್ಡಬೀರಿನಹಳ್ಳಿ

ದೊಡ್ಡಚೆಲ್ಲೂರು

ದೊಡ್ಡಉಳ್ಳಾರ್ತಿ

ದೊಡ್ಡೆರಿ

ಹಿರಿಯ

ಹಿರೆ ಹಳ್ಳಿ

ಹಿರೆಕೆರೆ

ಹೆಗ್ಗೆರೆ

ಇತರೆ

ಚಲುಮೇಯನಹಳ್ಳಿ

ಪಿಲ್ಲಹಳ್ಳಿ

ಮರಿಕುಂಟೆ

ಕರಿಕೆರೆ

೬. ಅನ್ಯ ಭಾಷೆಯ ಸ್ಥಳನಾಮಗಳು

ತೆಲುಗು

ಗೊರ್ಲತ್ತು

ಗೊರ್ಲಕಟ್ಟೆ

ಪುರ್ಲ ಹಳಿ

ಪುಟ್ಲೋರ ಹಳ್ಳಿ

ಬುಡ್ಲತಟ್ಟ

ಬೋಮ್ಮ ಸಮುದ್ರ

ಮೋಮ್ಮನ ಕುಂಟೆ

ಉರ್ದು

ಮೀರಾಸಾಬಿ ಹಳ್ಳಿ

ಖುದಾಪುರ

ಇಮಾಮಪುರ

ಇಂಗ್ಲೀಷ್

ಇಂಗ್ಲೀಷ್‌ನ ಯಾವುದೆ ಸ್ಥಳನಾಮಗಳು ಇರದಿದ್ದರು ಕೆಲವು ಹೆಸರುಗಳು ಸಂಕ್ಷಿಪ್ತ ಗೊಳಿಸುವಾಗ ಇಂಗ್ಲೀಷ್ ಬಳಸಿಕೊಂಡಿರುವುದನ್ನು ಕಾಣುತ್ತೇವೆ. ಉದಾ.

ಟಿ. ಎನ್. ಕೋಟೆ – ತಿಮ್ಮಣ್ಣನಾಯಕನ ಕೋಟೆ

ಸಿ. ಎನ್. ಹಳ್ಳಿ – ಚಿತ್ರನಾಯಕನ ಹಳ್ಳಿ

ಪಿ. ಮಹದೇವಪುರ – ಪರಶುರಾಮಪುರ ಮಹದೇವಪುರ

ಎನ್. ಮಹದೇವಪುರ – ನಾಯಕನಟ್ಟಿ ಮಹದೇವಪುರ

ಎಂ.ಡಿ. ಕೋಟೆ – ಮಾಡನಾಯಕನ ಕೋಟೆ ಇತ್ಯಾದಿ..

೭. ಸ್ಥಳನಾಮಗಳ ಭಾಷಿಕ ರಚನೆ

೧. ಧ್ವನಿಮಾ

ಸ್ಥಳನಾಮಗಳಲ್ಲಿ ಸ್ವರ ಧ್ವನಿ ಬಳಕೆ

ಧ್ವನಿ	ಪದಮೊದಲಲ್ಲಿ	ಪದನಡುವಲ್ಲಿ	ಪದಕೊನೆಯಲ್ಲಿ
ಅ	ಅಜ್ಜನಹಳ್ಳಿ ದೇವರಹಳ್ಳಿ	ಅಬ್ಬಯ್ಯನಹಳ್ಳಿ ಗೌರಸಮುದ್ರ	ರೇಖಲಗೆರೆ ಪರಶುರಾಮಪುರ
ಆ	ಆಲಿಗೊಂಡನಹಳ್ಳಿ	ಬಸಾಪುರ ಕೆರೆಯಾಗಳಹಳ್ಳಿ	--
ಇ	--	ಗ್ಯಾದಿಗುಂಟೆ ಗುಡಿಹಳ್ಳಿ	ಗೋಪನಹಳ್ಳಿ ಗೊಲ್ಲಹಳ್ಳಿ
ಈ	--	ದೊಡ್ಡಬೀರನಹಳ್ಳಿ ತೊರೆಬೀರನಹಳ್ಳಿ	--
ಉ	--	ಕುಂದಾಪುರ ಗೌರಿಪುರ	ಸೋಮನಗುದ್ದು ವರವು
ಊ	--	ಚಿಕ್ಕಚೆಲ್ಲೂರು ಚೌಳೂರು	--
ಎ	--	ಗೌಡಗೆರೆ ರೆಡ್ಡಿಹಳ್ಳಿ	ನಗರಂಗೆರೆ ಬೊಮ್ಮನಕುಂಟೆ
ಏ	--	ದೇವರೆಡ್ಡಿಹಳ್ಳಿ ದೊಡ್ಡೇರಿ	--
ಐ	ಐಯ್ಯಗರ್ಲಹಳ್ಳಿ	--	--
ಒ	--	ಬೊಂಬೆಹಳ್ಳಿ ದೊಣೆಹಳ್ಳಿ	--
ಓ	ಓಬಳಾಪುರ ಓಬಣ್ಣನಹಳ್ಳಿ	ಪುಟ್ಲರಹಳ್ಳಿ ಜೋಗಿಹಟ್ಟಿ	--
ಔ	--	ಗೌಡಗೆರೆ ಗೌರಿಪುರ	--

ಸ್ಥಳನಾಮಗಳಲ್ಲಿ ವ್ಯಂಜನ ಧ್ವನಿ ಬಳಕೆ

ಧ್ವನಿ	ಪದಮೊದಲಲ್ಲಿ	ಪದನಡುವಲ್ಲಿ	ಪದಕೊನೆಯಲ್ಲಿ
ಕ್	ಕರಿಕೆರೆ ಕಡೆಹುಡೆ	ಕತ್ರಿಕೇನಹಳ್ಳಿ ಗೋಸಿಕೆರೆ	ಚಿಕ್ಕಳ್ಳಿ ಚಿಕ್ಕನ ಹಳ್ಳಿ
ಗ್	ಗಜಗಾನಹಳ್ಳಿ ಗಂಜಿಗುಂಟೆ	ಕ್ಯಾತಗೊಂಡನಹಳ್ಳಿ ಚೆನ್ನಗಾನಹಳ್ಳಿ	ದುಗ್ಗಾವರ ಹೆಗ್ಗೆರೆ
ಙ್	--	ಲಿಂಗವ್ವನ ಹಳ್ಳಿ ಜಂಗಮರಹಳ್ಳಿ	--
ಚ್	ಚಳ್ಳಕೆರೆ ಚಾಳುಕೆರೆ	ದೊಡ್ಡ ಚೆಲ್ಲೂರು ಚಿಕ್ಕ ಚೆಲ್ಲೂರು	--
ಜ್	ಜಡೆಕುಂಟೆ ಜನ್ನೇನಹಳ್ಳಿ	ಬಂಜಿಗೆರೆ ಜುಂಜರಗುಂಟೆ	--
ಞ್	--	ಬಂಜಿಗೆರೆ ಜುಂಜರಗುಂಟೆ	--
ಟ್	--	ಹೊಟ್ಟೆಪ್ಪನಹಳ್ಳಿ ಮನ್ನೆಕೋಟೆ	ಜೋಗಿ ಹಟ್ಟಿ
ಡ್		ದೊಡ್ಡೇರಿ ದೊಡ್ಡ ಚೆಲ್ಲೂರು	ದೊಡ್ಡೇರಿ ಗಿಡ್ಡಾಪುರ
ಣ್	--	ದೋಣೆಹಳ್ಳಿ ಸಾಣಿಕೆರೆ	ತಿಮ್ಮಣ್ಣನಹಳ್ಳಿ
ತ್	ತಳಕು ತಿಮ್ಮಣ್ಣನಹಳ್ಳಿ	ಮುತ್ತಸಮುದ್ರ ಹೆಂಜಮುತ್ತೇನಹಳ್ಳಿ	ಹೆಂಜಮುತ್ತೇನಹಳ್ಳಿ
ದ್	ದುಗ್ಗಾವರ ದೇವರಹಳ್ಳಿ	ಚಿಕ್ಕಬದಿಹಳ್ಳಿ ಯಾದಲಗಟ್ಟೆ	--

ನ್	ನನ್ನಿವಾಳ ನೇರ್ಲಗುಂಟೆ	ಜನ್ನೇನಹಳ್ಳಿ ಬಡವನಹಳ್ಳಿ	ನನ್ನಿವಾಳ ಮನ್ನೆ ಕೋಟೆ
ಪ್	ಪರಶುರಾಮಪುರ ಪಿಲ್ಲಹಳ್ಳಿ	ರೇಣುಕಾಪುರ ಭರಮಪುರ	ಹೊಟ್ಟೆಪ್ಪನ ಹಳ್ಳಿ ತಿಪ್ಪರೆಡ್ಡಿ ಹಳ್ಳಿ
ಬ್	ಬೋಗನಹಳ್ಳಿ ಭರಮಸಾಗರ	ಚಟ್ಟೆಕಂಬ ದೊಡ್ಡ ಬಾದಿ	--
ಮ್	ಮರಿಕುಂಟೆ ಮನ್ನೆಕೋಟೆ	ಮಹದೇವಪುರ ಮಮ್ಮದಿಸಾಗರ	ಬೊಮ್ಮನ ಕುಂಟೆ ಬೊಮ್ಮ ಸಮುದ್ರ
ಯ್	ಯಾದಲಗಟ್ಟ ಯಲಗಟ್ಟ	ತಿಪ್ಪಯ್ಯನ ಕೋಟೆ ತಿಪ್ಪಯ್ಯನಹಳ್ಳಿ	ಐಯ್ಯಗರ್ಲ ಹಳ್ಳಿ ಓಬಯ್ಯನ ಹಳ್ಳಿ
ರ್	ರಂಗವ್ವನಹಳ್ಳಿ ರಾಮಸಾಗರ	ಮರಿಕುಂಟೆ ರೇಣುಕಾಪುರ	ಮಲ್ಲ ಸಮುದ್ರ ರಾಮದುರ್ಗ
ಲ್	ಲಕುಮಗೊಂಡನಹಳ್ಳಿ, ಲಕ್ಷ್ಮೀಪುರ	ಮುಷ್ಟಲಗುಮ್ಮ ವಲಸೆ	ನೇರ್ಲಗುಂಟೆ ಪುಟ್ಲೊರ ಹಳ್ಳಿ
ವ್	ವಡೇರಹಳ್ಳಿ ವನ್ನೂರು	ವರವು ಗೋವಿನಹಾಳು	ವಿಶ್ವೇಶ್ವರಪುರ ಸರ್ಜವ್ವನಹಳ್ಳಿ
ಸ್	ಸಿದ್ದಾಪುರ ಸಾಣಿಕೆರೆ	ವಲಸೆ ಬಸಾಪುರ	--
ಶ್	--	ಸಿದ್ದೇಶ್ವನರ ಹಳ್ಳಿ ವಿಶ್ವನಾಥಪುರ	--
ಳ್	--	ಚಿಕ್ಕಳ್ಳಿ ಅಜ್ಜನಹಳ್ಳಿ	ಬಡವರ ಹಳ್ಳಿ ಚಳ್ಳಕೆರೆ
ಹ್	ಹಿರೇಹಳ್ಳಿ ಹುಲಿಕುಂಟೆ	ಪಿಲ್ಲಹಳ್ಳಿ ಪುರ್ಲಹಳ್ಳಿ	--

೨. ಆಕೃತಿಮಾ ರಚನೆ

೧. **ಒಂದು ಘಟಕ ಹೊಂದಿರುವ ಸ್ಥಳನಾಮಗಳು**

ತಳುಕು

ವಲಸೆ

ವರವು

೨. **ಎರಡು ಘಟಕ ಹೊಂದಿರುವ ಸ್ಥಳನಾಮಗಳು**

ಗೊಲ್ಲ + ಹಳ್ಳಿ = ಗೊಲ್ಲಹಳ್ಳಿ

ಗೊಪನ + ಹಳ್ಳಿ = ಗೋಪನಹಳ್ಳಿ

ಜನ್ನನ + ಹಳ್ಳಿ = ಜನ್ನೇನಹಳ್ಳಿ

ದೇವರ + ಹಳ್ಳಿ = ದೇವರಹಳ್ಳಿ

ಪಿಲ್ಲ + ಹಳ್ಳಿ = ಪಿಲ್ಲಹಳ್ಳಿ

ಪುರ‌್ಲ + ಹಳ್ಳಿ = ಪುರ್ಲಹಳ್ಳಿ

ಅಜ್ಜನ + ಹಳ್ಳಿ = ಅಜ್ಜನಹಳ್ಳಿ

ರೆಡ್ಡಿ + ಹಳ್ಳಿ = ರೆಡ್ಡಿಹಳ್ಳಿ

ಬಡವನ + ಹಳ್ಳಿ = ಬಡವನಹಳ್ಳಿ

೩. **ಮೂರು ಘಟಕ ಹೊಂದಿರುವ ಸ್ಥಳನಾಮಗಳು**

ಆಲಿ +ಗೊಂಡನ + ಹಳ್ಳ = ಆಲಿಗೊಂಡನಹಳ್ಳಿ

ಓಬ + ಅಣ್ಣನ + ಹಳ್ಳಿ = ಓಬಣ್ಣನಹಳ್ಳಿ

ಕಸ್ತೂರಿ + ತಿಮ್ಮನ + ಹಳ್ಳಿ = ಕಸ್ತೂರಿ ತಿಮ್ಮನಹಳ್ಳಿ

ದಾಸರ + ಮುತ್ತೇನ + ಹಳ್ಳಿ = ದಾಸರ ಮುತ್ತೇನಹಳ್ಳಿ

ತಿಪ್ಪ + ಅಯ್ಯನ + ಕೋಟೆ = ತಿಪ್ಪಯ್ಯನಕೋಟೆ

ದೊಡ್ಡ + ಬೀರನ + ಹಳ್ಳಿ = ದೊಡ್ಡಬೀರನಹಳ್ಳಿ

ಪರಶು + ರಾಮ + ಪುರ = ಪರಶುರಾಂಪುರ

ಬೆಡ + ರೆಡ್ಡಿ + ಹಳ್ಳಿ = ಬ್ಯಾಡರೆಡ್ಡಿಹಳ್ಳಿ

ರಾಮ + ಜೋಗಿ +ಹಳ್ಳಿ = ರಾಮಜೋಗಿಹಳ್ಳಿ

೪. ನಾಲ್ಕು ಘಟಕ ಹೊಂದಿರುವ ಸ್ಥಳನಾಮಗಳು

ಗುಂಟ + ಕೋಲ+ ಅಮ್ಮನ + ಹಳ್ಳಿ = ಗುಂಟಕೋಲಮ್ಮನಹಳ್ಳಿ

ಚೆನ್ನ +ಅಮ್ಮ + ನಾಗತಿ + ಹಳ್ಳಿ = ಚೆನ್ನಮ್ಮ ನಾಗತಿಹಳ್ಳಿ

ತೊರೆ + ಕೋಲ + ಅಮ್ಮನ + ಹಳ್ಳಿ = ತೊರೆಕೋಲಮ್ಮನ ಹಳ್ಳಿ

ವೀರ+ ದಿಮ್ಮ +ಅವ್ವನ +ಹಳ್ಳಿ = ವೀರದಿಮ್ಮವ್ವನಹಳ್ಳಿ

ಈ ಮೂರು ಮಾದರಿಯ ಅಕ್ಷರ ಘಟಕಗಳ ರಚನೆ ಹೊಂದಿರುವ ಸ್ಥಳನಾಮಗಳು ಕಾಣಬಹುದು. ಇವುಗಳಲ್ಲಿ ಹೆಚ್ಚಿನವು ವ್ಯಕ್ತಿನಾಮಗಳೇ ಸ್ಥಳನಾಮಗಳಾಗಿರುವುದರಿಂದ ವ್ಯಕ್ತಿನಾಮಗಳ ರಚನೆಯೇ ಇಲ್ಲಿ ಹೆಚ್ಚಾಗಿ ಕಾಣುತ್ತವೆ.

ಈ ಅಧ್ಯಯದಲ್ಲಿ ಸ್ಥಳನಾಮಗಳನ್ನು ಭಾಷಿಕವಾಗಿ ಹಲವು ಪ್ರಕಾರಗಳಲ್ಲಿ ವರ್ಗೀಕರಿಸಿಕೊಂಡು ಅವುದಳನ್ನು ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

❖❖❖

ಅಧ್ಯಾಯ : ಆರು

ಸಮಾರೋಪ

ಅಧ್ಯಾಯ: ಆರು

ಸಮಾರೋಪ

ಪ್ರಸ್ತುತ ಚಳ್ಳಕೆರೆ ತಾಲೂಕು ಸ್ಥಳನಾಮಗಳ ಅಧ್ಯಯನ ವಿಷಯದ ಕುರಿತು ಇದುವರೆಗೂ ವಿವರವಾದ ಅಧ್ಯಯನಗಳು ನಡೆದೆ ಇಲ್ಲವೆಂದು ಹೇಳಬೇಕಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಅಂತಹ ಒಂದು ನಂಬಲರ್ಹವಾದ ಪ್ರಯತ್ನವನ್ನು ಮಾಡಲಾಗಿದೆ. ಸ್ಥಳನಾಮಾಧ್ಯಯನ ಮಾಡುವಾಗ ವಿಶ್ಲೇಷಣಾತ್ಮಕವಾಗಿ ಹಾಗೂ ವಿವರಣಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನದ ಮೂಲಕ ಅರ್ಥಪೂಣವಾದ ಮಾಹಿತಿಯನ್ನು ಅಧ್ಯಯನದ ವಿಷಯಕ್ಕೆ ಒಳಪಡಿಸಲಾಗಿದೆ.

ಭೌಗೋಳಿಕ ಪರಿಸರದ ಚರಿತ್ರೆಯನ್ನು ಸಮಗ್ರವಾಗಿ ಉದ್ಭವಿಸುವ ಸಲುವಾಗಿ ಸೂಕ್ಷ್ಮ ಅಂಶಗಳನ್ನು ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಅಧ್ಯಯನದ ವಿಷಯವನ್ನು ಆಯ್ದುಕೊಂಡು ವಿವರವಾದ ಮಾಹಿತಿಯನ್ನು ತಿಳಿಯಪಡಿಸಲಾಗಿದೆ.

ವ್ಯವಸ್ಥಿತವಾದ ಅಧ್ಯಯನವನ್ನು ಶಾಸ್ತ್ರ ಎನ್ನುವಂತೆ ಸ್ಥಳನಾಮಾಧ್ಯಯನವು ಭಾಷೆಯ ಕಟ್ಟುಪಾಡುಗಳಿಗೆ ಹೊಂದಿಕೊಂಡಿರುವುದು ಅಧ್ಯಯನಕ್ಕೆ ಒಳಪಟ್ಟಿತು. ಭಾಷೆಯಲ್ಲಿನ ಎಲ್ಲಾ ಶಬ್ದಗಳಂತೆ ಹೆಸರು ಕೂಡ ಅಧ್ಯಯನಕ್ಕೆ ಒಳಪಡುವಂತಾಯಿತು. ಕೇವಲ ಹೆಸರುಗಳನ್ನು ಭಾಷೆಯ ನಿಯಮಗಳನ್ನು ತಿಳಿಸುವ ನಿಯಮಾನುಸಾರವಾಗಿ, ವೈಜ್ಞಾನಿಕವಾಗಿ ಅಭ್ಯಸಿಸುವುದು ಪ್ರತ್ಯೇಕ ಶಾಸ್ತ್ರವಾಗಿ ಪರಿಗಣನೆ ಹೊಂದಿ ಅದನ್ನು 'ಸ್ಥಳನಾಮಾಧ್ಯಯನ ಶಾಸ್ತ್ರ' ಎಂದು ಕರೆಯಲಾಯಿತು.

ಮನುಷ್ಯ ತನ್ನ ಬುದ್ಧಿಶಕ್ತಿಗೆ ತಿಳಿದುಕೊಳ್ಳುವುದೇನೆಂದರೆ ತಾನು ಪ್ರಾಣಿಯಂತೆ ಅಲೆದಾಡುವುದು ಹಾಗೂ ಎಲ್ಲೋ ಬೆಟ್ಟ, ಗುಡ್ಡ, ಹಳ್ಳ, ಕೊಳ್ಳ ಮುಂತಾದ ಕಡೆಗಳಲ್ಲಿ ತನಗೆ ಬೇಕಾದುದನ್ನು ಸೃಷ್ಟಿಸಿಕೊಂಡು, ಅನೇಕ ಉಪಾಯಗಳನ್ನು ಮಾಡಿಕೊಳ್ಳುತ್ತಿದ್ದನು. ಇಂತಹ ಸಂದರ್ಭದಲ್ಲಿ ಮನುಷ್ಯ ಸಂಗಜೀವಿಯಾಗಿರಲಿಲ್ಲ. ಒಂದು ಕಡೆ ನೆಲೆನಿಂತು ಜೀವನ ನಡೆಸುವುದು ಕನಸ್ಸಿನ ಮಾತಾಗಿತ್ತು.

ಹೀಗೆ ಮನುಷ್ಯ ಪ್ರಕೃತಿಯೊಂದಿಗೆ ಜೊತೆಗೂಡಿ, ತಾನು ಬೆಳೆದಿರುವ ರೀತಿಯನ್ನು ತಿಳಿದುಕೊಳ್ಳಲು ಭಾಷೆಯನ್ನು ಬಳಸಿದನು. ಸಂಸ್ಕೃತಿ ಎಂಬುದು ಸಾಮಾಜಿಕ, ಬೌದ್ಧಿಕ, ರಾಜಕೀಯ, ಧಾರ್ಮಿಕ ಜೀವನದ ಕ್ರಮವನ್ನು ತಿಳಿಯುವುದಕ್ಕೆ "ನಾಮಾಧ್ಯಯನವು ಸಹಾಯಕವಾಗಿದೆ." ಸ್ಥಳನಾಮಾಧ್ಯಯನವು ಐತಿಹಾಸಿಕ, ಸಾಂಸ್ಕೃತಿಕ, ಜಾನಪದ ಮುಂತಾದವುಗಳಿಂದ ಸಹಾಯ ಪಡೆದು ಸ್ಥಳನಾಮಗಳಿಗೂ ಪ್ರೋತ್ಸಾಹ ನೀಡಬಲ್ಲ ಒಂದು ಶಾಸ್ತ್ರೀಯ ಅಧ್ಯಯನದ ವಿಷಯವಾಗಿದೆ. ಇದಕ್ಕಾಗಿ ಜಲವಾಚಿ, ವ್ಯಕ್ತಿವಾಚಿ, ಜಾತಿವಾಚಿ, ಪ್ರಾಣಿವಾಚಿ, ದೈವವಾಚಿ, ಸಸ್ಯವಾಚಿ, ವಸ್ತುವಾಚಿ, ಸಾಂಸ್ಕೃತಿಕ ಸ್ಥಳನಾಮಗಳೆಂದು ವರ್ಗೀಕರಿಸಿಕೊಂಡು ಅಧ್ಯಯನವನ್ನು ಮಾಡಲಾಗಿದೆ.

ಸಂಗ್ರಹಿಸಿದ ಸ್ಥಳನಾಮಗಳಲ್ಲಿ ಪ್ರಾಕೃತಿಕ ಅಂಶಗಳಲ್ಲಿ ಜಲವಾಚಿ, ನಿಸರ್ಗವಾಚಿ ಎಂದೂ ಹಾಗೂ ಜಾತಿವಾಚಿಗಳೆಂದೂ ಸಾಂಸ್ಕೃತಿಕ ವಲಯದಲ್ಲಿ ದೈವವಾಚಿ, ವ್ಯಕ್ತಿವಾಚಿ, ಶಾಸನ ಸೂಚಿತ ಎಂದು ಗುರುತಿಸಿ ವಿಶ್ಲೇಷಿಸಲಾಗಿದೆ.

ಪ್ರಸ್ತುತ ಅಧ್ಯಯನದಿಂದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನಲ್ಲಿ ಗಿಡ, ಮರ, ಬೆಟ್ಟ, ಗುಡ್ಡ, ಕಂದರ ಮುಂತಾದ ಭೌಗೋಳಿಕ ಹಿನ್ನೆಲೆ ಬೆಳೆದು ಬಂದಿರುವುದು ಅಲ್ಲಿನ ಪರಿಸರದ ಜೊತೆಗೆ ಸಾಂಸ್ಕೃತಿಕತೆ ಹಾಗೂ ರಾಜಕೀಯ ನೀತಿಗಳ ಮೂಲಕ ಆ ಪ್ರದೇಶವು ಬೆಳೆದು ಬಂದಿರುವ ಐತಿಹಾಸಿಕತೆಯ ಅಂಶಗಳನ್ನು ಪ್ರಸ್ತುತ ಅಧ್ಯಯನದ ಮೂಲಕ ತಿಳಿಯುವ ಪ್ರಯತ್ನ ಮಾಡಲಾಗಿದೆ.

ಸಂಸ್ಕೃತಿ ಎಂಬುದು ಸದಾ ಮುಂದುವರೆಯುವುದು ಮನೋಧರ್ಮವುಳ್ಳ ಒಂದು ಚೌಕಟ್ಟು, ಒಂದು ಸಂಸ್ಕೃತಿಯಲ್ಲಿ ವ್ಯಕ್ತಿ, ದೈವ, ವೃತ್ತಿ, ಜಾತಿ, ಹಳ್ಳಿ, ಗ್ರಾಮ, ನಗರ, ಪಟ್ಟಣ, ಪ್ರಾಣಿ, ಸಸ್ಯ, ಪಕ್ಷಿ, ದೇವರು, ದೇವಾಲಯಗಳು ಮುಂತಾದವು ಮುಖ್ಯವಾದವು. ಈ ಎಲ್ಲಾ ಅಂಶಗಳಿಂದ ಮುಂದುವರಿಯುವ ಕಾರ್ಯವೇ ಸಾಂಸ್ಕೃತಿಕ ಸ್ಥಳನಾಮಗಳಾಗಿ ಮಾರ್ಪಟ್ಟು ವೃತ್ತಿ ಅಥವಾ ಕೆಲಸ ಮಾಡುವುದು ಮನುಷ್ಯನ ಸಹಜ ಧರ್ಮ. ಅವನು ಒಂದೆಡೆ ಸ್ಥಿರವಾಗಿಯಾಗಿ ತಾನು ತನ್ನ ಕುಟುಂಬದ ಒಂದು ಕಡೆ ಹಾಗೂ ಸಮಾಜದ ಬದುಕಿಗಾಗಿ ವೃತ್ತಿಗಳನ್ನು ನಿರ್ಮಿಸಿಕೊಂಡನು. ಅದರಲ್ಲೂ ವ್ಯವಸಾಯವನ್ನು ಪ್ರಧಾನವಾಗಿಟ್ಟುಕೊಂಡಿರುವ ಇತರೆ ಪಂಗಡಗಳಾದ ಉಪ್ಪಾರ, ಕಂಬಾರ, ಚಮ್ಮಾರ, ಬಡಿಗ ಮುಂತಾದ ವೃತ್ತಿಗಳನ್ನು ಮಾಡಿಕೊಂಡನು. ಹೀಗೆ ಕೆಲಸ ಮಾಡುವ ಕಸುಬುದಾರರು ತಮ್ಮದೇ ಆದ ಒಂದು ನಿರ್ದಿಷ್ಟ ಭೂಪ್ರದೇಶವನ್ನು ಗುರುತಿಸಿಕೊಂಡು ನೆಲೆಯೂರಿದನು. ಆ ವೃತ್ತಿಗಳಿಂದಲೆ ಆ ಪ್ರದೇಶಕ್ಕೆ ಹೆಸರಿಡಲಾಯಿತು. ಹೀಗೆ ಸ್ಥಳನಾಮಗಳು ಹಲವಾರು ಬದಲಾವಣೆಗಳಾದರೂ ಸಹ ತಮ್ಮ ತನವನ್ನು ಉಳಿಸಿಕೊಂಡಿವೆ ಎಂದರೆ ತಪ್ಪಾಗಲಾರದು ಎಂದು ಹೇಳುವುದು ಉಚಿತವೆನಿಸುತ್ತದೆ. ವರ್ಣಾಶ್ರಮದ ಪದ್ಧತಿಯ ನಂತರ ಕಸುಬಿನ ಹಿನ್ನೆಲೆಯಲ್ಲಿ ಜಾತಿಪದ್ಧತಿ ಹುಟ್ಟಿಕೊಂಡಿತು. ಅದು ವೃತ್ತಿಯನ್ನು ಮೀರಿಸಿ

ಬೆಳೆದುಬಂದಿತು. ಕಂಬಾರರು, ಕುಂಬಾರರು, ಬೇಡರು, ಪುರೋಹಿತರು ಮುಂತಾದ ಸಮುದಾಯದ ಹೆಸರಿನ ಗ್ರಾಮನಾಮಗಳಾದವು.

ಸ್ಥಳನಾಮಗಳಲ್ಲಿ ಗಮನಿಸಬಹುದಾದ ಮತ್ತೊಂದು ಮುಖ್ಯ ಅಂಶವೆಂದರೆ ಉದ್ದೇಶಿತ ಪ್ರದೇಶವು ನೀರಿನಿಂದ ಕೂಡಿದ ಜಲವಾಚಿ ಸೂಚಕ ಸ್ಥಳನಾಮಗಳು ಕಂಡುಬರುತ್ತವೆ. ಕೆರೆ, ಹಳ್ಳ, ಬೆಟ್ಟ, ಗುಡ್ಡ, ಭೂಪ್ರದೇಶವಾಗಿದ್ದರೆ ವಿಶಿಷ್ಟ ಹಾಗೂ ನಿರ್ದಿಷ್ಟಗಳನ್ನು ಒಳಗೊಂಡಿರುತ್ತದೆ. ಆಯಾ ಪ್ರದೇಶದ ವಿಶಿಷ್ಟತೆಯನ್ನು ಬಿಂಬಿಸುವುದೇ ಸ್ಥಳನಾಮದ ಮುಖ್ಯ ಗುಣವಾಗಿದೆ. ಕೆಲವೊಮ್ಮೆ ವಾರ್ಗಿಕಗಳು ಉತ್ಪ್ರೇಕ್ಷೆಯ ಸ್ಥಳನಾಮಗಳಾಗಿವೆ. ಕೆರೆಯು ಸಾಗರವೆಂದು ಉತ್ಪ್ರೇಕ್ಷೆಗೊಂಡು ವಾರ್ಗಿಕವಾಗಿ ಬಳಕೆಯಾಗಿವೆ.

ಅಂದರೆ ಇಲ್ಲಿ ಪೂರ್ತಿ ಬದಲಾವಣೆ ಹೊಂದಿದೆ ಎಂದು ಮೇಲ್ನೋಟಕ್ಕೆ ಕಂಡರೂ ಕೊನೆಗೆ ಅದು ಹಿಂದಿನ ತಲೆಮಾರನ್ನೇ ಮುಂದುವರೆಸಿಕೊಂಡು ಬಂದಿದೆ. ಅಂತೆಯೇ ಕೆಲವು ಸ್ಥಳನಾಮಗಳ ಹೆಸರುಗಳು ಮನುಷ್ಯನ ಬಾಯಿಗೆ ಸಿಕ್ಕು ಬೇರೆ ಅರ್ಥ ಪಡೆದುಕೊಂಡಿವೆ. ಅಥವಾ ಹೊಸ ಅರ್ಥವನ್ನು ಪಡೆದುಕೊಂಡಿವೆ.

ಫಲಿತಗಳು

* ಉದ್ದೇಶಿತ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಚಾರಿತ್ರಿ, ಪ್ರಾಕೃತಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ವಿಚಾರಗಳನ್ನು ಹೆಸರುಗಳ ಅಧ್ಯಯನದ ಮೂಲಕ ತಿಳಿಯುವ ಪ್ರಯತ್ನ ಮಾಡಲಾಗಿದೆ. ನಿಜನಿಷ್ಪತ್ತಿಯ ದೃಷ್ಟಿಕೋನದಿಂದ ಆಯ್ಕೆ ಮಾಡಿಕೊಂಡ ಪ್ರಸ್ತುತ ವಿಷಯದ ಅಧ್ಯಯನವನ್ನು ವಿವಿಧ ರೀತಿಯಿಂದ ನೋಡುವ ಉದ್ದೇಶದಿಂದ ಲಭ್ಯವಾದ ಕೃತಿ, ಶಾಸನ, ವೀರಗಲ್ಲುಗಳು, ಲೇಖನ, ಮೌಖಿಕ ಮಾಹಿತಿಗಳನ್ನು ಸಂಗ್ರಹಿಸಿ ಈ ಮಾದರಿಯನ್ನು ಸಿದ್ಧಪಡಿಸಲಾಗಿದೆ.

* ಸಾಮಾಜಿಕ ಅಂಶಗಳಾದ ಜಾತಿ ಮತ್ತು ವೃತ್ತಿಸೂಚಕ ಸ್ಥಳನಾಮಗಳನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಇವೆರಡು ಒಂದಕ್ಕೊಂದು ಸಹ ಸಂಬಂಧವನ್ನು ಹೊಂದಿವೆಯಾದರೂ ವೃತ್ತಿವಾಚಿ ಸ್ಥಳನಾಮಗಳು ಕೆಲವೊಮ್ಮೆ ಜಾತಿಯನ್ನು ಸೂಚಿಸುತ್ತದೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿರುವ ಎಲ್ಲಾ ಜಾತಿ ಸ್ಥಳನಾಮಗಳನ್ನು ಪ್ರತ್ಯೇಕವಾಗಿ ಗುರುತಿಸಲಾಗಿದೆ. ಜಾತಿವಾಚಿ ಸ್ಥಳನಾಮಗಳಲ್ಲಿ ಆಯ್ಕೆ ಮಾಡಿದ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಜಾತಿವಾಚಿ ಸ್ಥಳನಾಮಗಳನ್ನು ವಿಶ್ಲೇಷಣೆಯ ಒಳಗಡೆ ಅದರ ವಿಶಿಷ್ಟ ಅಂಶಗಳಲ್ಲಿ ಆಗಿರುವ ಭಾಷಿಕ ಸ್ಥಿತ್ಯಂತರಗಳನ್ನು ಗುರುತಿಸಲಾಗಿದೆ.

* ದೈವವಾಚಿ ಸ್ಥಳನಾಮಗಳನ್ನು ಸಾಂಸ್ಕೃತಿಕ ಅಂಶಗಳನ್ನು ತಿಳಿಸುತ್ತವೆ. ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ಥಳನಾಮಗಳಲ್ಲಿ ದೇವರ ಹೆಸರುಗಳು ಸ್ಥಳನಾಮದ ವಿಶಿಷ್ಟಗಳಾಗಿರುತ್ತವೆ. ಕೆಲವು ದೇವರ ಹೆಸರೇ ನಿರ್ದಿಷ್ಟವಾಗಿದ್ದನ್ನು ಗುರುತಿಸಲಾಗಿದೆ.

* ಜಲವಾಚಿ ಸ್ಥಳನಾಮಗಳಲ್ಲಿ ವಿಶಿಷ್ಟ ಹಾಗೂ ಸಾಮಾನ್ಯಂಶಗಳಲ್ಲಿ ಬಳಕೆಯಾಗಿರುವ ಜಲಸೂಚಕ ಅಂಶಗಳಾದ ಕೆರೆ, ಕಟ್ಟೆ, ಗುಂಟೆ, ಸಾಗರ ಮುಂತಾದವುಗಳನ್ನು ಗುರುತಿಸಿ ವಿಶ್ಲೇಷಿಸಲಾಗಿದೆ.

* ಸ್ಥಳನಾಮ ಸೃಷ್ಟಿಯಾದ ಕಾಲದಲ್ಲಿನ ಹಿನ್ನೆಲೆಯು ನಂತರದಲ್ಲಿ ಬದಲಾವಣೆಯಾಗಿರುತ್ತವೆ. ಇಂತಹ ಸಂದರ್ಭದಲ್ಲಿ ಸ್ಥಳನಾಮಗಳು ಸ್ಥಿತ್ಯಂತರ ಸಾಧ್ಯತೆಯಿರುತ್ತದೆ. ಐತಿಹಾಸಿಕ ಕಾರಣಗಳಿಂದ ಸೃಷ್ಟಿಯಾಗಿರುವ ಹಾಗೂ ಇತಿಹಾಸ ಸಂಬಂಧಿತ ನಾಮಗಳನ್ನು ಗುರುತಿಸಲಾಗಿದೆ.

* ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಸ್ಥಳನಾಮಗಳನ್ನು ಅಧ್ಯಯನಕ್ಕೆ ಒಳಪಡಿಸಿ ಅವುಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ ಮತ್ತು ಭಾಷಿಕ ಬದಲಾವಣೆಯನ್ನು ಗುರುತಿಸಲಾಗಿದೆ.

❖❖❖

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ವಕ್ತೃವಿವರ

ಸ್ಥಳನಾಮಗಳ ಪಟ್ಟಿ

ನಕಾಶೆಗಳು

ಆಕರ ಗ್ರಂಥಗಳು

* ಅಂಗಡಿ ಎಸ್.ಎಸ್., ಕರ್ನಾಟಕ ಬುಡಕಟ್ಟು ಭಾಷೆ, ಸೃಷ್ಟಿ ಪಬ್ಲಿಕೇಷನ್ಸ್.
* ಕರ್ನಾಟಕ ಗ್ರಾಮಸೂಚಿ, ೧೯೮೩, (ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ) ಬೆಂಗಳೂರು.
* ಕಲಬುರ್ಗಿ ಎಂ.ಎಂ., ೧೯೯೪, ಕರ್ನಾಟಕ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಕಲಬುರ್ಗಿ ಎಂ.ಎಂ., ೨೦೧೦, ಕನ್ನಡನಾಮ ವಿಜ್ಞಾನ, ಸಪ್ನ ಬುಕ್‌ಹೌಸ್, ಬೆಂಗಳೂರು.
* ಕೆಮ್ತೂರು ರಘುಪತಿಭಟ್ಟ, ೧೯೭೯, ತುಳುನಾಡಿನ ಸ್ಥಳನಾಮಗಳು
* ಗಿರಿಜಾ ಟಿ, ಚಿತ್ರದುರ್ಗ ಜಿಲ್ಲಾದರ್ಶಿನಿ, ರೇಖಾ ಪ್ರಕಾಶನ, ಬೆಂಗಳೂರು.
* ಗುರುಮೂರ್ತಿ ಪೆಂಡಕೂರು, ೨೦೦೬, ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಚಿಕ್ಕಣ್ಣ ಯಣ್ಣೆಕಟ್ಟೆ, ೨೦೦೮, ಸಿರಾ ಸೀಮೆಯ ಇತಿಹಾಸ ಮತ್ತು ಸಂಸ್ಕೃತಿ, ದಶಮಾನೋತ್ಸವ ಸಮಿತಿ ಪ್ರಕಾಶನ.
* ಚಿದಾನಂದಮೂರ್ತಿ ಎಂ., ೧೯೮೧, ವಾಗಾರ್ಥ, ಭಾಷ್ಕೆ ಪ್ರಕಾಶನ, ಬೆಂಗಳೂರು.
* ಜವರೇಗೌಡ ದೇ., ೧೯೯೦, ಸ್ಥಳನಾಮ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಕವಿಶೈಲಾ.
* ಜಾಜಿ ದೇವೇಂದ್ರಪ್ಪ, ೨೦೦೪, ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ವಿಕಾಸ ಪ್ರಕಾಶನ, ಹೊಸಪೇಟೆ.
* ತಿಪ್ಪೇಸ್ವಾಮಿ ಟಿ.ಜೆ., ೨೦೦೮, ಗೆಳೆಯರ ವಾಣಿ, ಬಿ.ಡಿ.ಓ. ಕಚೇರಿ ಮುಂಭಾಗ, ಚಿತ್ರದುರ್ಗ ರಸ್ತೆ, ಚಳ್ಳಕೆರೆ.
* ದೇಶಪಾಂಡೆ, ೨೦೦೭, ಕರ್ನಾಟಕದ ಸ್ಥಳನಾಮಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ನಾರಾಯಣ ಕೆ.ವಿ. (ಸಂ), ೧೯೯೯, ಸ್ಥಳನಾಮಗಳ ಪರಿವರ್ತನೆ ಮತ್ತು ಪ್ರಭಾವ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ನಾರಾಯಣ ಕೆ.ವಿ. (ಸಂ), ೨೦೦೦, ವ್ಯಕ್ತಿನಾಮಗಳ ಸ್ವರೂಪ ಮತ್ತು ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಮಂಜುನಾಥ ಬೇವಿನಕಟ್ಟಿ, ೨೦೧೬, ಜಾನಪದ ಕರ್ನಾಟಕ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಲಕ್ಷ್ಮಣ್ ತೆಲಗಾವಿ, ಎಸ್. ದೊಡ್ಡೇರಿ ಕದನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ವಿಶ್ವನಾಥ, ೧೯೯೬, ಸಕಲೇಶಪುರ ಪರಿಸರದ ಸ್ಥಳನಾಮಗಳು, ದೇವಿ ಪ್ರಕಾಶನ, ಮೈಸೂರು.

* ವಿಶ್ವನಾಥ, ೨೦೦೦, ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ, ದೇವಿ ಪ್ರಕಾಶನ.

* ವೀರೇಶ್, ೨೦೦೬, ಬಳ್ಳಾರಿ ತಾಲೂಕಿನ ಸ್ಥಳನಾಮಗಳು, ಜ್ಞಾನಭಾರತಿ ಪ್ರಕಾಶನ, ಕಡೂರು.

* ಶಂ.ಬಾ ಜೋಶಿ, ೧೯೯೫, ಎಡೆಗಳು, ಸಂವಹನ ಪ್ರಕಾಶನ, ಮೈಸೂರು.

* ಶಂ.ಬಾ ಜೋಶಿ, ಕಂನುಡಿಯ ಜೀವಾಳ, (ಶಂಬಾ ಸಮಗ್ರ ಸಂಪುಟ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

* ಸಣ್ಣ ಪಾಪಯ್ಯ, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, ಬಂಡಾರ ಪ್ರಕಾಶನ, ಮಸ್ಕಿ.

* ಸೇಡಿಯಾಪು ಕೃಷ್ಣಭಟ್ಟ, ೧೯೭೫, ಕೆಲವು ದೇಶನಾಮಗಳು, ಸಾಹಿತ್ಯ ಸಂಘ, ಮಣಿಪಾಲ.

ಕನ್ನಡ ನಿಘಂಟುಗಳು

* ಸಂಕ್ಷಿಪ್ತ ಕನ್ನಡ ನಿಘಂಟು, ೨೦೦೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

* ಕನ್ನಡ ರತ್ನಕೋಶ, ೨೦೦೪, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

* ಕರ್ನಾಟಕ ಗ್ರಾಮಸೂಚಿ, ೧೯೭೦, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

❖❖❖

ವಕ್ತೃವಿವರ

ಕ್ರ.ಸಂ.	ಹೆಸರು	ವಯಸ್ಸು	ವಿದ್ಯಾರ್ಹತೆ	ಉದ್ಯೋಗ	ಊರು
೧.	ಆರ್.ವಿ.ರುದ್ರಮುನಿ	೬೨	ಬಿಎಡ್	ಶಿಕ್ಷಕರು	ಹಾಲಿಗೊಂಡನಹಳ್ಳಿ
೨.	ಕರಿಯಪ್ಪ ಮಾಳಗಿ	೫೦	ಪಿಎಚ್‌ಡಿ	ಉಪನ್ಯಾಸಕರು	ಚಿತ್ರದುರ್ಗ
೩.	ಚಿದಾನಂದಪ್ಪ	೬೫	೩ನೇ ತರಗತಿ	ಅಂಗಡಿ ಮಾಲೀಕ	ಅಜ್ಜನಹಳ್ಳಿ
೪.	ರುದ್ರಮುನಿಯಪ್ಪ	೫೧	ಬಿಎಡ್	ಶಿಕ್ಷಕರು	ಅರವಿಗೊಂಡನಹಳ್ಳಿ
೫.	ಈರಣ್ಣ	೪೫	೮ನೇ ತರಗತಿ	ವ್ಯವಸಾಯ	ಹನುಮಂತನಹಳ್ಳಿ
೬.	ಮಂಜಣ್ಣ	೪೦	ಡಿಎಡ್	ಶಿಕ್ಷಕರು	ಮುಸ್ಸಮುದ್ರ
೭.	ನೀಲಕಂಠಪ್ಪ	೭೬	೪ನೇ ತರಗತಿ	ಮಾಜಿ ಸದಸ್ಯ	ವಿಡಪನಕುಂಟೆ
೮.	ಸಿ. ಭೀಮಸೇನ	೫೬	೯ನೇ ತರಗತಿ	ವ್ಯವಸಾಯ	ದ್ಯಾವರನಹಳ್ಳಿ
೯.	ವಸಂತಕುಮಾರ	೪೯	ಬಿಇ	ಇಂಜಿನಿಯರಿಂಗ್	ಸೂರನಹಳ್ಳಿ
೧೦.	ವಿನೋದಸ್ವಾಮಿ	೫೨	ಎಂಎ	ಗೃಹಿಣಿ	ತಿಮ್ಮಪ್ಪಯ್ಯನಹಳ್ಳಿ
೧೧.	ಪಿ.ವಿ.ಬೊಮ್ಮಯ್ಯ	೭೦	ಬಿಎಸ್‌ಸಿ	ಅರೆಕಾಲಿಕ	ಗೌರಸಮುದ್ರ
೧೨.	ಜಿ.ವಿ.ಸಿರಿಯಪ್ಪ	೭೫	೭ನೇ ತರಗತಿ	ಕೂಲಿ	ಬೊಮ್ಮಸಮುದ್ರ
೧೩.	ಶ್ರೀನಿವಾಸ	೫೦	೧೦ನೇ ತರಗತಿ	ಗ್ರಾ.ಪಂ.ಸದಸ್ಯರು	ಬಂಡೆತಿಮ್ಮಲಾಪುರ
೧೪.	ಹಂಪಕ್ಕ	೨೮	ಪಿಯುಸಿ	ಅಂಗನವಾಡಿ	ಕೋಡಿಹಳ್ಳಿ
೧೫.	ತಿಪ್ಪೇಸ್ವಾಮಿ	೩೫	೧೦ನೇ ತರಗತಿ	ಗ್ರಾಪಂ.ಕಾರ್ಯದರ್ಶಿ	ಕಾಲುವೆಹಳ್ಳಿ
೧೬.	ಶ್ರೀನಿವಾಸ	೨೯	ಬಿಎಡ್	ಅತಿಥಿ ಶಿಕ್ಷಕರು	ಓಬಣ್ಣನಹಳ್ಳಿ
೧೭.	ರವಿ ಟಿ.	೨೮	ಎಂಎಬಿಎಡ್	ಗ್ರಾಪಂ.ಸದಸ್ಯರು	ಮೈಲನಹಳ್ಳಿ
೧೮.	ಮಂಜುನಾಥ	೪೫	೧೦ನೇ ತರಗತಿ	ಟೈಲರ್	ಖ್ಯಾತಗೊಂಡನಹಳ್ಳಿ
೧೯.	ನೇತ್ರಾಬಾಯಿ	೨೯	ಪಿಯುಸಿ	ಅಂಗನವಾಡಿ	ಚನ್ನಗನಹಳ್ಳಿ
೨೦.	ಮಾಯಣ್ಣ	೫೫	ಡಿಎಡ್	ಶಿಕ್ಷಕರು	ದೊಡ್ಡ ಉಳ್ಳಾರ್ಥಿ
೨೧.	ವೀರಭದ್ರಪ್ಪ	೪೫	೧೦ನೇ ತರಗತಿ	ಮಾಜಿಸದಸ್ಯರು	ಪಲಸೆ

೨೨.	ಧರ್ಮಚಂದ್ರ	೨೮	ಎಂಎಬಿಎಡ್	ಅತಿಥಿ ಶಿಕ್ಷಕರು	ಗಜಗನಹಳ್ಳಿ
೨೩.	ರುದ್ರಮುನಿ	៥೮	ಬಿಎಡ್	ಶಿಕ್ಷಕರು	ಮೀರಸಾಬಿಹಳ್ಳಿ
೨೪.	ತಿಪ್ಪಣ್ಣ	೩೯	ಬಿಎಸ್‌ಸಿ	ಅತಿಥಿ ಶಿಕ್ಷಕರು	ಸೋಮಗುದ್ದು
೨೫.	ಮಂಜಣ್ಣ ಎಸ್	೩೨	ಪಿಎಚ್‌ಡಿ	ಉಪನ್ಯಾಸಕರು	ಯಾದಲಗಟ್ಟೆ
೨೬.	ಮೋಹನ್‌ಕುಮಾರ್	೩೩	ಎಂಎಬಿಎಡ್	ಅಥಿತಿ ಶಿಕ್ಷಕರು	ದೇವರೆಡ್ಡಿಹಳ್ಳಿ
೨೭.	ಮಂಜುಳ	೨೯	೧೦ನೇತರಗತಿ	ಆಶಾಕಾರ್ಯಕರ್ತೆ	ವಡೇರಹಳ್ಳಿ
೨೮.	ಬಸವಲಿಂಗಣ್ಣ	೪೫	ಬಿಎಡ್	ಶಿಕ್ಷಕರು	ಲಕ್ಷ್ಮಿಪುರ
೨೯.	ತಿಪ್ಪೇರುದ್ರಯ್ಯ	೩೪	ಎಂಎಬಿಎಡ್	ಉಪನ್ಯಾಸಕರು	ಪರಶುರಾಂಪುರ
೩೦.	ಡಾ.ಆರ್.ಮಹೇಶ್	៥೦	ಪಿಎಚ್‌ಡಿ	ಉಪನ್ಯಾಸಕರು	ಚಳ್ಳಕೆರೆ
೩೧.	ಶಿವಾನಂದಯ್ಯ	೫೮	ಎಂಎ ಬಿಎಡ್	ಮುಖ್ಯ ಶಿಕ್ಷಕರು	ಚಳ್ಳಕೆರೆ

ಸ್ಥಳನಾಮಗಳ ಪಟ್ಟಿ

ಅರವಿಗೊಂಡನಹಳ್ಳಿ

ಅಮರಾಪುರ

ಕಡದರಹಳ್ಳಿ

ಕರಿಕೆರೆ

ಕೆರೆಹಾಗಳಹಳ್ಳಿ

ಕೋಡಿಹಳ್ಳಿ

ಕ್ಯಾತಗೊಂಡನಹಳ್ಳಿ

ಕೋಟಕೆರೆ

ಗಿರಿಯಮ್ಮನಹಳ್ಳಿ

ಗೊಲ್ಲರಹಳ್ಳಿ

ಗೌರೀಪುರ

ಚಿತ್ರನಾಯ್ಕನಹಳ್ಳಿ

ಚಿಕ್ಕಮದರೆ

ಚೆನ್ನಮ್ಮನಾಗತಿಹಳ್ಳಿ

ತಳಕಿನಗುಡ್ಡ

ತಿಪ್ಪಗೊಂಡನಹಳ್ಳಿ

ದೊಡ್ಡೇರಿ

ದ್ಯಾವರನಹಳ್ಳಿ

ನಾಗಗೊಂಡನಹಳ್ಳಿ

ಪಗಡಲಬಂಡೆ

ಅಜ್ಜನಹಳ್ಳಿ

ಓಬಣ್ಣನಹಳ್ಳಿ

ಎರಡುಕೆರೆ

ಕಸವಿಗೊಂಡನಹಳ್ಳಿ

ಕೋಟಗೆರೆ

ಕ್ಯಾದಿಗುಂಟೆ

ಕಾಲುವೆಹಳ್ಳಿ

ಖುದಾಪುರ

ಗೆಜ್ಜೆಗಾನಹಳ್ಳಿ

ಗೌರಸಮುದ್ರ

ಗೌಡಗೆರೆ

ಚಿತ್ರನಾಯ್ಕನಹಳ್ಳಿ

ಚೇಲಿಮೆಯ್ಯನಹಳ್ಳಿ

ಜಡೆಕುಂಟೆ

ತಿಮ್ಮಣ್ಣನಹಳ್ಳಿ

ದೇವರಹಳ್ಳಿ

ದಾಸರಮುತ್ತಿನಹಳ್ಳಿ

ನೇರ್ಲಗುಂಟೆ

ನಾರಾಯಣಪುರ

ಪರಶುರಾಂಪುರ

ಭರಮಸಾಗರ

ಬೊಮ್ಮಸಮುದ್ರ

ಮನ್ನೆಕೋಟೆ

ಯಾದಲಗಟ್ಟೆ

ರೆಡ್ಡಿಹಳ್ಳಿ

ವಡೇರಹಳ್ಳಿ

ವಿಡುಪನಕುಂಟೆ

ವೀರದಿಮ್ಮವ್ವನಹಳ್ಳಿ

ಸಿದ್ದೇಶ್ವರನದುರ್ಗ

ಸೋಮಗುದ್ದು

ಹನುಮಂತನಹಳ್ಳಿ

ಹೊಟ್ಟೆಪ್ಪನಹಳ್ಳಿ

ಬೇಡರೆಡ್ಡಿಹಳ್ಳಿ

ಮರಿಕುಂಟೆ

ಮಿರಸಾಬಿಹಳ್ಳಿ

ರಂಗವ್ವನಹಳ್ಳಿ

ಲಕ್ಷ್ಮೀಪುರ

ವಲಸೆ

ವಿಶ್ವಾಥಪುರ

ಸಿದ್ದಾಪುರ

ಸಾಣಿಕೆರೆ

ಸೂರನಹಳ್ಳಿ

ಹಿರೇಹಳ್ಳಿ

ಹಾಲಿಗೊಂಡನಹಳ್ಳಿ

ಚಳ್ಳಕೆರೆ ತಾಲ್ಲೂಕು
(ನಗರ ಮತ್ತು ಗ್ರಾಮಾಂತರ)
ಗ್ರಾಮಗಳು

ಅಮೃತಾಪುರ
ಅಜ್ಜನಹಳ್ಳಿ
ಆಲಗೊಂಡನ ಹಳ್ಳಿ
ಐಯ್ಯಗರ್ಲ ಹಳ್ಳಿ
ಓಬಯ್ಯನ ಹಟ್ಟಿ
ಓಬಳಾಪುರ
ಓಬಲಾಪುರ
ಓಬಲಾಪುರ ಕಾವಲು
ಓಬೇನಹಳ್ಳಿ
ಓಬಣ್ಣನ ಹಳ್ಳಿ
ಓಬಣ್ಣನ ಹಳ್ಳಿ ಕಾವಲು
ಕಲಮರ ಹಳ್ಳಿ
ಕಡೆಹುಡೆ
ಕಮ್ಮತ ಮರಿಕುಂಟೆ
ಕಂಪ್ಲಿ ಸಾಗರ
ಕನ್ನೇನ ಹಳ್ಳಿ
ಕರಿಕೆರೆ
ಕಸವಿಗೊಂಡನಹಳ್ಳಿ
ಕಸ್ತೂರಿ ತಿಮ್ಮನಹಳ್ಳಿ
ಕತ್ರಿಕೇನ ಹಳ್ಳಿ
ಕಾಲುವೆ ಹಳ್ಳಿ
ಕಾಟಮ್ಮ ದೇವರ ಕೋಟೆ
ಕಾಟವ್ವನ ಹಳ್ಳಿ
ಕುರುಡಿ ಹಳ್ಳಿ
ಕುಂದಾಪುರ (ಖುದಾಪುರ
ಕೆರೆಯಾಗಳ ಹಳ್ಳಿ
ಕೋನಿಗರ ಹಳ್ಳಿ
ಕೋನಿಗರ ಹಳ್ಳಿ ಕಾವಲು
ಕೊರಡ ಹಳ್ಳಿ
ಕೊರ್ಲಕುಂಟೆ
ಕೌಲನ ಹಳ್ಳಿ
ಕ್ಯಾದಿಗುಂಟೆ
ಕ್ಯಾತಗೊಂಡನ ಹಳ್ಳಿ
ಕ್ಯಾತನ ಮಲೆ
ಗಂಜಿಗುಂಟೆ
ಗಜಗಾನಹಳ್ಳಿ
ಘಟಪರ್ತಿ
ಗಿಡ್ಡನ ಹಳ್ಳಿ
ಗಿಡ್ಡಾಪುರ
ಗಿರಿಯಮ್ಮನ ಹಳ್ಳಿ
ಗುಂಟಕೋಲಮ್ಮನ ಹಳ್ಳಿ
ಗುಡಿಹಳ್ಳಿ

ಗೊಲ್ಲಹಳ್ಳಿ

ಗೋಪನಹಳ್ಳಿ

ಗೊರ್ಲಕಟ್ಟೆ

ಗೊರ್ಲತ್ತು

ಗೋಸಿಕೆರೆ

ಗೋವಿನಹಾಳು

ಗೌಡಗೆರೆ

ಗೌರಸಮುದ್ರ

ಗೌರಸಮುದ್ರ ಕಾವಲು

ಗೌರಿಪುರ

ಗೌರಿಪುರ

ಚಳ್ಳಕೆರೆ

ಚೆನ್ನಗಾನಹಳ್ಳಿ

ಚೆನ್ನಮ್ಮನಾಗ್ತಿ ಹಳ್ಳಿ

ಚೆನ್ನಮ್ಮನಾಗ್ತಿ ಹಳ್ಳಿ ಕಾವಲು

ಚಟ್ಟೆಕಂಬ

ಚಲುಮೇಯನಹಳ್ಳಿ

ಚಿಕ್ಕಬದಿ ಹಳ್ಳಿ

ಚಿಕ್ಕ ಚೆಲ್ಲೂರು

ಚಿಕ್ಕಳ್ಳಿ

ಚಿಕ್ಕ ಮಧಿರೆ

ಚಿಕ್ಕಮ್ಮನ ಹಳ್ಳಿ

ಚಿಕ್ಕೇನ ಹಳ್ಳಿ

ಚಿತ್ರಯ್ಯನ ಹಳ್ಳಿ

ಚಾಳುಕೆರೆ

ಚೌಳೂರು

ಚೌಳೂರು ಕಾವಲು

ಜಡೆಕುಂಟೆ

ಜನ್ನೇನಹಳ್ಳಿ

ಜಂಗಮರ ಹಳ್ಳಿ

ಜಾಜೂರು

ಜಾಜೂರು ಕಾವಲು

ಜುಂಜಿರಗುಂಟೆ

ಜೋಗಿ ಹಟ್ಟಿ

ತಳಕು

ತಿಮ್ಮಣ್ಣನ ಹಳ್ಳಿ

ತಿಮ್ಮಣ್ಣನ ಹಳ್ಳಿ

ತಿಮ್ಮಣ್ಣನಾಯ್ಕನ ಕೋಟೆ

ತಿಮ್ಮಪ್ಪಯ್ಯನ ಹಟ್ಟಿ

ತಿಪ್ಪಗೊಂಡನ ಹಳ್ಳಿ

ತಿಪ್ಪಯ್ಯನಕೋಟೆ

ತಿಪ್ಪಾರೆಡ್ಡಿ ಹಳ್ಳಿ

ತೊರೆಬೀರಿನ ಹಳ್ಳಿ

ತೊರೆ ಕೋಲಮ್ಮನ ಹಳ್ಳಿ

ದಾಸರ ಮುತ್ತೇನ ಹಳ್ಳಿ

ದುಗ್ಗಾವರ

ದೇವರ ಹಳ್ಳಿ

ದೇವರ ಹಳ್ಳಿ

ದೇವರೆಡ್ಡಿ ಹಳ್ಳಿ
ದ್ಯಾವರ್ಸ್ನ ಹಳ್ಳಿ
ದೊಡ್ಡ ಬಾದಿ
ದೊಡ್ಡ ಬೀರನ ಹಳ್ಳಿ
ದೊಡ್ಡ ಚೆಲ್ಲೂರು
ದೊಡ್ಡ ಉಳ್ಳಾರ್ಥಿ
ದೊಡ್ಡ ಉಳ್ಳಾರ್ಥಿ ಕಾವಲು
ದೊಡ್ಡೇರಿ
ದೊಣೆ ಹಳ್ಳಿ
ದೊಣೆ ಹಳ್ಳಿ ಕಾವಲು
ನಗರಂಗೆರೆ
ನಲ್ಲೂರು ಹಳ್ಳಿ
ನನ್ನಿವಾಳ
ನಲಗೇತನ ಹಟ್ಟಿ
ನಾಗಗೊಂಡನ ಹಳ್ಳಿ
ನಾಯಕನ ಹಟ್ಟಿ
ನೇರ್ಲಗುಂಟೆ
ಪಗಡಲಬಂಡೆ
ಪಗಡಲಬಂಡೆ ಕಾವಲು
ಪರಶುರಾಮಪುರ
ಪರಶುರಾಮಪುರ
ಪಿಲ್ಲ ಹಳ್ಳಿ
ಪುರ್ಲ ಹಳ್ಳಿ
ಪುಟ್ಲೋರ ಹಳ್ಳಿ

ಪುಟ್ಲೋರ ಹಳ್ಳಿ ಕಾವಲು
ಬಡವನ ಹಳ್ಳಿ
ಬಡವನ ಹಳ್ಳಿ ಕಾವಲು
ಬನವಿಗೊಂಡನ ಹಳ್ಳಿ
ಬಂಡೆ ತಿಮ್ಮಲಾಪುರ
ಬಂಜಿಗೆರೆ
ಬಸಾಪುರ
ಭರಮಪುರ
ಭರಮಸಾಗರ
ಬಾಲೇನ ಹಳ್ಳಿ
ಬ್ಯಾಡ ರೆಡ್ಡಿ ಹಳ್ಳಿ
ಭೀಮನ ಕೆರೆ
ಭೀಮನಗೊಂಡನ ಹಳ್ಳಿ
ಬುಕ್ಲೇರ ಹಳ್ಳಿ
ಬುಡ್ಲ ತಟ್ಟ (ಬುಡ್ನಟ್ಟಿ)
ಬುಕ್ಕಾಂಬುದಿ
ಬೊಂಬೇರ ಹಳ್ಳಿ
ಬೊಮ್ಮನ ಕುಂಟೆ
ಬೊಮ್ಮ ಸಮುದ್ರ
ಭೋಗನ ಹಳ್ಳಿ
ಭೈನಾಯ್ಕನ ಹಟ್ಟಿ
ಎನ್. ಮಹದೇವಪುರ
ಪಿ. ಮಹದೇವಪುರ
ಮಲೆ ಬೋರನ ಹಟ್ಟಿ

ಮಲ್ಲಸಮುದ್ರ
ಮಲ್ಲವ್ವನ ಹಳ್ಳಿ
ಮಲ್ಲೂರ ಹಟ್ಟಿ
ಮಲ್ಲೂರ ಹಟ್ಟಿ
ಮನ್ನೆ ಕೋಟೆ
ಮರಿಕುಂಟೆ
ಮತ್ಸಮುದ್ರ
ಮೀರಾಸಾಬಿ ಹಳ್ಳಿ
ಮುಷ್ಠಲಗುಮ್ಮಿ
ಮೇಡೂರು
ಮೇಡೂರು ಕಾವಲು
ಮೈಲನಹಳ್ಳಿ
ಯಲಗಟ್ಟ
ಯಾದಲಗಟ್ಟ
ರಂಗವ್ವನ ಹಳ್ಳಿ
ರಾಮದುರ್ಗ
ರಾಮಸಾಗರ
ರಾಮಜೋಗಿ ಹಳ್ಳಿ
ರೆಡ್ಡಿ ಹಳ್ಳಿ
ರೇಖಲಗೆರೆ
ರೇಖಲಗೆರೆ ಕಾವಲು
ರೇಣುಕಾಪುರ
ಲಕುಮಗೊಂಡನ ಹಳ್ಳಿ
ಲಕ್ಷ್ಮೀಪುರ
ಲಿಂಗವ್ವನ ಹಳ್ಳಿ
ವಡೇರ ಹಳ್ಳಿ
ವಲಸೆ
ವರವು
ವರವೂ ಕಾವಲು
ವೀರದಿಮ್ಮನ ಹಳ್ಳಿ
ವಿಡಪನ ಕುಂಟೆ
ವಿಶ್ವನಾಥನಪುರ
ವಿಶ್ವೇಶ್ವರಪುರ
ಹರವಿಗೊಂಡನ ಹಳ್ಳಿ
ಹಳಿಗೊಂಡನ ಹಳ್ಳಿ
ಹನುಮಂತನ ಹಳ್ಳಿ
ಹಿರೆ ಹಳ್ಳಿ
ಹಿರೆಕೆಕೆ ಕಾವಲು
ಹುಲಿಕುಂಟೆ
ಹೆಗ್ಗೆರೆ
ಹೆಂಜಮುತ್ತೇನ ಹಳ್ಳಿ
ಹೊಟ್ಟೆಪ್ಪನ ಹಳ್ಳಿ
ಸರ್ಜವ್ವನ ಹಳ್ಳಿ
ಸಾಣಿಕೆರೆ
ಸಿದ್ದಾಪುರ
ಸಿದ್ದೇಶ್ವರನ ದುರ್ಗ
ಸೂರನ ಹಳ್ಳಿ
ಸೋಮಗುದ್ದು

CHALLAKERE GP MAP




CHITRADURGA
TALUKA/TEHSIL MAP
Molakalmuru
Bellary
Andhra Pradesh
Haveri
Davanagere
Challakere
Chitradurga
Tumkur
Holalkere
Hiriyur
Andhra Pradesh
Shimoga
Hosdurga
Tumkur
Chikmagalur
Hassan
Legend
State Boundary
District Boundary
Taluka Tehsil Boundary
Copyright © 2015 www.mapsofindia.com
(Last Updated on 5th Sep 2015)